

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 26 ಸಂಚಿಕೆ 46 ನವೆಂಬರ್ 14, 2004 ಬೆಲೆ ರೂ. 3.00




ಹರಿಯುತ್ತಿದೆ ಎಲ್ಲೆಲ್ಲೂ....
ಸಮಾಜವಾದಿ ಮಹಾನ್‌ಕ್ರಾಂತಿಯ
ಅದಮ್ಯ ಚೇತನ



ಅಡ್ವಾಣಿ & ಕಂಪನಿಗೆ
ಸಿಗಲೇಬೇಕಾದ 'ನ್ಯಾಯ'





ಪೆಟ್ರೋಲ್, ಡೀಸೇಲ್, ಗ್ಯಾಸ್ ಬೆಲೆ ಇಳಿಸಿ

ವಿಜಾಪುರ : ಗೆದ್ದ 'ಸ್ತ್ರೀ' ಶಕ್ತಿ

ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಹೀಗೇಕಾಯಿತು ?

ಇಸ್ರೇಲ್ : ಅಂತರ್ಯುದ್ಧದ ಅಪಾಯ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಪಾಕಿಸ್ತಾನದಲ್ಲಿ ಜನಾರೋಗ್ಯ ಎಂಬುದು ಒಂದು ಕನಸೇ ಆಗಿದೆ. ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿ ನಲುಗುತ್ತಿದೆ

ಪಾಕಿಸ್ತಾನ: ಜನಾರೋಗ್ಯ ಅಲ್ಲಿ/ಇಲ್ಲಿ

ಕ್ರಿಕೆಟ್ ಹಾಗೂ ರಾಜಕೀಯದ ವಿಷಯ ಬಂದಾಗ ಪಾಕಿಸ್ತಾನದ ನಿಲುವಿನ ಬಗ್ಗೆ ನಾವು ಸಾಕಷ್ಟು ತಿಳಿದಿದ್ದೇವೆ. ಯಾವುದೇ ದೇಶದ ಪ್ರಗತಿಯ ವಿಷಯವನ್ನು ಚರ್ಚಿಸುವಾಗ ಆ ದೇಶದ ಆರೋಗ್ಯ ಸಾಧನೆ ಪ್ರಮುಖವಾಗಿರುತ್ತದೆ. ಜನಾರೋಗ್ಯ ಸಾಧನೆಯಲ್ಲಿ ಪಾಕಿಸ್ತಾನ ಸಾಧಿಸುದುದ್ದೇನು ಎಂದು ತಿಳಿಯೋಣವೇ.

ಪಾಕಿಸ್ತಾನ ಸ್ವಾತಂತ್ರ ಪಡೆದಾಗ ಅಲ್ಲಿ ಕೇವಲ ಒಂದೇ ವೈದ್ಯಕೀಯ ಕಾಲೇಜು ಹಾಗೂ ಕೆಲವೇ ವೈದ್ಯರು ಇದ್ದರು. 1970 ರವರೆಗೆ ಅಲ್ಲಿ ಯಾವ ಪ್ರಮುಖ ಬದಲಾವಣೆಯೂ ಆಗಿರಲಿಲ್ಲ. ಅಲ್ಲಿಯ ಸರಕಾರಗಳಲ್ಲಿ ಕೇವಲ ಭುಟ್ಟೋ ಸರಕಾರ ಆರೋಗ್ಯ ತಳರಚನೆ ಸುಧಾರಿಸಲು ಪ್ರಯತ್ನ ಮಾಡಿದರೆ, ಇತರೆ ಸರ್ಕಾರಗಳು ಸಾರ್ವಜನಿಕ ಕ್ಷೇತ್ರದ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ನಂತರದ ದಿನಗಳಲ್ಲಿ 2000 ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಎಂಬ ವಿಶ್ವ ಆರೋಗ್ಯ ಸಂಸ್ಥೆಯ ಘೋಷಣೆಯನ್ನು ಜಾರಿಗೆ ತರಲು ಪ್ರಯತ್ನಿಸಲಾಯಿತು. ಭಾರತದಲ್ಲಿಯಂತೆ ಇಲ್ಲಿಯೂ verticle programme ಗಳು ಜಾರಿಗೆ ಬಂದವು. ಅವುಗಳಲ್ಲಿ ಲಸಿಕೆ, ಕುಟುಂಬ ಯೋಜನೆ, ಮಲ್ಬೇರಿಯಾ ನಿಯಂತ್ರಣ, ಸಾಂಕ್ರಾಮಿಕ ರೋಗಗಳ ಹತೋಟಿ ಮುಂತಾದವು ಇವುಗಳನ್ನು ನಿಯಂತ್ರಿಸಲು ರಾಷ್ಟ್ರೀಯ ಆರೋಗ್ಯ ಸಂಸ್ಥೆ (National Health Institutre) ಅಸ್ತಿತ್ವಕ್ಕೆ ಬಂತು. ಆದರೆ ಜನಾರೋಗ್ಯ ಸಾಧನೆಗೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಜಾರಿಗೆ ಬರಲಿಲ್ಲ. ಇದರಿಂದಾಗಿ 2000 ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಸಾಧಿಸಲಾಗಲಿಲ್ಲ.

ಆರೋಗ್ಯ ಕೇಂದ್ರಗಳನ್ನು ತೆರೆಯಲಾಯಿತು, ಆದರೆ ಇವುಗಳಿಂದ ಜನಾರೋಗ್ಯ ಸುಧಾರಣೆಯಾಗಲಿಲ್ಲ, ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲಾಗಲಿಲ್ಲ, ಜನಾರೋಗ್ಯ ಸುಧಾರಣೆಗೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಸುಧಾರಣೆ ಅತ್ಯಗತ್ಯ. ಪಾಕಿಸ್ತಾನದಲ್ಲಿ ಜನಾರೋಗ್ಯ ವ್ಯವಸ್ಥೆಯನ್ನು ಚರ್ಚಿಸುವಾಗ ಖಾಸಗೀ ಆರೋಗ್ಯ ವ್ಯವಸ್ಥೆ ಪ್ರಾಮುಖ್ಯತೆ ಪಡೆಯುತ್ತದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಆದೇಶದಂತೆ ಪಾಕಿಸ್ತಾನ ಈ ಖಾಸಗೀ ಸಂಸ್ಥೆಗಳ ಬೆಳವಣಿಗೆಗೆ ಪ್ರಾಮುಖ್ಯತೆ ಕೊಟ್ಟಿದೆ. ಈ ಖಾಸಗೀ ಸಂಸ್ಥೆಗಳಿಗೆ ಆರೋಗ್ಯ ಸೇವೆಗಿಂತ ಹಣಗಳಿಸುವುದು ಮುಖ್ಯವಾಗಿದೆ. ಈ ಸಂಸ್ಥೆಗಳಲ್ಲಿ ಚಿಕಿತ್ಸೆ ದುಬಾರಿ ಹಾಗೂ ಅನೇಕ ವೇಳೆ ಅನೈತಿಕ. ಈ ಚಿಕಿತ್ಸೆಗಳು ಸಾಮಾನ್ಯವಾಗಿ ಮಧ್ಯಮ ವರ್ಗದವರಿಗೂ ಎಟಕದಿರುವ ಚಿಕಿತ್ಸೆಗಳಾಗಿವೆ. ಈ ಚಿಕಿತ್ಸೆಗಳನ್ನು ಬಣ್ಣಿಸಲು "ನೀವು ದಕ್ಷತೆಗೆ ಹಣ ಕೊಡುತ್ತೀರಿ" ಎಂದು ಪ್ರಚಾರ ಮಾಡಲಾಗುತ್ತಿದೆ. ಯಾವುದೇ ದೇಶದ ಆರೋಗ್ಯ ಪರಿಸ್ಥಿತಿಯನ್ನು ಬಣ್ಣಿಸಬೇಕಾದರೆ ಆ ದೇಶದ ಜನಾರೋಗ್ಯ ವ್ಯವಸ್ಥೆ ಪ್ರಮುಖವಾಗುತ್ತದೆ. ಖಾಸಗೀ ವ್ಯವಸ್ಥೆಯನ್ನು ಕೆಲವೇ ಜನರು ಉಪಯೋಗಿಸುವುದರಿಂದ ಈ ವ್ಯವಸ್ಥೆ ಜನಾರೋಗ್ಯ ಪರಿಸ್ಥಿತಿಯನ್ನು ಬಿಂಬಿಸಲಾರದು. ಭಾರತದಲ್ಲೂ ಇತ್ತೀಚಿನ ದಿನಗಳಲ್ಲಿ ಖಾಸಗೀ ಆರೋಗ್ಯ ವ್ಯವಸ್ಥೆ ಪ್ರಮುಖ್ಯತೆಯನ್ನು ಪಡೆಯುತ್ತದೆ. ಇದೇ ವೇಳೆಗೆ "ಸರಕಾರಿ ಸೇವೆಗಳು ದಕ್ಷತೆಯಿಂದ ಕೂಡಿಲ್ಲ" ಎಂದು ಹೇಳಲಾಗುತ್ತಿದೆ. ಸರಕಾರ ತನ್ನ ಜವಾಬ್ದಾರಿ ಕಳೆದುಕೊಳ್ಳಲು ಖಾಸಗೀ ಸಂಸ್ಥೆಗಳಿಗೆ ತನ್ನ ಕರ್ತವ್ಯವನ್ನು



ವರ್ಗಾಯಿಸಲಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ. ಜಿ.ಡಿ.ಪಿ.ಯ ಶೇ.0.7 ಹಣವನ್ನು ಆರೋಗ್ಯ ಸುಧಾರಣೆಗೆ ಖರ್ಚು ಮಾಡುತ್ತಿದ್ದಾಗ ಆರೋಗ್ಯ ಸೇವೆಗಳು ಹೇಗೆ ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯ ಎಂದು ಯಾರೂ ಯೋಚಿಸುತ್ತಿಲ್ಲ. ಜನಾರೋಗ್ಯ ಸುಧಾರಣೆಯಲ್ಲಿ ಈ ಖಾಸಗೀ ಆಸ್ಪತ್ರೆಗಳು ಯಾವ ಪ್ರಮುಖ ಪಾತ್ರವನ್ನೂ ವಹಿಸಿಲ್ಲ ಎಂಬುದನ್ನು ಗಮನಿಸಬೇಕಾಗಿದೆ.

ಪಾಕಿಸ್ತಾನ ಔಷಧಿ ಕ್ಷೇತ್ರ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿದೆ. ಇದರಿಂದಾಗಿ ಅನಗತ್ಯ ಹಾಗೂ ಅಪಾಯಕಾರಿ ಔಷಧಿಗಳ ಹಾವಳಿ ಹೆಚ್ಚಾಗಿದೆ. ಅನೇಕ ನಿಷೇಧಿತ ಔಷಧಿಗಳು ಇಲ್ಲಿ ದೊರೆಯುತ್ತಿವೆ. ಈ ಪರಿಸ್ಥಿತಿ ಭಾರತದಲ್ಲಿದ್ದಂತೆ ಇದೆ ಆದರೆ ಭಾರತದಲ್ಲಿ ಔಷಧಿ ಉದ್ಯಮ ಸುಮಾರು ಎಲ್ಲ ಅಗತ್ಯ ಜಾತಿಸೂಚಕ ಔಷಧಿಗಳನ್ನು (generic) ತಯಾರಿಸುತ್ತಿದೆ ಹಾಗೂ ಸ್ವಾವಲಂಭನೆ ಸಾಧಿಸಿವೆ. ಆದರೆ ಈಗ ವಿಶ್ವ ವ್ಯಾಪಾರ ಸಂಘಟನೆಗೆ (wto) ಈ ಔಷಧಿ ಪರಿಸ್ಥಿತಿಯನ್ನು ಅಧೋಗತಿಗೆ ಇಳಿಸುತ್ತಿದೆ.


ಪಾಕಿಸ್ತಾನದಲ್ಲಿ ಆರೋಗ್ಯಕ್ಕೆ ಜಿ.ಡಿ.ಪಿ.ಯ ಶೇ 7 ರಷ್ಟು ಖರ್ಚು ಮಾಡಲಾಗುತ್ತಿದೆ. ಆರೋಗ್ಯ ವ್ಯವಸ್ಥೆ ಪರಿಣಾಮಕಾರಿಯಾಗಬೇಕಾದರೆ ನಾಲ್ಕು ರೋಗಿಗೆ ಒಬ್ಬ ದಾದಿ ಇರಬೇಕು. ಆದರೆ 40 ರೋಗಿಗೆ ಒಬ್ಬ ದಾದಿ ಇರುತ್ತಾಳೆ. ಏಳು ಆಸ್ಪತ್ರೆ ಹಾಸಿಗೆಗಳಿಗೆ ಒಬ್ಬ ವೈದ್ಯನಿರಬೇಕು, ಇಲ್ಲಿ 60 ಹಾಸಿಗೆಗೆ ಒಬ್ಬ ವೈದ್ಯ! ಒಬ್ಬ ವೈದ್ಯ ದಿನಕ್ಕೆ 8 ಗಂಟೆ ಕೆಲಸ ಮಾಡಬಹುದಾಗಿದೆ. ಆದರೆ ಇಲ್ಲಿ 36 ರಿಂದ 73 ಗಂಟೆ ವೈದ್ಯ ಸತತ ಕೆಲಸ ಮಾಡುತ್ತಾನೆ. ಒಂದು ದೇಶ ಆರೋಗ್ಯ ಕ್ಷೇತ್ರದಲ್ಲಿ ಸುಧಾರಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಜನಪರ ಔಷಧಿ ಹಾಗೂ ಆರೋಗ್ಯ ನೀತಿಯನ್ನೂ ಹೊಂದಿರಬೇಕು. ಇವುಗಳನ್ನು ಪಾಕಿಸ್ತಾನದಲ್ಲೇ ಸಂಪೂರ್ಣ ಕಡೆಗಣಿಸಲಾಗಿರುವುದು ಪಾಕಿಸ್ತಾನದಲ್ಲಿ ಜನಾರೋಗ್ಯವೆಂಬುದು ಒಂದು ಕನಸೇ ಆಗಿದೆ.

ಕಾವೇರಿ ನೀರು-ವಂತಿಗೆ ವಿರೋಧಿಸಿ ಮುಖ್ಯಮಂತ್ರಿ ಮನೆ ಚಲೋ

ಬೆಂಗಳೂರು ನಗರ ಹೊರ ವಲಯದ 7 ನಗರಸಭೆಗಳು ಮತ್ತು ಒಂದು ಪುರಸಭೆ ವ್ಯಾಪ್ತಿಗೆ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗೆ ಮುಂದಾಗಿರುವ ಸರ್ಕಾರಿ ಯೋಜನೆ ಪ್ರಾರಂಭಿಸುವ ಮೊದಲೇ ಬಳಕೆದಾರರಿಂದ ಅವೈಜ್ಞಾನಿಕವಾಗಿ ವಂತಿಗೆ ಸಂಗ್ರಹಿಸಲು ಪ್ರಾರಂಭಿಸಿದೆ.

ಈ ಯೋಜನೆಗೆ ಒಟ್ಟು 658-65 ಕೋಟಿ ರೂ. ವೆಚ್ಚ ನಿರ್ಧರಿಸಿರುವ ಸರ್ಕಾರ -ಬೆಂಗಳೂರು ನೀರು ಸರಬರಾಜು ಮತ್ತು ಒಳಚಂರಡಿ ಮಂಡಳಿ- ಬಳಕೆದಾರರಿಂದ 119-44 ಕೋಟಿ ರೂ. ಸಂಗ್ರಹಿಸಲು ಯೋಜಿಸಿ ಏಳು ನಗರ ಸಭೆ ಮತ್ತು ಒಂದು ಪುರಸಭೆಯ ಎಲ್ಲಾ ನಿವೇಶನದಾರರಿಂದ ವಂತಿಗೆ ಹೆಸರಿನಲ್ಲಿ ಕನಿಷ್ಟ 10,000 ರೂ.ಗಳನ್ನು ಪ್ರತಿ ನಿವೇಶನದಾರರಿಂದ ಪಡೆಯಲು ನಿರ್ಧರಿಸಿದ್ದಾರೆ. ಈ ಲೆಕ್ಕಾಚಾರದಲ್ಲಿ ಸಂಗ್ರಹಿಸಿದರೆ ನಿವೇಶನದಾರರಿಂದಲೇ 750 ಕೋಟಿ ರೂ.ಗೂ ಹೆಚ್ಚು ಹಣ ಸಂಗ್ರಹ ವಾಗುತ್ತದೆ. ಈ ಅವೈಜ್ಞಾನಿಕ ಮತ್ತು ಅಕ್ರಮ ವಂತಿಗೆ ಸಂಗ್ರಹ ವಿರೋಧಿಸಿ, ಕಾವೇರಿ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕೂಡಲೇ ಪ್ರಾರಂಭಿಸಬೇಕೆಂದು ಒತ್ತಾಯಿಸಿ ದಿನಾಂಕ 18-10-2004ರಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಎಲ್ಲಾ ನಗರ ಸಭೆಗಳ ನಿವೇಶನದಾರರ ಮುಖ್ಯಮಂತ್ರಿ ಮನೆಗೆ ಚಲೋ ಪ್ರತಿಭಟನೆ ನಡೆಯಿತು. ಬೆಳಿಗ್ಗೆ 12 ಗಂಟೆಗೆ ಚಿಕ್ಕಲಾಲ್‌ಬಾಗ್ ಬಳಿ ಸೇರಿದ ನಿವೇಶನದಾರರು ನೂರಾರು ಸಂಖ್ಯೆಯಲ್ಲಿ ಶಾಂತಿಯುತವಾಗಿ ಪ್ರಾರಂಭಿಸಿದ ಮೆರವಣಿಗೆಯನ್ನು ಪೊಲೀಸರ ಅನಾವಶ್ಯಕ ತಡೆಯಿಂದಾಗಿ ಅಲ್ಲೇ 30 ನಿಮಿಷಗಳ ಧರಣಿ ನಿವರ್ಾಣವಾಯಿತು. ನಂತರ ರೇಸ್‌ಕೋರ್ಸ್ ಪಕ್ಕದ ಗಾಂಧಿ ಪ್ರತಿಮೆ ಬಳಿ ಮೆರವಣಿಗೆ ಕೊನೆಗೊಂಡಿತು. ಬಹಿರಂಗಸಭೆಯನ್ನು ಉದ್ದೇಶಿಸಿ, ಕಾಂ.ಗೋಪಾಲ್ ಗೌಡ, ಲೀಲಾವತಿ, ಗಂಗಣ್ಣ ಮುಂತಾದವರು ಮಾತನಾಡಿ ಸರ್ಕಾರದ ಈ ಜನವಿರೋಧಿ ಕ್ರಮವನ್ನು ಖಂಡಿಸಿದರು. ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಯನ್ನು ಶೀಘ್ರ ಮಾಡಬೇಕೆಂದು ಒತ್ತಾಯಿಸಿ, ಜನರ ಹಣ ಲೂಟಿ ಮಾಡುವ ವಂತಿಗೆ ವಸೂಲಿ ನಿಲ್ಲಿಸಬೇಕೆಂದು ಒತ್ತಾಯಿಸಿದರು. ನಿಯೋಗದಲ್ಲಿ ತೆರಳಿ ಮನವಿ ಅರ್ಪಿಸಿ ಬಂದ ನಂತರ ಜಿಲ್ಲಾ ಕಾರ್ಯದರ್ಶಿ ಕಾಂ.ಪ್ರಕಾಶ್ ಮಾತನಾಡಿ, ವಂತಿಗೆ ವಸೂಲಿ ಐಎಂಎಫ್ ನಿರ್ದೇಶಿತ ಕ್ರಮ. ಅಭಿವೃದ್ಧಿ ಶುಲ್ಕ ವಸೂಲಿ ಕಾನೂನು ವಿರೋಧಿ ಎಂದು ತೀರ್ಪಿರುವಾಗ, ಈಗ ವಸೂಲಿ ಮಾಡುತ್ತಿರುವುದೂ ಕಾನೂನು ವಿರೋಧಿಯಾಗಿದೆ ಆದ್ದರಿಂದ ವಂತಿಗೆ ವಸೂಲಿ ತಕ್ಷಣ ನಿಲ್ಲಿಸಬೇಕೆಂದು ಒತ್ತಾಯಿಸಿದರು. ಮುಖ್ಯಮಂತ್ರಿಗಳ ಪರವಾಗಿ ಅವರ ಆಪ್ತ ಕಾರ್ಯದರ್ಶಿಗಳು ಸುಮಾರು 20 ಸಾವಿರ ನಿವೇಶನದಾರರ ಸಹಿಯೊಂದಿಗೆ ಮನವಿ ಪತ್ರ ಸ್ವೀಕರಿಸಿ ಮುಖ್ಯಮಂತ್ರಿ ಮತ್ತು ನಗರಾಭಿವೃದ್ಧಿ ಸಚಿವರೊಂದಿಗೆ ನಿಯೋಗ ಭೇಟಿಗೆ ಕಾಲಾವಕಾಶ ಕಲ್ಪಿಸುವುದಾಗಿ ತಿಳಿಸಿದರು. ಈ ಕಾರ್ಯಕ್ರಮ ಪೂರ್ವಬಾವಿಯಾಗಿ ಎಲ್ಲಾ ನಗರಸಭೆಗಳ ವ್ಯಾಪ್ತಿಯಲ್ಲಿ ಸಹಿ ಸಂಗ್ರಹ ಚಳುವಳಿ ಆಟೋ ಪ್ರಚಾರ ಬೀದಿಬದಿ ಸಭೆಗಳನ್ನು ಏರ್ಪಡಿಸಲಾಗಿತ್ತು.

ಮುಖ್ಯಮಂತ್ರಿಗಳ ಮನೆಗೆ ಹೋಗದಂತೆ ತಡೆದಾಗ ಆರಂಭಗೊಂಡ ಧರಣಿ



ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 9, 2004**
  ಯುವಜನರ ರ್‍ಯಾಲಿಯನ್ನು ಕಡೆಗಣಿಸಿರುವುದನ್ನು ವಿರೋಧಿಸಿ ದೂರದರ್ಶನ ಕೇಂದ್ರದ ಎದುರು ಡಿವೈಎಫ್ಐ ಪ್ರತಿಭಟನೆ.
- **ನವೆಂಬರ್ 14,2004**
  ಸಿಪಿಐ(ಎಂ) - ಶ್ರೀರಾಂಪುರ (ಬೆಂಗಳೂರು) ಪ್ರಾದೇಶಿಕ ಸಮ್ಮೇಳನದ ಅಂಗವಾಗಿ ಸಾರ್ವಜನಿಕ ಸಭೆ - ಸಂಜೆ 5.30 ಕ್ಕೆ, ಬಂಡಿ ರೆಡ್ಡಿ ವೃತ್ತ
- **ನವೆಂಬರ್ 17,2004**
  ಮಹಿಳೆಯರಿಗೆ ರಾತ್ರಿ ಪಾಳಿ ಕೆಲಸ ನಿಷೇಧ, ಸಮಾನ ಕೂಲಿ - ಸಮಾನ ಅವಕಾಶಕ್ಕೆ ಒತ್ತಾಯಿಸಿ ದುಡಿಯುವ ಮಹಿಳೆಯರ ರ್‍ಯಾಲಿ - ನವದೆಹಲಿ
- **ನವೆಂಬರ್ 18-21, 2004**
  ಎಐಡಿಡಬ್ಲ್ಯೂ ಅಖಿಲ ಭಾರತ ಸಮ್ಮೇಳನ, ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ರವರಿಂದ ಉದ್ಘಾಟನೆ, ಒರಿಸ್ಸಾದ ಭುವನೇಶ್ವರದಲ್ಲಿ
- **ಡಿಸೆಂಬರ್ 2, 2004**
  ಸಿಇಟಿ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸಿ ಎಸ್‌ಎಫ್‌ಐನಿಂದ ಸಂಸತ್ ಚಲೋ

ಕಣ್ಣೊರೆಸುವ ಪ್ಯಾಕೇಜ್ ?

ನಾಗರೀಕರ ಸನ್ಮಾನ, ವಕೀಲರಿಂದ ಅಭಿನಂದನೆ ತಗೊಳ್ಳಲು ಹೋಗಿದ್ದ ಮುಖ್ಯಮಂತ್ರಿಗಳು ಅತ್ಯಂತ ತರಾತುರಿಯಲ್ಲಿ ನವೆಂಬರ್ 2 ರಂದು ಕಲಬುರ್ಗಿಯಲ್ಲಿ ಉನ್ನತ ಅಧಿಕಾರಿಗಳ ಸಭೆ ನಡೆಸಿ 508 ಕೋಟಿ ರೂಪಾಯಿಯ 'ಅಭಿವೃದ್ಧಿ'ಯ ಪ್ಯಾಕೇಜ್ ಪ್ರಕಟಿಸಿಬಿಟ್ಟಿದ್ದಾರೆ. ಇದನ್ನು ತವರು ಜಿಲ್ಲೆಯ ಮೇಲೆ ಪ್ರೀತಿ ಎಂದು ಕರೆಯಲಾಗುತ್ತಿದೆ. ಇಂತಹ ನೂರಾರು ಕೋಟಿ ರೂಪಾಯಿಗಳ ಪ್ಯಾಕೇಜನ್ನು ಪ್ರಕಟಿಸುವಾಗ ಅಂತಹ ಹಣ ಬಿಡುಗಡೆ ಮಾಡಲು ಸರ್ಕಾರದ ಬಜೆಟ್‌ನಲ್ಲಿ ಇದೆಯೋ ಇಲ್ಲವೇ? ಆದ್ಯತೆಗಳೇನು ಎಂಬ ಬಗ್ಗೆ ಪೂರ್ವಭಾವಿ ಚರ್ಚೆ ಗಂಭೀರವಾಗಿ ನಡೆದಿದ್ದು-ಅದರ ಜಾರಿಯ ಖಾತರಿ ಇಲ್ಲವಾಗಿದೆ. ಹೀಗಾಗಿ ಇಂತಹ 'ಪ್ಯಾಕೇಜ್' ಕಾರ್ಯಸಾಧ್ಯತೆಯ ಬಗ್ಗೆ ಅನುಮಾನ ಮೂಡುತ್ತದೆ.

ಹೈದರಾಬಾದ್- ಕರ್ನಾಟಕ- ಉತ್ತರಕರ್ನಾಟಕ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಖ್ಯಮಂತ್ರಿಗಳು ಖಂಡಿಸಿದ್ದಾರೆ. ನಾಡು ಒಡೆಯುವ ಮಾತು ಸಲ್ಲದು ಎಂದಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶ ಹಿಂದುಳಿದಿರುವುದರಿಂದ ಅದರ ಅಭಿವೃದ್ಧಿಗಾಗಿ ಈ ಪ್ಯಾಕೇಜ್ ಎಂದಿದ್ದಾರೆ. ಇದರಲ್ಲಿ ಜೇವರ್ಗಿ ಶಹಪುರ ಪ್ರದೇಶಗಳ ಮಲ್ಲಾಬಾದ್ ಹಾಗೂ ಇಟಗಿ-ಸಂಗಮ್ ಏತ ನೀರಾವರಿಗೆ 288.87 ಕೋಟಿ ಹಣ ಘೋಷಿಸಿರುವುದನ್ನು ಬಿಟ್ಟರೆ ಉಳಿದದ್ದು ರಸ್ತೆ ಸೇತುವೆ, ಕಛೇರಿ ನಗರ



ಸುಂದರೀಕರಣವೇ ಆಗಿದೆ. ಇದು ಜಾರಿಯಾದರೆ ಸ್ವಲ್ಪ ಪ್ರಗತಿ ಕಾಣಬಹುದು. ಆದರೆ ಈ ಭಾಗದ ಜನತೆಗೆ ಉದ್ಯೋಗ ಸೃಷ್ಟಿಸುವಂತಹ, ಉದ್ಯೋಗ ಉಳಿಸುವಂತಹ ಯೋಜನೆಗಳನ್ನೇ ಆದ್ಯತೆಯನ್ನಾಗಿ ಪರಿಗಣಿಸಬೇಕಿತ್ತು. ಅವನತಿಯಲ್ಲಿರುವ ಕೈಗಾರಿಕೆ - ಕೃಷಿಯ ರಕ್ಷಣೆಗೆ ಪ್ರಾಧಾನ್ಯತೆ ನೀಡಬೇಕಿತ್ತು. ನೀರಾವರಿ ಬಿಟ್ಟರೆ ಉಳಿದೆಲ್ಲಾ ಹಿಂದಿನಿಂದಲೂ ಕೇಳಿಬಂದ ಹಳಸಲು ಅಭಿವೃದ್ಧಿ ಕೆಲಸಗಳೆ. ಹೈದ್ರಾಬಾದ್-ಕರ್ನಾಟಕದ ಅಭಿವೃದ್ಧಿಗೆಂದು ನೂರಾರು ಕೋಟಿ ಇಟ್ಟರೂ ರಸ್ತೆಗೆಂದು ಹಣವೆಲ್ಲಾ ಸೋರಿಹೋಯಿತು. ರಸ್ತೆಗಳೂ ಸುಧಾರಿಸಲಿಲ್ಲ, ಅದು ಅಧಿಕಾರಸ್ತರ ಜೇಬಿಗೆ ಸರಿದು ಅಭಿವೃದ್ಧಿ ಕಂಡಿತು.

ಬದಲಾಗಿ ಜನರಿಗೆ ಆರ್ಥಿಕ ಶಕ್ತಿ ತರಲಿಲ್ಲ. ಕೈಗಾರಿಕೆ- ಕೃಷಿರಂಗದಲ್ಲಿ ಮೂಲಭೂತ ಆರ್ಥಿಕ ಚೇತನ ನೀಡದ ಯೋಜನೆ ಹಣ ನೀಡಿಕೆ ಇಲ್ಲದೇ ಉಳಿದ ಎಲ್ಲವೂ ವ್ಯರ್ಥ ಕಸರತ್ತು ಎನಿಸುತ್ತದೆ.

ಈ ಸಂದರ್ಭದಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ ಇಂತಹ ಹಲವಾರು ಪ್ಯಾಕೇಜ್‌ಗಳ ಪ್ರಕಟಣೆ ಕೇಳಿಯಾಗಿದೆ. 3300 ಕೋಟಿ ರೂ.ಗಳ ಬಳ್ಳಾರಿ ಜಿಲ್ಲೆಗೆಂದು ಸೋನಿಯಾ ಕೃಷ್ಣ ಪ್ಯಾಕೇಜ್, ಹೇಳಿದವರಿಗೇ ಮರೆತುಹೋಗಿದೆ. ತನ್ಮೂಲಕವಾಗಿ ಕಣ್ಣೊರೆಸುವ, ಮಣ್ಣೆರೆಚುವುದರಲ್ಲಿ ಸರ್ಕಾರ ನಿಷ್ಣಾತ. ಮುಖ್ಯಮಂತ್ರಿಗಳು ಬದಲಾದರೆ ಆಳುವವರ ಧೋರಣೆ ಬದಲಾದಂತೆಯೇ? ○

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಮಂತ್ರಿಗಳಾಗುವ ಮಂತ್ರ

ಜಾತ್ಯಾತೀತ ಜನತಾದಳದ ನಾಯಕರ ಸಹನೆಯ ಕಟ್ಟೆ ಒಡೆದಿದೆ! ಮಂತ್ರಿಮಂಡಲ ವಿಸ್ತರಣೆಯಾಗದೇ ನೆನೆಗುದಿಗೆ ಬಿದ್ದು ಅದು ಕುದುರೆಯ ಮುಂದೆ ಕಟ್ಟಿದ ಹುಲ್ಲಿನಂತಾಗಿರುವುದು ಸಹಜವಾಗಿ ಕೆರಳಿಸಿದೆ! ಏನಾದರೊಂದು ಇತ್ಯರ್ಥಕ್ಕೆ ಬರಲೇಬೇಕೆಂದು ಬೆಂಗಳೂರಿನಲ್ಲಿ ನವೆಂಬರ್-4 ರಂದು ಮುಖಂಡರು, ಪದಾಧಿಕಾರಿಗಳ ಸಭೆಯಲ್ಲಿನ ಬಿಸಿ ತಗುಲಿದ ಮುಖ್ಯಮಂತ್ರಿ ಧರಂಸಿಂಗ್ ದಳದ ಪಟ್ಟಿ ತಲುಪಿದ 1 ಗಂಟೆಯೊಳಗೆ ಸಂಪುಟ ವಿಸ್ತರಣೆಯಾಗಲಿದೆ ಎಂದು ಹೇಳಿದ್ದಾರೆ. ಈ ಕೂಡಲೇ ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರು ಧರಂಸಿಂಗ್‌ರನ್ನು ಭೇಟಿ ಮಾಡಿ ವಿಸ್ತರಣೆ ನಿರ್ಧಾರಕ್ಕೆ ಬರಲು ಹೋಗಿದ್ದು ಆಯ್ತು, ವಾಪಾಸಾದದ್ದು ಆಗಿದೆ. ಈ ಭೇಟಿಯ ಫಲಶ್ರುತಿ ಹೊಸತೇನಲ್ಲ. ವಿಸ್ತರಣೆಗೆ ಒಂದು ದಿನಾಂಕ ಪ್ರಕಟಿಸಲಾಗುವುದು ಎಂಬುದು. ಇಂತಹ ದಿನಾಂಕಗಳ ನಿಗದಿ ಎಷ್ಟು ಬಾರಿ ಆಗಿಲ್ಲ? ಸಂಪುಟ ವಿಸ್ತರಣೆಗೆ ಅಡ್ಡಿ ಕಂಡಿರುವುದು ಕಾಂಗ್ರೆಸ್ ಒಳಗಿನಿಂದಲೇ. ಕಳಂಕಿತರು ಇರಬಾರದು ಎಂಬ ದಳದ ನಾಯಕರ ಒತ್ತಡ - ಅವರಿಲ್ಲದೇ ಅಸಾಧ್ಯವೆಂಬ ಸ್ಥಿತಿ ಕಾಂಗ್ರೆಸ್ ಒಳಗೆ. ಈ ತಳ್ಳಾಟ ಮೈತ್ರಿಕೂಟದ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಅಧಿಕಾರ ನಡೆಸಲು ಅಸಾಧ್ಯವಾದ ಸ್ಥಿತಿಯನ್ನು ನಿರ್ಮಿಸಿದೆ. ಸಚಿವ ಸಂಪುಟದಲ್ಲಿ ಜಾಗ ಸಿಗುತ್ತಿಲ್ಲವೆಂದೋ, ದಳದ ನಾಯಕರ ಈ ಸಭೆಗೆ ಒಳಹೋಗಲು ತಮ್ಮನ್ನು ಬಿಡುತ್ತಿಲ್ಲ, ಇಲ್ಲಿ ಜಾಗವೇ ಇಲ್ಲ ಎಂದೋ ಅತೃಪ್ತಿಗೊಂಡು - ಬುಸುಗುಡುವ ಬದಲು ಮೈತ್ರಿಕೂಟದ ಸರ್ಕಾರ ಪರಿಣಾಮಕಾರಿ ಆಡಳಿತ ನಡೆಸಿ ಜನರ ನಿರೀಕ್ಷೆಗೆ ತಕ್ಕಂತೆ ನಡೆದುಕೊಂಡು, ಪರಿಹಾರ ಕಲ್ಪಿಸದೆ ಹೋಗುತ್ತಿರುವುದಕ್ಕೆ ಇವರು ಆಕ್ಷೇಪ ಎತ್ತಿದ್ದರೆ, ಅದಕ್ಕೆ ಅರ್ಥವಾದರೂ ಬರುತ್ತಿತ್ತು. ಅಂತಹ ಒಂದು ಮಾತೂ ಇವರ ಒಳ-ಹೊರ ಕಲಾಪದಲ್ಲಿ ಕೇಳದೇ ಇದ್ದದ್ದು ಆತಂಕಕಾರಿ

ಉತ್ತರ ಕನ್ನಡ: ಮತಾಂಧ ಜ್ವಾಲೆಯ ವಿಸ್ತಾರ

ಕರಾವಳಿಯ ದಕ್ಷಿಣ ಕನ್ನಡ, ಉಡುಪಿಯಂತಹ ಪ್ರಮುಖ ಜಿಲ್ಲೆಗಳು ನಿತ್ಯವೂ ಬಜರಂಗದಳ - ವಿಶ್ವ ಹಿಂದು ಪರಿಷತ್‌ನಂತಹ ಸಂಘ ಪರಿವಾರದ ಆಟಾಟೋಪಗಳಿಂದ ನಲುಗುತ್ತಿವೆ. ಕೋಮುದ್ವೇಷದ ದಳ್ಳುರಿ ಹಚ್ಚುತ್ತಾ, ದ್ವೇಷ ಅಶಾಂತಿ ಹುಟ್ಟಿಸುತ್ತಾ ಅದರ ಬೆಂಕಿಯಲ್ಲಿ ಬೇಳೆ ಬೇಯಿಸಿಕೊಳ್ಳುತ್ತ ಬಂದಿರುವ ಈ ಪರಿವಾರ ರಾಜಕೀಯ ಫಲವನ್ನು ಉಣ್ಣುತ್ತಿದೆ. ಹಾಗೆಯೇ ಮುಂದುವರಿದು ಅಲ್ಲಿಂದ ಈ ಕೋಮುವೈರಸ್‌ಗಳು ಉತ್ತರಕನ್ನಡ ಜಿಲ್ಲೆಯನ್ನು ಆಕ್ರಮಿಸಿಕೊಂಡಿವೆ. ಈಚೆಗಿನ ಪಾರ್ಲಿಮೆಂಟ್ ಚುನಾವಣೆಯಲ್ಲಿ 'ಕ್ರಿಮಿನಲ್ ಕುಖ್ಯಾತಿಯ ಅನಂತಕುಮಾರ್ ಹೆಗಡೆ, ಬಿಜೆಪಿಯಿಂದ ಮತ್ತೆ ಗೆದ್ದುದು, ನಾಲ್ಕು ಶಾಸಕರನ್ನು ಪಡೆದ ಬಳಿಕ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಚಕಾರವೆತ್ತದೆ, ಜನರೂ ಎತ್ತದಂತೆ ನೋಡಿಕೊಂಡ ಈ ಪಾಪಿಪಡೆ ಪ್ರಮುಖ ನಗರ- ಪಟ್ಟಣ- ಹಳ್ಳಿಗಳತ್ತಲೂ ವಿವಾದಗಳ ಭುಗಿಲೆಬ್ಬಿಸಿ ಗಲಭೆಗಿಳಿದಿದೆ. ಗಲಬೆ ಎದ್ದಿದೆ.

ಆಗೀಗ ಕೆದಕುತ್ತಿದ್ದ ಕಾರವಾರದ ಬಳಿಯ ಅಂಜುದೀವ್ ವಿಷಯವನ್ನು ಪೂರ್ಣಾವಧಿ ಗಲಭೆಯನ್ನಾಗಿಸಿದೆ. ಅಲ್ಲಿ ಅದು ಹೊತ್ತಿ ಉರಿಯುತ್ತಿದ್ದರೆ ಚಂದಾವರದಲ್ಲಿ ಸ್ಮಶಾನ ಭೂಮಿಯ ಅತಿಕ್ರಮಣ ವಿಷಯವೆತ್ತಿ ಗಲಾಟೆ ಎಬ್ಬಿಸಿದೆ. ಇದಕ್ಕೆ 'ಆಡಳಿತ'ವೂ ಧ್ವನಿಗೂಡಿಸಿದೆ. ಈ ಬಾರದಲ್ಲೇ ಹಳಿಯಾಳದ ಮಸೀದಿ [illegible] 'ಜೆಹಾರೋ' ಇರಿಸಿ/ಎಸೆದಿದ್ದರಿಂದ ಅಲ್ಲಿ ಕೋಮುಗಲಭೆ ಯಾವ ಕ್ಷಣದಲ್ಲೂ ಸಿಡಿಯಬಹುದು. ಅಕ್ಟೋಬರ್-31, ನವೆಂಬರ್-1ರ ಸುತ್ತಮುತ್ತ ಭಟ್ಕಳದಲ್ಲಿ ಬಸ್ ನಿಲ್ದಾಣದ ಬಳಿ ರಂಜಾನ್ ಅಂಗಡಿ ಮಳಿಗೆ ಹಂಚಿಕೆಯನ್ನು ನೆಪವಾಗಿರಿಸಿ ಕಲ್ಲು ತೂರಾಟ ನಡೆದು ಗಲಭೆ ಎದ್ದಿದೆ, ಪೋಲೀಸರ ಜೀಪ್ ಜಖಂ ಆಗಿದೆ. ಭಟ್ಕಳವು ಹಿಂದೂ ಕೋಮುವಾದಿಗಳು - ಮುಸ್ಲಿಂ ಮತಾಂಧರ ಹಾವಳಿಯಲ್ಲಿ ಬೆಂದುಹೋದ ನಗರ. ಊರೂರಿಗೆ ದ್ವೇಷದ ಬೆಂಕಿ ಇಡುತ್ತಾ ತಿರುಗಾಡುತ್ತಿರುವ ಬಜರಂಗದಳದ ಮುತಾಲಿಕನನ್ನು ಸರ್ಕಾರ ಈಗಲಾದರೂ ಗಂಭೀರವಾಗಿ ತೆಗೆದುಕೊಂಡು ಕಾನೂನಿನಂತೆ ಕೇಸ್ ಹಾಕಿ - ಜೈಲಿಗೂ ಕಳಿಸುತ್ತಿದೆ ನಿಜ. ಆದರೆ ಸರಿಯಾದ ರೀತಿ ಸ್ಥಿತಿ- ಸಂದರ್ಭಗಳನ್ನು ನಿಭಾಯಿಸದೇ 'ಹೀರೋ'ನಂತಾಗಿ ಇರುವುದರಿಂದ ಅದನ್ನು ದ್ವೇಷ ಹೆಚ್ಚಲು ಸಂಘಪರಿವಾರ ಬಳಸಿದೆ. ವಿಜಾಪುರದಲ್ಲಿ 'ಜೈಲುಖಾನಾ'ದಲ್ಲಿರುವ ಮುತಾಲಿಕ್‌ನನ್ನು ಬಿಡುಗಡೆ ಮಾಡುವಂತೆ ಎಲ್ಲಾ ತಾಲ್ಲೂಕು- ಪ್ರಮುಖ ಊರುಗಳಲ್ಲಿ ಪ್ರತಿಭಟನೆ ನಡೆಯುತ್ತಿವೆ.

ಕಳೆದ ಚುನಾವಣೆಯಲ್ಲಿ ತಿರಸ್ಕಾರಕ್ಕೆ ಒಳಗಾಗಿ ಹೇಗೋ ಮುಖ ಉಳಿಸಿಕೊಂಡು ಮತ್ತೆ ಜನರನ್ನು ಹಾದಿ ತಪ್ಪಿಸಲು ಆರ್.ಎಸ್.ಎಸ್. ಮತ್ತು ಬಿಜೆಪಿ ಬಳಗ ಹೊಸ ತಂತ್ರಗಳನ್ನು ಹೆಣೆಯುತ್ತಾ, ಹಿಂದುತ್ವಕ್ಕೆ ಮರಳುವುದಾಗಿ ಹೇಳುತ್ತಿರುವಾಗಲೇ ಇಲ್ಲಿ ಪೂರ್ಣ ಪ್ರಮಾಣದಲ್ಲಿ 'ಹಿಂದುತ್ವ'ದ ಪ್ರಯೋಗ ಆರಂಭಿಸಿಬಿಟ್ಟಿವೆ. ಈ ವಿಭಜನೆಯ ರಾಜಕಾರಣದಿಂದಲೇ ತಮ್ಮ ಕ್ಷೇತ್ರ - ಸುರಕ್ಷಿತ, ವಿಸ್ತರಣೆ ಸಾಧ್ಯವೆಂದು ಅವರನ್ನು ವಿವಿಧ ಕಾರಣಗಳಿಗಾಗಿ ಬೆಂಬಲಿಸಿದ ಮತದಾರರು ಮನಸ್ಸಿಗೇ ಕೋಮುವಾದದ ವಿಷ ಉಣ್ಣಿಸುತ್ತಿದ್ದಾರೆ.

ಈ ಬೆಳವಣಿಗೆಗಳನ್ನು ಧರ್ಮನಿರಪೇಕ್ಷಿತ, ಪ್ರಗತಿಪರ ಶಕ್ತಿಗಳು ಮತ್ತು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೋಮುವಾದಿಗಳ ಆಕ್ರಮಣವನ್ನು ಎದುರಿಸಬೇಕು.



ಪ್ರತ್ಯೇಕ ರಾಜ್ಯದ ಬಾವುಟ - ಜನಸ್ಪಂದನವಿಲ್ಲ ಆದರೂ ಅಪಾಯ ತಪ್ಪಿಲ್ಲ

ಮಾಜಿ ಸಚಿವರೂ ಹಾಲಿ ಶಾಸಕರೂ ಸಚಿವ ಸ್ಥಾನದ ಆಕಾಂಕ್ಷಿ ವೈಜನಾಥ ಪಾಟೀಲರು ನವೆಂಬರ್ 1 ರಂದು ಮತ್ತೆ ಹೈ.ಕ.ರಾಜ್ಯಕ್ಕಾಗಿ ಪ್ರತ್ಯೇಕ ರಾಜ್ಯಕ್ಕಾಗಿ ಧ್ವಜ ಹಾರಿಸಿದ್ದಾರೆ. ಚುನಾವಣೆಯ ಮೊದಲು ನಂತರ ಕೆಲವು ತಿಂಗಳು ಸುಮ್ಮನೆ ಕುಂತಿದ್ದ ಅವರು ಇದ್ದಕ್ಕಿದ್ದಂತೆ ಧ್ವಜ ಹಾರಿಸಿದ್ದು- ಮಂತ್ರಿಮಂಡಲ ವಿಸ್ತರಣೆಯಾಗದಿರುವುದಕ್ಕೂ ತಾಳೆ ಹಾಕುವವರು ಇದ್ದಾರೆ. ಈ ಭಾಗದಲ್ಲಿ ಹೈದ್ರಾಬಾದ್ ಕರ್ನಾಟಕ ಹಿಂದುಳಿದಿರುವ ಬಗ್ಗೆ - ಈ ಪ್ರಾದೇಶಿಕ ಅಸಮಾನತೆ ತೊಲಗಿಸಿ ಅಭಿವೃದ್ಧಿ ಸಾಧಿಸಬೇಕೆಂಬ ಬಗ್ಗೆ ಅತೀವ ಕಾಳಜಿ ಮತ್ತು ವೈಜ್ಞಾನಿಕ ಅಧ್ಯಯನ - ಕಣ್ಣೋಟ ಇಟ್ಟವರು ಅನೇಕರಿದ್ದಾರೆ. ಎಲ್ಲದಕ್ಕೂ ಪ್ರತ್ಯೇಕ ರಾಜ್ಯವೇ ಮದ್ದು ಎಂದು ಕೂಗುವವರಲ್ಲಿ ಆ ಭಾಗದ ಜನರ ನೋವಿಗೆ ನ್ಯಾಯ ದೊರಕಿಸಬೇಕೆಂಬುದಕ್ಕಿಂತಲೂ, ಸಮಸ್ಯೆಗೆ ಕಾರಣವಾದ 'ವ್ಯವಸ್ಥೆ'ಯನ್ನು ಮರೆಸುವ ಇರಾದೆ ಇರುತ್ತದೆ. ಬೆದರು ಬೊಂಬೆಯಂತಾಡುವ ಉಡಾಫೆಯು ಕೆಲವೊಮ್ಮೆ ಮೈದಳೆಯುತ್ತದೆ.

ಒಂದು ಭಾಷಿಕ ಜನಸಮುದಾಯ ಒಂದುಗೂಡಿ ಬಾಳುವ - ಭಾಷಾವಾರು ಪ್ರಾಂತ್ಯಗಳ ರಚನೆ, ಪ್ರಜಾಸತ್ತಾತ್ಮಕ ಬೆಳವಣಿಗೆಯ ಶಕ್ತಿ ಕುಂದಿಸುವ ಛಿದ್ರಕಾರಿತನದ ಹುನ್ನಾರ ಈ ಪ್ರತ್ಯೇಕ ರಾಜ್ಯದ ಕೇಳಿಕೆಯಲ್ಲಿದೆ. ಇಂತಹವರು ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ, ಕೇಂದ್ರದಿಂದ ಹೆಚ್ಚಿನ ಸಂಪನ್ಮೂಲಗಳಿಗಾಗಿ, ಕೇಂದ್ರ-ರಾಜ್ಯ ಸಂಬಂಧಗಳ ಬದಲಾವಣೆಗಳು ಮೂಲಭೂತವಾಗಿ ಜನಸಾಮಾನ್ಯರ ಬದುಕು ಹಸನಾಗಿಸುವ ಭೂ ಹಂಚಿಕೆ, ಕೈಗಾರಿಕಾ ಅಭಿವೃದ್ಧಿ - ಊಳಿಗಮಾನ್ಯ ಶೋಷಣೆ - ಅದರ ಪಳೆಯುಳಿಕೆಗಳ ವಿನಾಶಕ್ಕಾಗಲಿ, ಉದಾರೀಕರಣ, ಜಾಗತೀಕರಣ- ಧಾಳಿಗಳ ಅನಿಷ್ಟತೆಗಳ ಎದುರಾಗಲಿ ಹೋರಾಡುವ ಛಾತಿ ತೋರುವುದಿಲ್ಲ.

ಇದನ್ನು ಘಟ್ಟಿಸಿ ಕೇಳಿದರೆ 'ನಾವೇನು ಪ್ರತ್ಯೇಕರಾಜ್ಯವೇ ಬೇಕೆಂದು ಕೇಳೋಲ್ಲ. ಹೀಗೆ ಕೇಳದಿದ್ದರೆ ಬೇಡಿಕೆ ಈಡೇರಲ್ಲ' ಎಂಬ ಬಾಲಿಶ ಉತ್ತರ ನೀಡುತ್ತಾರೆ ಕೆಲವರು. ಇದು ಬಹಳ ತೆಳುವಾಗಿ ಕಂಡರೂ ಈ ಬೇಡಿಕೆಯ ಪುನರುಚ್ಚಾರ ಜನರಲ್ಲಿ ವಿಭಜನೆಯ ಬೀಜ ಬಿತ್ತುತ್ತಾ ಹೋಗುತ್ತದೆ. ಈಗ ಹೇಳುವವರು ಆಗ ಇಲ್ಲವಾದರೂ ಪ್ರತ್ಯೇಕತೆಯ ರಾಜಕಾರಣ ಇನ್ನೊಬ್ಬರನ್ನು ಹುಟ್ಟುಹಾಕಿರುತ್ತದೆ.

ಪ್ರತ್ಯೇಕ ರಾಜ್ಯದ ಧ್ವಜಾರೋಹಣ, ಅದರ ಬೇಡಿಕೆಯನ್ನು ವರ್ಣರಂಜಿತವಾಗಿ ಟಿ.ವಿ.ಪತ್ರಿಕೆಗಳನ್ನು ವರದಿ ಮಾಡಿದರೂ ಬಹುತೇಕ ಜನ ಜನ ನಿರ್ಲಕ್ಷಿಸಿದ್ದಾರೆ. ನಾಡು ಒಡೆಯುವ ಕೃತ್ಯಗಳನ್ನು ಕೈಬಿಟ್ಟು ಆ ಭಾಗದ - ಅನಭಿವೃದ್ಧಿಯಂತಹ ಮುಖ್ಯ ಪ್ರಶ್ನೆಗಳು ಇತ್ಯರ್ಥಕ್ಕೆ ಮುಂದಾಗಬೇಕು. ಪ್ರಧಾನ ಹೊಣೆಗಾರನಾಗಿರುವ ಸರ್ಕಾರವೂ ಇಂತಹ ಸಂದರ್ಭ ಬಂದಾಗಲಷ್ಟೇ ಅಭಿವೃದ್ಧಿಯ ಬಗ್ಗೆ ಎರಡು ಮಾತನಾಡಿ ಮರೆಯುವುದನ್ನು ಬಿಟ್ಟು ಗಂಭೀರ ಗಮನಹರಿಸಬೇಕು. ಇಂತಹ ನಿರ್ಲಕ್ಷ್ಯ ಆಳುವವರ ಹಿತಾಸಕ್ತಿಗಳ ರಕ್ಷಣೆಗೆ ಸಹಜ ಸ್ವಭಾವವಾಗಿರುವುದರಿಂದ ಪರ್ಯಾಯಕ್ಕಾಗಿ ಜನಾಂದೋಲನ ಪ್ರಬಲವಾಗಿ ನಡೆಯಬೇಕು.

ಮಂಗಳೂರಿನಲ್ಲಿ ಬೀಡಿ ಕಾರ್ಮಿಕರ ಯಶಸ್ವೀ 4ನೇ ರಾಷ್ಟ್ರ ಸಮ್ಮೇಳನ



ಸಾಮ್ರಾಜ್ಯಶಾಹಿಗಳಜೊತೆ ಕೈಜೋಡಿಸಿರುವ ಬಿಜೆಪಿ

ವಿಚಾರ ಸಂಕಿರಣದಲ್ಲಿ ಪ್ರಕಾಶ್ ಕಾರಟ್

'ರಾಷ್ಟ್ರೀಯವಾದದ ಬಗ್ಗೆ ಮಾತನಾಡುವ ಬಿಜೆಪಿ ಇನ್ನೊಂದು ಕಡೆ ವಿದೇಶಿ ಹಣದ ಬಗ್ಗೆ ಆಸೆಯಿಂದ ನಾಲಿಗೆ ಚಾಚಿ ಕುಳಿತುಕೊಳ್ಳುವುದು ಯಾವ ನೀತಿ?

ಸಂಘ ಪರಿವಾರ ಮತ್ತು ಬಿಜೆಪಿ ಒಂದೆಡೆ ಕೋಮುವಾದದ ಜ್ವಾಲೆಯನ್ನು ಉರಿಯುವಂತೆ ಮಾಡುತ್ತಾ ಈ ನೆಲದ ಜನರ ಮನಸ್ಸು ಒಡೆಯುತ್ತಾ ಸಾಗಿದಂತೆ, ಇನ್ನೊಂದು ಕಡೆ ಅಮೇರಿಕ ಸೇರಿದಂತೆ ಸಾಮ್ರಾಜ್ಯಶಾಹಿ ಶಕ್ತಿಗಳ ಎದುರು ತಲೆಬಾಗಿ ದೇಶವನ್ನು ಮಾರಾಟ ಮಾಡುವ ಚಿಂತನೆಯನ್ನು ಹೊಂದಿವೆ ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಅಭಿಪ್ರಾಯ ಪಟ್ಟರು.

ಅವರು ನವೆಂಬರ್ 3,2004 ರಂದು ಮಂಗಳೂರು ಪುರಭವನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು. 'ರಾಷ್ಟ್ರೀಯವಾದದ ಬಗ್ಗೆ ಮಾತನಾಡುವ ಬಿಜೆಪಿ ಇನ್ನೊಂದು ಕಡೆ ವಿದೇಶಿ ಹಣದ ಬಗ್ಗೆ ಆಸೆಯಿಂದ ನಾಲಿಗೆ ಚಾಚಿ ಕುಳಿತುಕೊಳ್ಳುವುದು ಯಾವ ನೀತಿ? ಎಂದು ಅವರು ಪ್ರಶ್ನಿಸಿದರು.

ಬ್ರಿಟೀಷರ ಕಾಲದಿಂದಲೂ ಕೋಮುವಾದ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳು ಪರಸ್ಪರ ಕೈಜೋಡಿಸಿಕೊಂಡೇ ಬಂದಿವೆ ಎಂದ ಅವರು ಇವತ್ತು ಕೋಮುವಾದಿಗಳ ಹರಿಕಾರನಂತೆ ಸಂಘ ಪರಿವಾರದ ಸಭೆಗಳಲ್ಲಿ ಮಿನುಗುವ ಅಡ್ವಾಣಿಯವರ ಮೇಲೆ ಕಿಡಿಕಾರಿದರು.

ಹಿಂದೆ ನರಸಿಂಹರಾವ್ ಸರಕಾರವಿದ್ದಾಗ ನಮ್ಮ ಪಶ್ಚಿಮ ಕರಾವಳಿಯಲ್ಲಿ ಅಮೇರಿಕಾ ನೌಕಾಪಡೆಯೊಂದಿಗೆ ಭಾರತದ ನೌಕಾಪಡೆಯ ಮಂದಿ ಜಂಟಿಯಾಗಿ ಕವಾಯತು ನಡೆಸುತ್ತಿದ್ದದನ್ನು ಸಿಪಿಐ(ಎಂ) ವಿರೋಧಿಸಿತು. ಆದರೆ ಆಗ ವಿರೋಧ ಪಕ್ಷದಲ್ಲಿದ್ದ ಅಡ್ವಾಣಿ ಸ್ವಾಗತಿಸಿದ್ದರು. ನಾಗಾಲ್ಯಾಂಡ್ ಮತ್ತು ಅಸ್ಸಾಂಗಳಲ್ಲಿ ಉಗ್ರಗಾಮಿ ಚಟುವಟಿಕೆಗಳು ನಡೆಯುತ್ತಿದ್ದಾಗ ಅಮೇರಿಕಾದ ಎಫ್.ಬಿ.ಐ ತನಿಖಾ ಸಂಸ್ಥೆಯು ನೇರವಾಗಿ ಈ ರಾಜ್ಯಗಳೊಂದಿಗೆ ವ್ಯವಹರಿಸುವುದನ್ನು ಅಡ್ವಾಣಿ ಒಪ್ಪಿಕೊಂಡಿದ್ದರು. ಆಗ ಸಿಪಿಐ(ಎಂ) ಅದನ್ನು ವಿರೋಧಿಸಿತ್ತು. ಆದರೆ ಆಗ ಗೃಹ ಸಚಿವರಾಗಿದ್ದ ಅಡ್ವಾಣಿ ಪ್ರತಿಕ್ರಿಯಿಸಿ ಉಗ್ರಗಾಮಿ ಚಟುವಟಿಕೆಗಳ ವಿರುದ್ಧ ಹೋರಾಡಲು ಅಮೇರಿಕಾದೊಡನೆ ಕೈಜೋಡಿಸುವ ಅಗತ್ಯವಿದೆ ಎಂದಿದ್ದರು. ಹೀಗೆ ಕೋಮುವಾದಿ ಮನಸ್ಸೊಂದು ಹೇಗೆ ಸಾಮ್ರಾಜ್ಯಶಾಹಿಗಳೊಂದಿಗೆ ಕೈಜೋಡಿಸುತ್ತದೆ ಎನ್ನುವುದಕ್ಕೆ ನೂರೆಂಟು ನಿದರ್ಶನ ಕೊಡಬಹುದಾಗಿದೆ ಎಂದು ಪ್ರಕಾಶ್ ಕಾರಟ್ ನುಡಿದರು.

ಒಂದು ವೇಳೆ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದರೆ ನಮ್ಮ ಬಿಪಿಸಿಎಲ್ ಅಥವಾ ಎಚ್‌ಪಿಸಿಎಲ್ ನಂತಹ ರಾಷ್ಟ್ರೀಯ ಸಂಸ್ಥೆಗಳನ್ನೆಲ್ಲ ವಿದೇಶಿ ಕಂಪನಿಗಳಿಗೆ ಮಾರುತ್ತಿದ್ದುದರಲ್ಲಿ ಅನುಮಾನವಿಲ್ಲ ಎಂದು ಅವರು ಅಂಕಿಸಂಖ್ಯೆಗಳ ಮೂಲಕ ಸ್ಪಷ್ಟಪಡಿಸಿದರು.

ಹೀಗಾಗಿ ಈ ನಾಡಿನ ದುಡಿಯುವ ವರ್ಗ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಸ್ತರದಲ್ಲಿರುವವರು ಕೋಮುವಾದಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಬೇಕೆಂದು ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಸಿಐಟಿಯು ಅಧ್ಯಕ್ಷರಾದ ಎಂ.ಕೆ.ಪಂಥೆ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಚಿತ್ರಬ್ರತಾ ಮುಜುಂದಾರ್, ಮಂಗಳೂರು ವಿಶ್ವವಿದ್ಯಾನಿಲಯದ ರಾಜಕೀಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಪಿ.ಎಲ್. ಧರ್ಮರವರು ತಮ್ಮ ವಿಷಯವನ್ನು ಗೋಷ್ಠಿಯಲ್ಲಿ ಮಂಡಿಸಿದರು.

ರಾಷ್ಟ್ರವ್ಯಾಪಿ ಹೋರಾಟಕ್ಕೆ ಬೀಡಿ ಕಾರ್ಮಿಕರ ನಿರ್ಧಾರ

ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಸರಕಾರ ನಿರ್ಲಕ್ಷ್ಯ ಧೋರಣೆ ವಹಿಸುತ್ತಿದ್ದು, ಈ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟವು ರಾಷ್ಟ್ರವ್ಯಾಪಿ ಹೋರಾಟವನ್ನು ನಡೆಸಲಿದೆ ಎಂದು ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕಾಂ.ಪಿ.ಕೆ.ಗಂಗೂಲಿ ಹೇಳಿದ್ದಾರೆ. ಅವರು ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ 4ನೇ ರಾಷ್ಟ್ರ ಸಮ್ಮೇಳನದ ಅಂಗವಾಗಿ ಮಂಗಳೂರು ನಗರದಲ್ಲಿ ಜರುಗಿದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸಮ್ಮೇಳನದಲ್ಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸಲಾಗಿದೆ. ರಾಷ್ಟ್ರದಾದ್ಯಂತ ಏಕರೂಪ ಮಜೂರಿ, ಕಡ್ಡಾಯ ಗುರುತು ಚೀಟಿ ಸೇರಿದಂತೆ ಸರಕಾರದ ಮುಂದಿಟ್ಟಿರುವ ಬೀಡಿ ಕಾರ್ಮಿಕರ 10ಅಂಶಗಳ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿ 2005 ರ ಜನವರಿ 27 ರಂದು ರಾಷ್ಟ್ರವ್ಯಾಪಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಕಾರ್ಮಿಕರು ಒಗ್ಗಟ್ಟಿನಿಂದ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ದೇಶದಲ್ಲಿ 70 ಲಕ್ಷಕ್ಕೂ ಅಧಿಕ ಬೀಡಿ ಕಾರ್ಮಿಕರು ವಿವಿಧ ಕಾರಣಗಳಿಂದ ಸಂಕಷ್ಟಕ್ಕೆ ಈಡಾಗಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾಯಿದೆಯಿಂದ ಬೀಡಿ ಉದ್ಯಮಕ್ಕೆ ಇನ್ನಷ್ಟು ಹಾನಿಯಾಗಲಿದೆ. ಇದರೊಂದಿಗೆ ಸಿಗರೆಟ್ ಪ್ಯಾಕಿನ ತರಹ ಬೀಡಿ ಪೊಟ್ಟಣ ರಚಿಸುವ ಕಾಯಿದೆಯೂ ಬೀಡಿ ಕಾರ್ಮಿಕರಿಗೆ ಮುಳುವಾಗಿದೆ. ಈಗಾಗಲೇ ಶೇ.30 ರಷ್ಟು ಬೀಡಿ ಉದ್ದಿಮೆಯ ಮಾರುಕಟ್ಟೆಯನ್ನು ಮಿನಿಸಿಗರೇಟು ತಯಾರಕರು ಕಬಳಿಸಿದ್ದಾರೆ. ಸರಕಾರದ ಈ ಕಾಯಿದೆ ಬಹುರಾಷ್ಟ್ರೀಯ ಕಂಪನಿ ಹಾಗೂ ಮಿನಿ ಸಿಗರೇಟು ಕಂಪನಿಗಳಿಗೆ ಪೂರಕವಾಗಿದೆ. ಈ ನಿಟ್ಟಿನಲ್ಲಿ ಹೋರಾಟ ಅನಿವಾರ್ಯವಾಗಿದೆ, ಎಂದು ಅವರು ಹೇಳಿದರು.

ಬಿಜೆಪಿ ಮತ್ತು ಕಾಂಗ್ರೆಸ್ ಸರಕಾರಗಳೆರಡೂ ಕೂಡಾ ಈ ದೇಶದಲ್ಲಿ ಬೀಡಿ ಕಾರ್ಮಿಕರನ್ನು ನಿರ್ಲಕ್ಷಿಸುತ್ತಲೇ ಬಂದಿದ್ದು, ಇದೀಗ ಬೀಡಿ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದೆ. ಸರಕಾರಗಳ ಈ ತಾತ್ಸರ ಧೋರಣೆಯನ್ನು ಪ್ರತಿಭಟಿಸುವುದೇ ಅಲ್ಲದೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಬೀಡಿ ಕಾರ್ಮಿಕರು ಐಕ್ಯತೆಯಿಂದ ಹೋರಾಟ ನಡೆಸಬೇಕಿದೆ ಎಂದು ಸಿಐಟಿಯು ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಪಂಥೆ ಕರೆ ನೀಡಿದರು.

ಹಿಂದೆ ವಾಜಪೇಯಿ ನೇತೃತ್ವದ ಕೇಂದ್ರ ಸರಕಾರವು ಈ ದೇಶದ ಬೀಡಿ ಕಾರ್ಮಿಕರ ವಿರುದ್ಧ ಸಮರವನ್ನೇ ಸಾರಿದಂತಿತ್ತು ಎಂದು ಆರೋಪಿಸಿದರಲ್ಲದೆ ಬೀಡಿ ಕಾರ್ಮಿಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈಗಿನ ಮನ 'ಮೋಹನ್‌ಸಿಂಗ್ ನೇತೃತ್ವದ ಸರಕಾರದ ಮೇಲಿಟ್ಟಿದ್ದ ನಿರೀಕ್ಷೆ ಕೂಡಾ ಇದೀಗ ಹುಸಿಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.


ಭಾರತದಾದ್ಯಂತ ಬಹುತೇಕ ಮಹಿಳೆಯರೇ ಬೀಡಿ ಕಟ್ಟುತ್ತಿದ್ದಾರೆ. ಅವರು ಈ ಪ್ರಬಲ ಶಕ್ತಿಯನ್ನು ಮಲತಾಯಿ ಧೋರಣೆಯಿಂದ ಕಾಣುವ ಸರಕಾರಗಳು ಮುಂದಿನ ದಿನಗಳಲ್ಲಿ ತೀರಾ ಪ್ರತಿಕೂಲ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪಶ್ಚಿಮ ಬಂಗಾಳದಲ್ಲಿ ಬೀಡಿ ಕಾರ್ಮಿಕರಿಗೆ ವಾರದಲ್ಲಿ ಐದು ದಿನಗಳ ಕಾಲ ಕೆಲಸ ಸಿಗುತ್ತದೆಯಾದರೆ, ಕರ್ನಾಟಕದಲ್ಲಿ ಕೇವಲ 3 ದಿನಗಳಷ್ಟೇ ಕೆಲಸ ಸಿಗುತ್ತಿರುವುದು ಏಕೆ ಎಂದು ಪ್ರಶ್ನಿಸಿದ ಪಂಥೆ ಅಲ್ಲಿ ಕಮ್ಯೂನಿಸ್ಟ್ ಸರಕಾರವಿದೆ. ಆದರೆ ಇಲ್ಲಿರುವ ರಾಜ್ಯ ಸರಕಾರವು ಬಂಡವಾಳಶಾಹಿಗಳ ಪರ ಇರುವುದರಿಂದ ಬೀಡಿ ಕಾರ್ಮಿಕರ ಪರ ನಿಲುವು ತೆಗೆದುಕೊಳ್ಳುವಲ್ಲಿ ವಿಫಲವಾಗಿರುವುದರ ದ್ಯೋತಕ ಇದಾಗಿದೆ ಎಂದರು. ಪಶ್ಚಿಮ ಬಂಗಾಳದಲ್ಲಿ ಸರಕಾರವು ಆಗಿಂದಾಗ್ಗೆ ಬಂಡವಾಳಶಾಹಿಗಳಿಗೆ ಎಚ್ಚರ ನೀಡುತ್ತಲೇ ಇರುತ್ತದೆ ಎಂದೂ ಅವರು ನುಡಿದರು.

ಇದೀಗ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡಬಾರದು ಇತ್ಯಾದಿ ಕಾನೂನುಗಳು ಅನುಷ್ಠಾನಕ್ಕೆ ಬರುತ್ತಿದ್ದು, ಇವೆಲ್ಲವೂ ಬೀಡಿ ಕಾರ್ಮಿಕರ ಉದ್ಯೋಗ ನಷ್ಟ ಮಾಡುತ್ತಿರುವಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ ಎಂಬುದನ್ನು ಮರೆಯುವಂತಿಲ್ಲ ಎಂದರು.

'ಪ್ರಸಕ್ತ ಕೇಂದ್ರ ಸರಕಾರಕ್ಕೆ ಬಹುಮತವಿಲ್ಲ. ಎಡಪಕ್ಷಗಳ ಬೆಂಬಲದಿಂದಷ್ಟೇ ಈ ಕೇಂದ್ರ ಸರಕಾರದ ಅಧಿಕಾರದ ಗದ್ದುಗೆ ಏರಿ ಕುಳಿತಿದೆ. ಈ ಸರಕಾರ ತೆಗೆದುಕೊಳ್ಳುವ ನಿಲುವುಗಳೆಲ್ಲವೂ ಕಾರ್ಮಿಕರ ಮತ್ತು ರೈತರ ಪರ ಇರಬೇಕೆಂಬುದೇ ಎಡಪಕ್ಷಗಳ ಆಶಯ. ಈ ಆಶಯಕ್ಕೆ ಒಂದಿಷ್ಟು ತೊಡಕಾದರೂ ಸರಕಾರವನ್ನೇ ಅಭದ್ರಗೊಳಿಸುವಷ್ಟು ಶಕ್ತಿ ಎಡಪಕ್ಷಕ್ಕಿದೆ" ಎಂದೂ ಪಂಥೆ ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಕೆಲವು ನೀತಿಗಳಿಂದ ಬೀಡಿ ಕಾರ್ಮಿಕರು ವಿನಾಶದ ಅಂಚಿನಲ್ಲಿದ್ದಾರೆ. ಇದನ್ನು ವಿರೋಧಿಸಲು ಪ್ರಸಕ್ತ ತಮ್ಮ ಸಂಘಟನೆಯು ತೀರ್ಮಾನಿಸಿದೆ ಎಂದು ಅವರು ನುಡಿದರು.



ನೂತನ ಅಧ್ಯಕ್ಷರಾದ ಪಿ.ಕೆ.ಗಂಗೂಲಿ - ಭಾರಿ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡುತ್ತಿರುವುದು



ಬಹಿರಂಗ ಸಭೆಯಲ್ಲಿ ಸಾವಿರಾರು ಮಹಿಳೆಯರು...


ಅಖಿಲ ಭಾರತ ಮಟ್ಟದ ಬೀಡಿ ಕಾರ್ಮಿಕರ ಸಮ್ಮೇಳನದ ಅಂಗವಾಗಿ ಗುರುವಾರ ನಗರದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಮಹಿಳಾ ಸಾಗರವೇ ಸೇರಿತ್ತು.

ಸಭೆಗೆ ಮುನ್ನ ಬಾವುಟ ಗುಡ್ಡದಿಂದ ನೆಹರೂ ಮೈದಾನತನಕ ನಡೆದ ವರ್ಣರಂಜಿತ ಮೆರವಣಿಗೆಯಲ್ಲಿ ಕೆಂಪು ರವಿಕೆ, ಬಿಳಿ ಸೀರೆ, ಕೆಂಬಾವುಟ ಹಿಡಿದ ಮಹಿಳೆಯರು ಗಮನ ಸೆಳೆದರು. ಹುಲಿವೇಷ, ಭೂತಕೋಲ, ಡೊಳ್ಳು ಕುಣಿತ, ವರ್ಣಮಯ ಛತ್ರಿ, ಗೊಂಬೆಕುಣಿತ, ಬ್ಯಾಂಡು ಸಹಿತ ನಡೆದ ಮೆರವಣಿಗೆಯಲ್ಲಿ ಮಹಿಳೆಯರು ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತಿದ್ದರು.

ಕಾಂ. ಮಾಧವ, ಶಾಸಕ ಶ್ರೀರಾಮರೆಡ್ಡಿ ಮುಂತಾದವರು ಮಾತನಾಡಿದರು...

(ವಿವರ ವರದಿ ಮುಂದಿನವಾರ)

ಅಡ್ವಾಣಿ & ಕಂಪನಿಗೆ ಸರಿಯಾದ 'ನ್ಯಾಯ' ಸಿಗಬೇಕು



ಬಾಬ್ರಿಮಸೀದಿಯ ಧ್ವಂಸ ಪ್ರಕರಣವನ್ನು ಮತ್ತೆ ಕೈಗೆತ್ತಿಕೊಂಡಿರುವ ನ್ಯಾಯಾಲಯ ಈ ಸಂಚಿನಲ್ಲಿ ಭಾಗಿಯಾಗಿರುವವರಿಗೆ ನೋಟೀಸ್ ನೀಡಿದೆ. ಈ ಆರೋಪಗಳಿಂದ ತಪ್ಪಿಸಿಕೊಳ್ಳಲು ಬಿಜೆಪಿ ಏನೆಲ್ಲಾ ಕಸರತ್ತು ನಡೆಸಿತ್ತು. ದೇಶದ ಜನರ ಐಕ್ಯತೆಗೆ, ಧರ್ಮನಿರಪೇಕ್ಷತೆಯ ಮೌಲ್ಯಗಳ ಮೇಲೆ ಧಾಳಿ ಮಾಡಿದ ಇವರು ತಪ್ಪಿಸಿಕೊಳ್ಳಲು ಬಿಡಬೇಕೆ ?

ಬಾಬ್ರಿ ಮಸೀದಿ ಧ್ವಂಸದ ಶಾಪವನ್ನು ತೊಳೆದುಕೊಳ್ಳಲು ಆರ್.ಎಸ್.ಎಸ್/ ಬಿಜೆಪಿ ಎಷ್ಟೇ ಪ್ರಯತ್ನಿಸಿದರೂ, ಅದರ ದೆವ್ವವು ಅವರನ್ನು ಪೀಡಿಸುತ್ತಲೇ ಇದೆ. ಅದ್ವಾಣಿಯವರು ಬಿಜೆಪಿಯ ಅಧ್ಯಕ್ಷತೆ ಗಾದಿಯನ್ನು ಸ್ವೀಕರಿಸಿದ ಬೆನ್ನಲ್ಲೇ ಅಲಹಾಬಾದ್ ಉಚ್ಚ ನ್ಯಾಯಾಲಯದ ಲಕ್ನೋ ಪೀಠವು ಮತ್ತೊಮ್ಮೆ ಐದನೇ ಬಾರಿಗೆ, ಬಾಬ್ರಿ ಮಸೀದಿ ಧ್ವಂಸದ ದಾವೆ ಸಂಬಂಧವಾಗಿ, ಆರ್.ಎಸ್.ಎಸ್ ನೇತೃತ್ವದ ಮತೀಯ ಸಂಘಟನೆಗಳ ಮುಂಚೂಣಿ ನಾಯಕರುಗಳಾದ ಅದ್ವಾಣಿ, ಮುರಳಿ ಮನೋಹರ್ ಜೋಶಿ, ಉಮಾ ಭಾರತಿ, ಬಾಳ ಠಾಕ್ರೆ ಮತ್ತಿತರರಿಗೆ ನೋಟೀಸು ಜಾರಿ ಮಾಡಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವು (ದಾವೆಯನ್ನು ತಿರುಚಲು), ಆಪಾದಿತರ ವಿರುದ್ಧದ ಕ್ರಿಮಿನಲ್ ಸಂಚಿನ ಆಪಾದನೆಗಳನ್ನೇ ಕೈಬಿಡುವ ಮಟ್ಟಕ್ಕೆ ಶತಪ್ರಯತ್ನ ನಡೆಸಿರುವುದನ್ನು ಓದುಗರು ಜ್ಞಾಪಿಸಿಕೊಳ್ಳಬೇಕಾಗಿದೆ. ನಾವು ಆ ಸಂದರ್ಭದಲ್ಲಿ ಸಿಬಿಐ ಪ್ರಥಮತಃ 1997 ರಲ್ಲಿ ಸೂಚಿತ ಸೆಷನ್ಸ್ ನ್ಯಾಯಾಲಯದಲ್ಲಿ ದಾಖಲು ಮಾಡಿರುವ ಚಾರ್ಜ್ ಶೀಟನ್ನು ಈಗ ಬದಲಾಯಿಸಲು ಸಾಧ್ಯವಿಲ್ಲವೆಂದು ಹೇಳಿದ್ದೆವು. ಪುರಾವೆಗಳ ಸಂಕ್ಷಿಪ್ತ ಜ್ಞಾಪನೆಯು ಉಪಯುಕ್ತವಾಗಲಿದೆ.

1997 ಸೆಪ್ಟೆಂಬರ್ 9 ರಂದು ಲಕ್ನೋದ ಅಡಿಷನಲ್ ನ್ಯಾಯಾಧೀಶರಾದ (ಅಯೋಧ್ಯೆ ಪ್ರಕರಣ) ಜಗದೀಶ್ ಪ್ರಸಾದ್ ಶ್ರೀವಾಸ್ತವರು ಆರ್.ಎಸ್.ಎಸ್/ ಬಿಜೆಪಿ ಕೂಟದ ಮುಂಚೂಣಿ ನಾಯಕರು ಸೇರಿದಂತೆ 49 ಆಪಾದಿತರ ವಿರುದ್ಧ ಕ್ರಿಮಿನಲ್ ಸಂಚು ಸೇರಿದಂತೆ ಆಪಾದನೆಗಳನ್ನು ದಾಖಲಿಸಿ ಆದೇಶವನ್ನು ಹೊರಡಿಸಿದ್ದರು.



ಆದೇಶದ ಕಂಡಿಕೆ 3 ಹೀಗೆ ಹೇಳುತ್ತದೆ; "ಐಪಿಸಿ ಸೆಕ್ಷನ್ 120-29 (ಕ್ರಿಮಿನಲ್ ಸಂಚು) ಹಾಗೂ 153-ಎ/ 153-29/ 295/295-ಎ ಮತ್ತು 505 ಪ್ರಕಾರ ಸಿಬಿಐ, ಎಲ್.ಕೆ.ಅದ್ವಾನಿ, ಮುರಳಿ ಮನೋಹರ್ ಜೋಶಿ, ಠಾಕರೆ, ಅಶೋಕ್ ಸಿಂಘಲ್ ಸೇರಿದಂತೆ 40 ಮಂದಿಯ ವಿರುದ್ಧ ಚಾರ್ಜ್‌ಶೀಟ್ ದಾಖಲು ಮಾಡಿದೆ.

ಆದೇಶವು ಮುಂದುವರಿದು ಹೀಗೆ ಹೇಳುತ್ತದೆ: " ಕೇಂದ್ರ ಸರಕಾರವು ಶ್ರೀ ಬಾಳ ಸಾಹೇಬ್ ಠಾಕ್ರೆಯಿಂದ ಹಿಡಿದು ಶ್ರೀ ಡಿ.ಬಿ.ರಾಯ್ (1 ರಿಂದ 40 ರವರೆಗಿನ ಆಪಾದಿತರು)ರನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 196, ಐಪಿಸಿಯ ಸೆಕ್ಷನ್/ 53-ಎ/ 153-ಬಿ/295/ 295-ಎ/2505, ಐಪಿಸಿ ಸೆಕ್ಷನ್120ನ್ನು ಓದುತ್ತಾ, ವಿಚಾರಣೆ ನಡೆಸಲು ಒಪ್ಪಿಗೆ ನೀಡಿತ್ತು. ಮತ್ತು ಉತ್ತರ ಪ್ರದೇಶದ ರಾಜ್ಯ ಸರಕಾರವು ಶ್ರೀ ಕಲ್ಯಾಣ ಸಿಂಗ್, ಆರ್.ಎನ್.ಶ್ರೀವಾಸ್ತವ ಮತ್ತು ಡಿ.ಬಿ.ರಾಯರವರನ್ನೇ ವಿಚಾರಣೆ ನಡೆಸಲು ಒಪ್ಪಿಗೆ ನೀಡಿತ್ತು."



ಆದ್ದರಿಂದ, ಸೂಚಿತ ನ್ಯಾಯಾಲಯದಲ್ಲಿದ ಸಿಬಿಐ ಕ್ರಿಮಿನಲ್ ಸಂಚಿನ ಚಾರ್ಜ್‌ಶೀಟನ್ನು ದಾಖಲಿಸಿದೆ ಮಾತ್ರವಲ್ಲದೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಒಪ್ಪಿಗೆಯನ್ನು ಪಡೆಯಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಚಾಜ್‌ಶೀಟ್‌ನ ಆಧಾರದಂತೆ ಸೂಚಿತ ನ್ಯಾಯಾಲಯವು ಈ ರೀತಿ ಹೇಳುತ್ತಾ ತೀರ್ಮಾನಿಸಿದೆ: " ಆಪಾದಿತ ವ್ಯಕ್ತಿಗಳು ರಾಮಜನ್ಮಭೂಮಿ/ ಬಾಬ್ರಿ ಮಸೀದಿಯ ವಿವಾದಿತ ಕಟ್ಟಡವನ್ನು ಧ್ವಂಸ ಮಾಡಲು, 1990 ರಲ್ಲಿ ಕ್ರಿಮಿನಲ್ ಸಂಚನ್ನು ಪ್ರಾರಂಭಿಸಿ 6-12-1992 ರಲ್ಲಿ ಅಂತಿಮಗೊಳಿಸಿದರು ಎಂಬುದಾಗಿ ಪ್ರಸ್ತುತ ದಾವೆಯಲ್ಲಿ ನಮ್ಮ ಪುರಾವೆಗಳಿಂದ ತೀರ್ಮಾನಕ್ಕೆ ಬರಲಾಯಿತು. ಶ್ರೀ ಲಾಲ್‌ಕೃಷ್ಣ ಅದ್ವಾನಿ ಮತ್ತು ಇತರರು ವಿವಿಧ ಸಯಯಗಳಲ್ಲಿ, ವಿವಿಧ ಸ್ಥಳಗಳಲ್ಲಿ, ವಿವಾದಿತ ಕಟ್ಟಡಗಳನ್ನು ಧ್ವಂಸ ಮಾಡಲು ಕ್ರಿಮಿನಲ್ ಸಂಚನ್ನು ಹೆಣೆದಿದ್ದರು."

ಈ ಆಧಾರದಂತೆ, ನ್ಯಾಯಾಲಯವು ಮೇಲೆ ತಿಳಿಸಲಾದ ಸೆಕ್ಷನ್‌ಗಳಲ್ಲಿ ಕ್ರಿಮಿನಲ್ ಸಂಚು ಸೇರಿದಂತೆ ಆಪಾದನೆಗಳನ್ನೇ ದಾಖಲಿಸಿ, ಎಲ್ಲಾ ಆಪಾದಿತರು ಅಕ್ಟೋಬರ್ 17, 1997 ರಂದು ವಿಚಾರಣೆಗೆ ಹಾಜರಾಗುವಂತೆ ನಿದೇಶಶನ ನೀಡಿತು. ಸರಕಾರದ ವತಿಯಿಂದ ಕೇವಲ ತಾಂತ್ರಿಕ ನೆಲೆಯಲ್ಲಿ ಆಗಿರುವ ಲೋಪವನ್ನು ಉಚ್ಚ ನ್ಯಾಯಾಲಯದಲ್ಲಿ ಈ ಚಾರ್ಜ್‌ಶೀಟನ್ನು ಪ್ರಶ್ನಿಸಲಾದರೂ ತಿರಸ್ಕರಿಸಲಾಯಿತು. ಆದಾಗ್ಯೂ, ಇದು ಒಂದು ಸಣ್ಣ ಆಡಳಿತಾತ್ಮಕವಾದ ಲೋಪವಾಗಿದ್ದು, ಇದನ್ನೇ ಸರಿಪಡಿಸಬಹುದೆಂದು ಉಚ್ಚ ನ್ಯಾಯಾಲಯವು ತಿಳಿಸುತ್ತಾ ದಾವೆಯನ್ನು ವಿಚರಣೆಗಾಗಿ ನ್ಯಾಯಾಲಯಕ್ಕೆ ಹಿಂತಿರುಗಿಸಿತು. ಆದರೆ ಬಿಜೆಪಿಯ ರಾಜನಾಥ್‌ಸಿಂಗ್ ನೇತೃತ್ವದ ಸರಕಾರವು ನ್ಯಾಯಾಲಯದ ಸಲಹೆಯನ್ನು ಸ್ವೀಕರಿಸದಿರಲು ನಿರ್ಧರಿಸಿತು. ಹಾಗೂ ಸೂಕ್ತ ತಿದ್ದುಪಡಿಯನ್ನು ಮಾಡಲು ನಿರಾಕರಿಸಿತು. ತದನಂತರ, ಬಿಜೆಪಿಯ ಬೆಂಬಲದಿಂದ ಬಾಳಿದ ಮಾಯಾವತಿ ಸರಕಾರವು ಮತ್ತೊಮ್ಮೆ ಈ ಮೊಕದ್ದಮೆಯ ವಿಚಾರಣೆಯನ್ನು ಮುಂದವರಿಸಲು ಹೊಸ ಅಧಿಸೂಚನೆಯನ್ನು ಪ್ರಕಟಿಸಲು ನಿರಾಕರಿಸಿತು. ಬದಲಾಗಿ ಆಕೆಯ ಆಗಿನ ದಣಿಗಳನ್ನು ತೃಪ್ತಿಪಡಿಸಲು, ದಾವೆಯನ್ನು ಯಥಾ ಸ್ಥಿತಿಯಲ್ಲಿ ರಾಯ್ ಬರೇಲಿ ನ್ಯಾಯಾಲಯಕ್ಕೆ ರವಾನಿಸಲಾಯಿತು. ಈಗಿನ ಮುಲಾಯಂ ಸಿಂಗ್ ಸರಕಾರವು ಕೂಡಾ ನಾಜೂಕಾಗಿ, ಈ ವಿಷಯವನ್ನೇ ಇತ್ಯರ್ಥಗೊಳಿಸಲು ಸರ್ವೋಚ್ಚ ನ್ಯಾಯಾಲಯಕ್ಕೆ ಬಿಟ್ಟುಕೊಟ್ಟಿತು.

ಈಗ ಅಲಹಾಬಾದ್ ಉಚ್ಚ ನ್ಯಾಯಾಲಯದ ಲಕ್ನೋ ಪೀಠವು ಅಂತಿಮ ವಿಚಾರಣೆಗಾಗಿ ಡಿಸೆಂಬರ್ 16 ನ್ನು ನಿಗದಿಪಡಿಸಿ ನೋಟೀಸು ಜಾರಿ ಮಾಡಿದೆ. ವಿಶೇಷ ನ್ಯಾಯಾಲಯದಿಂದ ತದನಂತರ ಅನುಮೋದಿಸಲ್ಪಟ್ಟಿರುವ, ಸಿಬಿಐ ದಾಖಲಿಸಿರುವ ಮೂಲ ಚಾರ್ಜ್‌ಶೀಟುಗಳನ್ನು ಅತ್ಯಂತ ಪ್ರಾಮಾಣಿಕತೆಯಿಂದ ಎತ್ತಿಹಿಡಿದು ದಾವೆಯನ್ನು ಮುಂದುವರಿಸುವುದು ಸಿಬಿಐ ಮತ್ತು ಉತ್ತರ ಪ್ರದೇಶ ಸರಕಾರದ ಗುರುತರ ಜವಾಬ್ದಾರಿಯಾಗಿರುತ್ತದೆ.

ಕಾನೂನು ತನ್ನ ವ್ಯಾಪ್ತಿಯನ್ನು ಪಡೆಯಲು ಬಿಡಬೇಕು. ಡಿಸೆಂಬರ್ 6, 1992 ರಂದು ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿಯನ್ನೇ ಧ್ವಂಸಗೊಳಿಸಿದ ಘಾತುಕರನ್ನು ಶಿಕ್ಷಿಸಲು ಸಹಕರಿಸಬೇಕು. ಧ್ವಂಸದ ಈ ಒಂದು ಕೃತ್ಯವು ಇಡೀ ದೇಶವನ್ನು ನಾಚಿಕೆಗೀಡು ಮಾಡಿದೆ. ಹಾಗೂ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ಚೌಕಟ್ಟಿನ ಮೇಲೆ ತೀವ್ರವಾದ ಹಲ್ಲೆಯನ್ನು ಮಾಡಿದೆ. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ಚೌಕಟ್ಟಿಗೆ ತೀವ್ರ ಆಘಾತ ಮತ್ತು ಗಾಸಿಗೆ ಕಾರಣರಾದವರು, ದೇಶದ ನ್ಯಾಯ ಒದಗಿಸುವ ವ್ಯವಸ್ಥೆಯನ್ನು ತಿರುಚಲು ಮತ್ತು ಅಪರಾಧಗಳಿಂದ ಪಾರಾಗಲು ಬಿಡಬಾರದು. ಈ ಹೀನ ಅಪರಾಧದ ಎಲ್ಲಾ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಸಂಬಂಧಪಟ್ಟ ಎಲ್ಲರೂ ಪ್ರಾಮಾಣಿಕತೆ ಮತ್ತು ದೃಢತೆಯಿಂದ ನಿರ್ಧಾರ ಮಾಡಬೇಕು.

ಪೆಟ್ರೋಲ್, ಡೀಸೆಲ್ ದರ ಏರಿಕೆಗೆ ವಿರೋಧ

ಸಿಪಿಐ(ಎಂ)

ಕೇಂದ್ರದ ಯುಪಿಎ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲಗಳ ಬೆಲೆ ಹೆಚ್ಚಳ ಮಾಡಿದುದನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐಎಂ) ತೀವ್ರವಾಗಿ ವಿರೋಧಿಸುತ್ತದೆ. ಆಶ್ಚರ್ಯದ ಸಂಗತಿಯೆಂದರೆ, ಕಚ್ಚಾ ತೈಲ ಬೆಲೆಯು ಇಳಿಮುಖವಾಗುತ್ತಿದ್ದು, ಬ್ಯಾರೆಲ್‌ಗೆ 56 ಡಾಲರ್‌ನಿಂದ 49 ಡಾಲರ್ ಗೆ ಇಳಿದಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಎರುತ್ತಿರುವ ತೈಲ ಬೆಲೆಯನ್ನು ಸರಿದೂಗಿಸಲು ಅಬಕಾರಿ ಸುಂಕ ಮತ್ತು ಆಮದು ತೆರಿಗೆಗಳನ್ನು ಕಡಿತಗೊಳಿಸುವ ಅಗತ್ಯವನ್ನು ಸಿಪಿಐ(ಎಂ) ಸತತವಾಗಿ ಒತ್ತಾಯಿಸಿತ್ತು. ಆಡಳಿತಾತ್ಮಕ ಬೆಲೆ ನಿಗದಿ ಪದ್ಧತಿಯನ್ನು ರದ್ದುಗೊಳಿಸುವಾಗ, ಸಬ್ಸಿಡಿ ಪಡೆಯುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳಿಗೆ ತೆರಿಗೆಯನ್ನು ಪೂರ್ತಿ ಕಡಿತ ಮಾಡಬೇಕೆಂದೂ, ಮತ್ತು ಇತರೆ ಸಬ್ಸಿಡಿ ಇಲ್ಲದ ಪೆಟ್ರೋಲಿಯಂ ಉತ್ಪನ್ನಗಳಿಗೆ ಶೇ. 5 ರವರೆಗೆ ಮಾತ್ರ ತೆರಿಗೆ ಹಾಕಲಾಗುವುದೆಂದೂ ತಿಳಿಸಲಾಗಿತ್ತು. ಆದರೆ ತೆರಿಗೆಗಳನ್ನು ಕಡಿಮೆ ಮಾಡಲಿಲ್ಲ. ತೆರಿಗೆಗಳನ್ನು ಕಡಿಮೆ ಮಾಡಿದ್ದರೆ, ಬೆಲೆ ಹೆಚ್ಚಿಸುವ ಅವಕಾಶವೇ ಒದಗುತ್ತಿರಲಿಲ್ಲ.

ಆಡಳಿತಾತ್ಮಕ ಬೆಲೆ ನಿಗದಿ ಪದ್ಧತಿಯನ್ನು ಕೈಬಿಟ್ಟ ನಂತರ ತೈಲ ಕಂಪನಿಗಳ ಲಾಭದಲ್ಲಿ ತೀವ್ರ ಹೆಚ್ಚಳ ಉಂಟಾಗಿದೆ. ಉದಾಹರಣೆಗೆ, ಇಂಡಿಯನ್ ಆಯಿಲ್ ಕಾರ್ಪೋರೇಷನ್ (IOC)ನ ಲಾಭ 2001-2002 ರಲ್ಲಿ 2884 ಕೋಟಿ ರೂ ಇದ್ದದ್ದು 2003-04 ರಲ್ಲಿ 7004 ಕೋಟಿ ರೂ.ಗಳಿಗೆ ಏರಿದೆ. ಹಾಗೆಯೇ ಹೆಚ್‌ಪಿಸಿಎಲ್ 787 ಕೋಟಿಯಿಂದ 1903 ಕೋಟಿ ರೂ. ಬಿಪಿಸಿಎಲ್ 849 ಕೋಟಿಯಿಂದ 1694 ಕೋಟಿ ರೂ.ಗಳಿಗೆ ತನ್ನ ಲಾಭ ಹೆಚ್ಚಿಸಿಕೊಂಡಿದೆ. ಅಲ್ಲದೆ ಖಾಸಗಿ ತೈಲ ಕಂಪನಿ (ಅಂಬಾನಿಯವರ ರಿಲೈಯನ್ಸ್ - ಸಂ) ಯು, ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಹೆಚ್ಚಿದಂತೆಲ್ಲಾ ತನ್ನ ಲಾಭವನ್ನು ಹೆಚ್ಚಿಸಿಕೊಂಡಿದೆ. ಸಾಮಾನ್ಯ ಜನರ ಮೇಲೆ ಹೊರೆಯನ್ನು ಹೇರಿಸುವುದರ ಬದಲಾಗಿ, ತೈಲ ದರ ಹೆಚ್ಚದಂತೆ ಈ ತೈಲ ಕಂಪನಿಗಳು ತಮ್ಮ ಲಾಭದಲ್ಲಿ ಒಂದು ಚಿಕ್ಕ ಪಾಲನ್ನು ನೀಡುವಂತಾಗಬೇಕು.

ಸೀಮೆ ಎಣ್ಣೆ ದರ ಹೆಚ್ಚಿಸಲಿಲ್ಲ ಎಂದು ಸರ್ಕಾರ ಜಂಬ ಕೊಚ್ಚಿಕೊಳ್ಳುತ್ತಿದೆ. ಆದರೆ ಇದನ್ನು ಆಮದು ಮಾಡಿಕೊಳ್ಳುತ್ತಿಲ್ಲ. ಅಡುಗೆ ಅನಿಲದ ಬೆಲೆ ಪ್ರತಿ ಸಿಲಿಂಡರಿಗೆ ರೂ. 20 ಹೆಚ್ಚಿಸಿದ್ದು ಮಾತ್ರವಲ್ಲದೆ ಪ್ರತಿ ತಿಂಗಳಿಗೂ ರೂ. 5ರಂತೆ ಹೆಚ್ಚಿಸಲಾಗುತ್ತದೆ. ಇದು ಕೋಟ್ಯಾಂತರ ಜನರ ಜೀವನದ ಮೇಲೆ ಪೆಟ್ಟು ಬೀಳಲಿದೆ. ಡೀಸೆಲ್ ಬೆಲೆಯನ್ನು ಲೀಟರಿಗೆ ರೂ: 2.12 ಹೆಚ್ಚಿಸಿರುವುದರಿಂದ ಸಾಮಾನ್ಯ ಜನರಿಗೆ ಹೊರೆಯಾಗುವುದು ಮಾತ್ರವಲ್ಲದೆ, ಹಣದುಬ್ಬರಕ್ಕೆ ಕಾರಣವಾಗಿ ಎಲ್ಲಾ ಕ್ಷೇತ್ರಗಳಿಗೂ ಧಕ್ಕೆ ತಗುಲಲಿದೆ.

ಪೆಟ್ರೋಲ್ ಉತ್ಪನ್ನಗಳ ದರ ಹೆಚ್ಚಳದ ವಿರುದ್ಧ ದೇಶದ ಎಲ್ಲೆಡೆ ಪ್ರತಿಭಟನೆ ನಡೆಸಬೇಕೆಂದು ಸಿಪಿಐ(ಎಂ) ತನ್ನೆಲ್ಲ ಘಟಕಗಳಿಗೆ ಕರೆ ನೀಡಿದೆ. ಯುಪಿಎ ಸರ್ಕಾರವು ಹೆಚ್ಚಳದ ನಿರ್ಧಾರವನ್ನು ಪುನರ್‌ಪರಿಶೀಲಿಸುವಂತೆ ಆಗ್ರಹಿಸಿದೆ.

ನವೆಂಬರ್ ಕ್ರಾಂತಿಯ ನೆನಪು



ಮಾನವ ಕುಲಕ್ಕೆ ಹೊಸ ಹಾದಿ ತೋರಿದ ರಶಿಯಾದ 'ಅಕ್ಟೋಬರ್ ಕ್ರಾಂತಿ' ಮಾನವನಿಂದ ಮಾನವನ ಶೋಷಣೆಯನ್ನು - ಸುಲಿಗೆಯನ್ನು ಕೊನೆಗಾಣಿಸಿತು. ಚರಿತ್ರೆಗೆ, ದುಡಿವ ಜನಕ್ಕೆ ಹೊಸ ದಿಕ್ಕು ತೋರಿಸಿತು. ವಿಶ್ವದ ಸಾಮ್ರಾಜ್ಯಶಾಹಿಗಳ ಎಲ್ಲಾ ಧಾಳಿ-ಪಿತೂರಿಗಳನ್ನೆದುರಿಸಿ ಜಗದ ಜನತೆಗೆ ಸ್ಫೂರ್ತಿ - ಚೈತನ್ಯ ನೀಡಿದ ಈ ಮಹಾ ಕ್ರಾಂತಿಯ ಸ್ಫೂರ್ತಿ-ಸತ್ವ ಅಜೇಯವಾದುದು. ಇಂತಹ ಕ್ರಾಂತಿಯ ಮೂಲಸತ್ವ, ಸೋವಿಯತ್ ರಶಿಯಾದ ಸಾಧನೆ - ಭಾರತ ಮತ್ತು ಜಗತ್ತಿನ ವಿವಿಧ ದೇಶಗಳ ಜನತೆಗೆ ಅದು ನೀಡಿದ ಉತ್ಸಾಹ-ನೆರವು, ಉಂಟು ಮಾಡಿದ ಪ್ರಭಾವಗಳನ್ನು ವಿವರಿಸಿರುವ ಹಿರಿಯ ಸಂಗಾತಿ ಸುರ್ಜಿತ್‌ರವರು, ಸೋವಿಯತ್ ರಶಿಯಾದ ಕುಸಿತದ ಬಳಿಕವೂ ಜಗತ್ತಿನಲ್ಲಿ ಬತ್ತದ ಹೋರಾಟದ ಪ್ರವಾಹಗಳನ್ನು ಗುರುತಿಸಿದ್ದಾರೆ.

ಗೌರವಯುತ ಬದುಕಿನ ಆಕಾಂಕ್ಷೆ ದ

ಹರಕಿಷನ್ ಸಿಂಗ್ ಸುರ್ಜಿತ್


ನವೆಂಬರ್ 7 ಪ್ರತಿವರ್ಷ ಸಮಾಜವಾದ ಗುರಿಸಾಧನೆಗೆ ಮತ್ತೆ ನಮ್ಮನ್ನು ಸಮರ್ಪಿಸಿಕೊಳ್ಳುವ ದಿನವಾಗಿ ಬರುತ್ತದೆ. ಏಕೆಂದರೆ ಇದೇ ದಿನ 87 ವರ್ಷಗಳ ಹಿಂದೆ, 1917 ರಲ್ಲಿ ಮಹಾನ್ ಸಮಾಜವಾದಿ ಕ್ರಾಂತಿ ಇಡೀ ಮಾನವಕುಲಕ್ಕೆ ಹೊಸದೊಂದು ದಾರಿ ತೋರಿಸಿತು. ಈ ಸಮಾಜವಾದಿ ಕ್ರಾಂತಿ ಹಿಂದಿನ ಎಲ್ಲಾ ಕ್ರಾಂತಿಗಳಿಗಿಂತ ಮೂಲಭೂತವಾಗಿ ಹಾಗೂ ಗುಣಾತ್ಮಕವಾಗಿ ಭಿನ್ನವಾಗಿತ್ತು ಎಂಬುದೀಗ ಎಲ್ಲರಿಗೂ ಗೊತ್ತಿರುವ ಸತ್ಯ. ಹಿಂದಿನ ಕ್ರಾಂತಿಗಳೆಲ್ಲಾ ಒಂದು ಶೋಷಕ ವರ್ಗದ ಸ್ಥಾನದಲ್ಲಿ ಇನ್ನೊಂದನ್ನು ತಂದವು, ಆದರೆ ಸಮಾಜವಾದಿ ಕ್ರಾಂತಿ ಮನುಷ್ಯನಿಂದ ಮನುಷ್ಯನ, ದೇಶದಿಂದ ದೇಶದ ಎಲ್ಲಾ ಶೋಷಣೆಗಳನ್ನು ಕೊನೆಗೊಳಿಸಿ ಶೋಷಕರು, ಶೋಷಿತರು ಇಲ್ಲದ ಒಂದು ಸಮಾಜ ಉದಯವಾಗುತ್ತದೆ ಎಂದು ಕಾರ್ಲ್‌ಮಾರ್ಕ್ಸ್ ಭವಿಷ್ಯ ನುಡಿದಿದ್ದರು. ಭವ್ಯ ರಶ್ಯನ್ ಸಮಾಜವಾದಿ ಕ್ರಾಂತಿ ಅಂತಹುದೇ ಕ್ರಾಂತಿ.

ಸಾಕಾರಗೊಂಡವು ಕನಸುಗಳು

ಮಹಾನ್ ಅಕ್ಟೋಬರ್ ಕ್ರಾಂತಿ (ರಶ್ಯದ ಹಳೆಯ ಕ್ಯಾಲೆಂಡರ್ ಪ್ರಕಾರ) ಎಂದು ಹೆಸರಾದ ಆ ಕ್ರಾಂತಿಯ ಪರ ಹಾಗೂ ವಿರುದ್ಧ ಸಂಪುಟ - ಸಂಪುಟಗಳೇ ಪ್ರಕಟವಾಗಿರುವುದರಿಂದ ಆ ಬಗ್ಗೆ ಇಲ್ಲಿ ವಿವರಿಸುವ ಅಗತ್ಯವಿಲ್ಲ. ಆದರೆ ಇಷ್ಟು ಹೇಳಿದರೆ ಸಾಕು - ಮಾನವ ಮನಸ್ಸುಗಳಾದ ಕಾರ್ಲ್ ಮಾರ್ಕ್ಸ್‌ನ ಮತ್ತು ಫ್ರೆಡರಿಕ್ ಎಂಗೆಲ್ಸ್‌ರ ಬೋಧನೆಗಳ ಆಧಾರದಲ್ಲಿ ವ್ಲಾದಿಮಿರ್ ಇಲ್ಯಿಚ್ ಲೆನಿನ್‌ರ ನೇತೃತ್ವದಲ್ಲಿ ನಡೆದ ರಶ್ಯನ್ ಕ್ರಾಂತಿ ಕೋಟಿಗಟ್ಟಲೆ ಶ್ರಮಜೀವಿಗಳ ಶಕ್ತಿಯ ಪ್ರತೀಕವಾಯಿತು. ಸಾವಿರಾರು ವರ್ಷಗಳಿಂದ ಮಾನವಕುಲ ಕಂಡ ಒಂದು ಸಮಾನತೆಯ ಸಮಾಜದ ಕನಸನ್ನು ಸಾಕಾರಗೊಳಿಸಿತು. ಅದು ಸಮಾನತೆಯ ಆಕಾಂಕ್ಷೆಗಳನ್ನು ಆಧ್ಯಾತ್ಮಿಕ ರಂಗಕ್ಕಷ್ಟೇ ಸೀಮಿತಗೊಳಿಸದೆ ಭೌತಿಕ ಜೀವನದಲ್ಲಿಯೇ ಅದರ ಈಡೇರಿಕೆಗೆ ದಾರಿಮಾಡಿಕೊಟ್ಟ ಕ್ರಾಂತಿ ಕೂಡಾ.

ಈ ಕ್ರಾಂತಿ ನಡೆದದ್ದೇ ರಶ್ಯನ್ ಜನತೆ ಹೊತ್ತೊರೆಯುತ್ತಿದ್ದ ರೊಟ್ಟಿ, ಭೂಮಿ ಮತ್ತು ಶಾಂತಿಯ ಆಕಾಂಕ್ಷೆಗಳಿಗೆ ಅನುಗುಣವಾಗಿ. ಈ ಮೂರು ಘೋಷಣೆಗಳ ಮೇಲೆ ಜನತೆ ಬೋಲ್ಶೆವಿಕ್ ಪಕ್ಷದ ನೇತೃತ್ವದಲ್ಲಿ ಒಂದಾಗಿ ಎದ್ದು ನಿಂತರು. ಕ್ರಾಂತಿಕಾರಿ ಸರ್ಕಾರದ ಪ್ರಾರಂಭದ ಮೂರು ಶಾಸನ (ಡಿಕ್ರಿ)ಗಳಲ್ಲಿ ಒಂದು ಎಲ್ಲಾ ಭೂಮಿಯನ್ನು ರೈತಾಪಿ ಜನಗಳಿಗೆ ವರ್ಗಾಯಿಸಿದರೆ, ಇನ್ನೊಂದು ಡಿಕ್ರಿಯು ಮೂಲಕ ರಶ್ಯ ಪ್ರಥಮ ಮಹಾಯುದ್ಧದಿಂದ ಹಿಂದೆ ಸರಿಯುತ್ತದೆ ಎಂದುಸಾರಲಾಯಿತು. ಅಲ್ಲದೆ ಕ್ರಾಂತಿಕಾರಿ ಸರ್ಕಾರವು ಜಾರ್ ದೊರೆಯ ಅಡಿ ರಶ್ಯಾ ಪಶ್ಚಿಮ ಯುರೋಪಿನ ದೇಶಗಳೊಂದಿಗೆ ಮಾಡಿಕೊಂಡಿದ್ದ ಗುಪ್ತ ಸಂಧಿಗಳನ್ನೆಲ್ಲಾ ಸಾರ್ವಜನಿಕಗೊಳಿಸಿತು. ಅಲ್ಲದೆ ಈ ಮೂಲಕ ವಿಶ್ವಾದ್ಯಂತ ಜನತೆ ವಿವಿಧ ಸಾಮ್ರಾಜ್ಯಶಾಹಿ ಶಕ್ತಿಗಳು ಹೇಗೆ ವಸಾಹತು ದೇಶಗಳನ್ನು ತಂತಮ್ಮೊಳಗೇ ಹಂಚಿಕೊಳ್ಳಲು, ಮರು ಹಂಚಿಕೊಳ್ಳಲು ಪಿತೂರಿ ನಡೆಸಿದ್ದವು ಎಂಬುದು ಕಾಣುವಂತಾಯಿತು. ಇದು ಸಾಮ್ರಾಜ್ಯಶಾಹಿಯ ನಿಜವಾದ ಮಾನವ-ವಿರೋಧಿ ಸ್ವರೂಪವನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಬಯಲಿಗೆ ತಂದಿತು.

ಎರಡನೇ ಮಹಾಯುದ್ಧದಲ್ಲಿ ಸೋಲನ್ನುಂಡ ನಾಝಿ ಪಡೆಯ ತಲೆಕೆಳಗಾದ ಧ್ವಜಗಳು



ರಚನಾತ್ಮಕ ಚೈತನ್ಯ ಉಕ್ಕಿ ಹರಿಯಿತು.

ಅಲ್ಲದೆ, ತನ್ನ ಪ್ರಜಾಸತ್ತಾತ್ಮಕ ಹಾಗೂ ಸಮಾನತಾಪೂರ್ಣ ರಾಷ್ಟ್ರೀಯತೆಯ ನೀತಿಗೆ ಪೂರಕವಾಗಿ ಹೊಸ ಸೋವಿಯತ್ ಸರ್ಕಾರ ಝಾರ ಶಾಹಿಯ ದಾಸ್ಯದಲ್ಲಿದ್ದ ದೇಶಗಳಿಗೆ ಸ್ವಾತಂತ್ರ್ಯ ಅವಕಾಶ ನೀಡಿತು. ಈ ರೀತಿಯಲ್ಲೇ ಪೋಲಂಡ್, ಫಿನ್‌ಲ್ಯಾಂಡ್ ಮತ್ತು ಮೂರು ಬಾಲ್ಟಿಕ್ ದೇಶಗಳು (ಲ್ಯಾಟಿವಿಯಾ, ಲಿಥುವೇನಿಯಾ ಮತ್ತು ಎಸ್ಟೋನಿಯಾ) ಸ್ವತಂತ್ರವಾಗಲು ಆಯ್ಕೆ ಮಾಡಿಕೊಂಡರೆ ಉಳಿದ ಸುಮಾರು ಹನ್ನೆರೆಡು ದೇಶಗಳು ಮುಕ್ತವಾಗಿ ಹಾಗೂ ಸ್ವಯಂ ಪ್ರೇರಣೆಯಿಂದ ಸೋವಿಯತ್ ಸಮಾಜವಾದಿ ಗಣತಂತ್ರಗಳ ಒಕ್ಕೂಟವನ್ನು ಸೇರಿದವು. ಅಷ್ಟೇ ಅಲ್ಲ, 1930 ರ ದಶಕದಲ್ಲಿ ಹಿಟ್ಲರನ ಫ್ಯಾಸಿಸ್ಟ್ ಬೆದರಿಕೆಯೆದುರು ಮೂರು ಬಾಲ್ಟಿಕ್ ದೇಶಗಳೂ ಜನಮತ ಸಂಗ್ರಹಣೆಗಳ ಮೂಲಕ ಸೋವಿಯತ್ ಒಕ್ಕೂಟವನ್ನು ಸೇರಿದವು. ಇದು 'ರಾಷ್ಟ್ರೀಯತೆಗಳ ಬಂಧಿಖಾನೆ' ಎನಿಸಿದ್ದ ಝಾರ್ ಶಾಹಿಯಿಂದ ಬೋಲ್ಶೆವಿಕ್ ಸರ್ಕಾರ ಅವರನ್ನು ಮುಕ್ತಗೊಳಿಸಿದ ಎರಡು ದಶಕಗಳ ನಂತರ ನಡೆದ ಜನಮತಗಣನೆಯಿದು. ಅಕ್ಟೋಬರ್ ಕ್ರಾಂತಿ ಸೋವಿಯತ್ ಜನತೆಯ ರಚನಾತ್ಮಕ ಚೈತನ್ಯ ಉಕ್ಕಿ ಹರಿಯುವಂತೆ ಮಾಡಿದ್ದು ಅವರ ಅತ್ಯಂತ ಮಹತ್ವದ ಸಾಧನೆಗಳಲ್ಲಿ ಒಂದು. ಕ್ರಾಂತಿಯ ನಂತರ ನಡೆದ ಪುನರ್ರಚನೆಯ ಬೃಹತ್ ಪ್ರಕ್ರಿಯೆ ಎಲ್ಲರನ್ನೂ ಅತ್ಯಂತ ಬೆರಗುಗೊಳಿಸಿರುವ ಸಂಗತಿ. ಕ್ರಾಂತಿ ನಡೆದ ಹತ್ತು ವರ್ಷಗಳೊಳಗೆ ಹೊಸದಾಗಿ ರಚನೆಗೊಂಡ ಸೋವಿಯತ್ ಒಕ್ಕೂಟದ ಉದ್ದಗಲವೂ ವಿದ್ಯುದೀಕರಣಗೊಂಡಿತು. ಅದು ಕೂಡಾ ಯಾವುದೇ 'ವಿದೇಶಿ ನೇರ ಹೂಡಿಕೆ' ಇಲ್ಲದೆ! ನಮ್ಮ ಈಗಿನ ಆಳರಸರಿಗೆ ಇದಿಲ್ಲದೆ ಸಾಧ್ಯವೇ ಇಲ್ಲವಂತೆ! ಪಂಚವಾರ್ಷಿಕ ಯೋಜನೆಗಳ ಒಂದಾದ ಮೇಲೊಂದರಂತೆ ಕೈಗಾರಿಕೆ, ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾಕ್ಷರತೆ ಮತ್ತು ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ಮಕ್ಕಳ ಕಲ್ಯಾಣ, ಮಹಿಳಾ ಸಬಲೀಕರಣ ಮತ್ತಿತರ ಹಲವು ರಂಗಗಳಲ್ಲಿ ಭವ್ಯ ಅಧ್ಯಾಯಗಳನ್ನೇ ಬರೆದವು. ನಮ್ಮ ಬೂರ್ಜ್ವಾ - ಭೂಮಾಲಕರು ಯಾವ ಗುರಿಗಳಿಗಾಗಿ ಕೆಲಸ ಮಾಡುತ್ತೇವೆ ಎನ್ನುತ್ತಿರುತ್ತಾರೋ, ಆದರೆ ಯಾವುದು ಸದಾ ಅವರ ಕೈಗೆ ಸಿಗುವಂತೆ ಕಾಣುತ್ತಿಲ್ಲವೋ ಅದನ್ನು ಸೋವಿಯತ್ ಒಕ್ಕೂಟ ಅತ್ಯಲ್ಪ ಅವಧಿಯಲ್ಲೇ ಸಾಧಿಸಿತು. ಇದಕ್ಕೆ ಏಕೈಕ ಕಾರಣ ಜನಗಳ ಅಸೀಮಿತ ಚೈತನ್ಯ ಹಾಗೂ ತ್ಯಾಗ ಮನೋಭಾವ. ಈ ಜನಗಳನ್ನು ಸಮಾಜವಾದಿ ಕ್ರಾಂತಿ ತಮ್ಮ ದೇಶದ ಮತ್ತು ಅದರ ಸಂಪನ್ಮೂಲಗಳ ಸಾಮೂಹಿಕ ಒಡೆಯರನ್ನಾಗಿ ಮಾಡಿತ್ತು.

ವಿಮೋಚನಾ ಹೋರಾಟಗಳಿಗೆ ಅಪಾರ ಉತ್ತೇಜನ

ರಶ್ಯನ್ ಕ್ರಾಂತಿಯ ಇನ್ನೊಂದು ಗಮನಾರ್ಹ ಸಾಧನೆಯೆಂದರೆ ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ಅದು ನೀಡಿದ ಅಪಾರ ಉತ್ತೇಜನ. ಹಲವಾರು ಪಂಡಿತರು ಈ ಕ್ರಾಂತಿ ಬದುಕುಳಿಯಬಲ್ಲುದೇ ಎಂದು ಚರ್ಚೆ ನಡೆಸುತ್ತಿದ್ದಾಗ ಲೆನಿನ್ ಶಾಂತಚಿತ್ತರಾಗಿ ವಿಶ್ವ ಸನ್ನಿವೇಶವನ್ನು ವಿಶ್ಲೇಷಿಸಿ ಮುಂದುವರೆದ ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗದ ನಡುವೆಯೂ ವಸಾಹತುಶಾಹಿ - ಸಾಮ್ರಾಜ್ಯ ಶಾಹಿ ಗುಲಾಮಿಕೆಯಿಂದ ವಿಮೋಚನೆಗೊಳ್ಳಲು ಶ್ರಮಿಸುತ್ತಿರುವ ವಿಶ್ವದ ದಮನಕ್ಕೊಳಗಾದ ದೇಶಗಳ ನಡುವಿನಿಂದ ರಶ್ಯಾದ ಕ್ರಾಂತಿಗೆ ಹೊಸ ಮಿತ್ರರನ್ನು ಗಳಿಸುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಸಾಮ್ರಾಜ್ಯಶಾಹಿ ಎಂಬುದು 'ಸಮಾಜವಾದಿ ಕ್ರಾಂತಿಯ ಪೂರ್ವಭಾವಿ' ಯಾಗಿ ಬರುತ್ತದೆ, ರಶ್ಯಾ ಸಾಮ್ರಾಜ್ಯಶಾಹಿ ಶೋಷಣೆಯ ಸಂಕೋಲೆಯ ಅತ್ಯಂತ ದುರ್ಬಲ ಕೊಂಡಿ ಎಂಬ ವಿಶ್ಲೇಷಣೆಯಂತೆ. ಈ ಭವಿಷ್ಯವಾಣಿ ಕೂಡಾ ಸ್ವಲ್ಪ ಸಮಯದಲ್ಲೇ ನಿಜವಾಯಿತು. ಎರಡನೇ ಮಹಾಯುದ್ಧ ಮುಗಿದ ಕೂಡಲೇ ಹಲವಾರು ವಸಾಹತು ದೇಶಗಳು, ಶೋಷಿತ ದೇಶಗಳು ಒಂದೊಂದಾಗಿ ಸ್ವತಂತ್ರಗೊಂಡವು ಹಾಗೂ ಸ್ವಾತಂತ್ರ್ಯಾನಂತರ ತಮ್ಮ ಪುನರ್ರಚನಾ ಕ್ರಿಯೆಗಳಲ್ಲಿ ಸೋವಿಯತ್ ಒಕ್ಕೂಟದ ಅಮೂಲ್ಯ ನೆರವು ಪಡೆದವು.

ಭಾರತದಲ್ಲಿ

ಇದನ್ನು ಕಾಣಲು ದೂರ ಹೋಗಬೇಕಾಗಿಲ್ಲ. ನಮ್ಮ ದೇಶದ ಉದಾಹರಣೆಯನ್ನೇ ನೋಡಬಹುದು. ಇಲ್ಲಿ ರಾಷ್ಟ್ರೀಯ ವಿಮೋಚನಾ ಆಂದೋಲನ ರಶ್ಯನ್ ಕ್ರಾಂತಿಯ ಪ್ರಭಾವದಿಂದಾಗಿ ತೀವ್ರ ಸ್ವರೂಪ ಪಡೆಯಿತು. ಗಾಂಧೀ ಭಾರತೀಯ ಜನಸಮೂಹಗಳನ್ನು ಸ್ವಾತಂ ಸಮರಕ್ಕೆ ಸೆಳೆಯುವಲ್ಲಿ ಕಾರಣಕರ್ತರಾದರ ಎಂಬುದು ನಿಜವಾದರೂ, ಜನಸಮೂಹಗಳು ಹೋರಾಟದತ್ತ ಬರಲು ರಶ್ಯನ್ ಕ್ರಾಂತಿಯ ಪ್ರಭಾವವೂ ಕಮ್ಮಿಯೇನಲ್ಲ ಎಂಬುದು ನಿ ಸಂಗತಿ. ಕ್ರಾಂತಿಯಾದ ಕೂಡಲೇ ನವ ಸ್ವಾತಂತ್ರ್ಯಹೋರಾಟದ ಮೇರು ವ್ಯ ಬಾಲಗಂಗಾಧರ ತಿಲಕರವರು ಆ ಕ್ರಾಂತಿಯ ಹಾಡಿಹೊಗಳಿದರು. ತಿಲಕರಷ್ಟೇ ಅಲ್ಲ ರವೀಂದ್ರನಾಥ ಟಾಗೋರರು, ಸುಭಾಷ್ ಚಂ ಬೋಸ್, ಜವಾಹರಲಾಲ ನೆಹರು, ಭಗತ್ ಸಿಂ ಮತ್ತು ಅವರ ಸಂಗಾತಿಗಳು ಮತ್ತು ಇನ ಹಲವರು ಅಷ್ಟೇ ಹುರುಪಿನಿಂದ ಈ ಕ್ರಾಂತಿಯ ಸ್ವಾಗತಿಸಿದರು. 1921 ರಲ್ಲಿ ಭಾರತೀಯ ರಾಷ್ಟ್ರೀ ಕಾಂಗ್ರೆಸ್ಸಿನ ಅಹ್ಮದಾಬಾದ್ ಅಧಿವೇಶನದ ಮೊತ್ತಮೊದಲ ಬಾರಿಗೆ ಸಂಪೂರ್ಣ ಸ್ವಾತಂತ್ರ್ಯ ನಿರ್ಣಯವನ್ನು ಮಂಡಿಸಿದ ಪ್ರಸಿದ್ಧ ಉರ್ದು ಕ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಮೌಲಾ ಹಸ್ರತ್ ಮೋಹಾನಿ ಅಕ್ಟೋಬರ್ ಕ್ರಾಂತಿಯಿಂ ಆಳವಾಗಿ ಪ್ರಭಾವಿತರಾಗಿದ್ದರು.

ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭಾ ಅಕ್ಟೋಬರ್ 1920 ರಲ್ಲಿ ತಾಷ್ಕೆಂಟ್‌ನಲ್ಲಿ ನವ ಪಕ್ಷದ ಸ್ಥಾಪನೆಗಷ್ಟೇ ಸೀಮಿತವಾಗಿರಲಿಲ್ಲ ತುರ್ಕಿಯ ಖಲೀಫರ ಮರು ಸ್ಥಾಪನೆಗಾ ಹೋರಾಡಲು ದೇಶ ಬಿಟ್ಟು ವಲಸೆ ಹೋ ಮುಸ್ಲಿಂ ಯುವ ಜನರ ಸೋವಿಯತ್ ಒಕ್ಕೂ ತಲುಪಿದ ಮೇಲೆ ಮೂಲಭೂತ ಪರಿವರ್ತ ಆದದ್ದು ಕೇವಲ ಆಕಸ್ಮಿಕ ಅಲ್ಲ. 1915-16 ಮೊದಲ ಲಾಹೋರ್ ಪಿತೂರಿ ಮೊಕದ್ದಮೆಯಿಂ ಬದುಕುಳಿದ ಗದರ್ ಪಾರ್ಟಿಯ ಸದಸ್ಯರು ಕೂಡ ಕಮ್ಯುನಿಸ್ಟ್ ಪಕ್ಷ ಸೇರಿದರು, ಜತೆಗೆ ಕಾಬೂಲಿನಲ್ಲಿ ತಾತ್ಕಾಲಿಕ ಭಾರತೀಯ ಸರ್ಕಾರದ ಹಲ ಸದಸ್ಯರು ಕಮ್ಯುನಿಸ್ಟ್ ಪಕ್ಷ ಸೇರಿದರು. ಅದೇ ರೀ 1929-31 ರ ಎರಡನೇ ಲಾಹೋರ್ ಪಿತೂ ಮೊಕದ್ದಮೆಯಲ್ಲಿ ಬದುಕುಳಿದ ಭಗತ್ ಸಿಂಗರ ಸಂಗಾತಿಗಳು, ಅನುಶೀಲನ್, ಯುಗಾಂತ ಮತ್ತಿತರ ಕ್ರಾಂತಿಕಾರಿ ಗುಂಪುಗಳ ಬದುಕುಳಿ ಸದಸ್ಯರೂ ಕಮ್ಯುನಿಸ್ಟ್ ಪಕ್ಷ ಸೇರಿದರು.

ಕಾಂಗ್ರೆಸ್ ಕೂಡಾ ಈ ಕ್ರಾಂತಿಯ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಲಿಲ್ಲ ಕಾಂಗ್ರೆಸ್‌ನೊಳಗೆ ಎಡಪಂಥವೊಂ ರಚನೆಗೊಂಡದ್ದು ಕ್ರಾಂತಿಯ ನೇ ಪ್ರಭಾವದಿಂದಾಗಿ. ಇದು ಕಾಂಗ್ರೆಸ್‌ಗೇ ತೀವ್ರಗಾ ಸ್ವರೂಪ ನೀಡಿತು, ನೇತೃತ್ವದಲ್ಲಿ ಬಲಪಂಥೀಯ ಹಿಡಿತ ಮುಂದುವರೆದರೂ ಕೂಡಾ. 1920 ರ

ಪಟಿಯುಸಿ ಸ್ಥಾಪನೆ ಹಾಗೂ ನಂತರ ಕಿಸಾನ್ ಭಾ, ವಿದ್ಯಾರ್ಥಿ ಒಕ್ಕೂಟ, ಪ್ರಗತಿಪರ ಲೇಖಕರ ಂಘ ಮತ್ತು ಇಪ್ಟಾದ ಸ್ಥಾಪನೆ ಕೂಡಾ ಕ್ರಾಂತಿಯ ಂದೇಶದ ಶಕ್ತಿಗೆ ಸಾಕ್ಷಿ. ಭಾರತ ಸ್ವಾತಂತ್ರ್ಯ ಳಿಸುವ ಮೊದಲೇ ಹಲವಾರು ವ್ಯಕ್ತಿಗಳು, ಂಪುಗಳು ದೇಶದ ಯೋಜಿತ ಆರ್ಥಿಕದ ೀಲನಕ್ಷೆಗಳನ್ನು ತಯಾರಿಸಿದ್ದರು; ಕಾಂಗ್ರೆಸ್ ಕೂಡಾ ಈ ಉದ್ದೇಶದಿಂದ ಒಂದು ಸಮಿತಿ ರಚಿಸಿತು. ಅವರೆಲ್ಲಾ ಸೋವಿಯತ್ ಯೋಜನಾ ಪ್ರಕ್ರಿಯೆಯ ಯಶಸ್ಸಿನಿಂದ ಸ್ಫೂರ್ತಿ ಪಡೆದಿದ್ದರು. ಬೇರೆ ದೇಶಗಳಲ್ಲೂ ಸುಮಾರಾಗಿ ಈ ಕಥೆಯೇ ಪುನರಾವರ್ತನೆಗೊಂಡಿತು.

ಎರಡನೇ ಅಂತರ್ರಾಷ್ಟ್ರೀಯ ಸುಧಾರಣಾವಾದಿ ಹಾಗೂ ಪರಿಷ್ಕರಣಾವಾದೀ ಪಕ್ಷಗಳಲ್ಲಿನ ಕ್ರಾಂತಿಕಾರಿ ವ್ಯಕ್ತಿಗಳಿಗೆ ಕೂಡಾ ಅಕ್ಟೋಬರ್ ಕ್ರಾಂತಿ ಸ್ಫೂರ್ತಿ ನೀಡಿ ಅವರು ಹೊರಬಂದು ತಂತಮ್ಮ ಆರಂಭವಾದ ಕೂಡಲೇ ಯುರೋಪಿಯನ್ ದೇಶಗಳು ಒಂದೊಂದಾಗಿ ಹಿಟ್ಲರನ ಕಾಲಕೆಳಕ್ಕೆ ಬಂದವು. ಫ್ರಾನ್ಸ್‌ನಂತಹ ಒಂದು ಅಭಿವೃದ್ಧಿ ಹೊಂದಿದ ದೇಶವನ್ನು ಅಡಿಯಾಳಾಗಿಸುವಲ್ಲಿ ಆತನಿಗೆ 11 ದಿನಗಳಿಗಿಂತ ಹೆಚ್ಚು ಬೇಕಾಗಲಿಲ್ಲ.

ಆದರೆ ಸೋವಿಯತ್ ಒಕ್ಕೂಟ ತನ್ನ ಬಲಿಷ್ಠ ಆರ್ಥಿಕ ಹಾಗೂ ಜನತೆಯ ಉನ್ನತ ಮನೋಸ್ಥೈರ್ಯದಿಂದಾಗಿ ಜರ್ಮನಿಯ ಮಿಂಚಿನ ಹೊಡೆತಗಳನ್ನು ನಾಲ್ಕು ವರ್ಷಗಳ ಕಾಲ ಎದುರಿಸಿ ನಿಂತಿತು. ಉತ್ತರದ ಲೆನಿನ್ ಗ್ರಾಡ್‌ನಿಂದ ದಕ್ಷಿಣದ ಸ್ಟಾಲಿನ್ ಗ್ರಾಡ್ ವರೆಗೆ ಸೋವಿಯತ್ ಜನತೆ ಪ್ರತಿಯೊಂದು ಕಾರ್ಖಾನೆಯನ್ನು ಪ್ರತಿಯೊಂದು ಸಾಮೂಹಿಕ ಗದ್ದೆಯನ್ನು, ಪ್ರತಿಯೊಂದು ಆಣೆಕಟ್ಟು, ವಿದ್ಯುದಾಗಾರವನ್ನು ಪ್ರತಿಯೊಂದು ಶಾಲೆ ಮತ್ತು ಆಸ್ಪತ್ರೆಯನ್ನು ಯುದ್ಧರಂಗವಾಗಿ ಪರಿವರ್ತಿಸಿ ಹೋರಾಡಿದರು. ಇದನ್ನು ಕಂಡೇ ಹಲವು




ಸಾಮ್ರಾಜ್ಯಶಾಹಿ ವಿರೋಧಿ ದ್ರುವಗಳು - ಕ್ಯಾಸ್ಟ್ರೋ, ಚವೇಝ್

...ೆ ಎಂದೆಂದೂ ಸಾಧ್ಯವಿಲ್ಲ

ದೇಶಗಳಲ್ಲಿ ಕಮ್ಯುನಿಸ್ಟ್ / ಕಾರ್ಮಿಕ ಪಕ್ಷಗಳನ್ನು ಸ್ಥಾಪಿಸಲು ಕಾರಣವಾಯಿತು. ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯ ಹುಟ್ಟಿದ್ದು ಹೀಗೆ. ಇದರ ಮೂಲಕವೇ ಲೆನಿನ್ ಉದಯವಾಗುತ್ತಿದ್ದ ಹಾಗೂ ಅನನುಭವಿ ಪಕ್ಷಗಳಿಗೆ ಅಮೂಲ್ಯ ಮಾರ್ಗದರ್ಶನ ನೀಡಿದರು.

ಫ್ಯಾಸಿಸ್ಟ್ 'ಅಂಧಕಾರಯುಗ'ದ ಭಯದಿಂದ ಮುಕ್ತಿ

ವಿಶ್ವವನ್ನು ನಾಝಿವಾದ ಮತ್ತು ಫ್ಯಾಸಿಸಂನ ಬೆದರಿಕೆಗಳಿಂದ ಮುಕ್ತಗೊಳಿಸುವಲ್ಲಿಯೂ ಸೋವಿಯತ್ ಒಕ್ಕೂಟ ವಹಿಸಿದ ಪಾತ್ರ ಕಮ್ಮಿ ಮಹತ್ವದ್ದೇನಲ್ಲ. 1930 ರ ದಶಕದಲ್ಲಿ ಇಡೀ ಯುರೋಪು ಹಿಟ್ಲರ್ ವಾದಿ ಜರ್ಮನಿಯೆದುರು



ಅಮೆರಿಕಾದ ಪಿತೂರಿಗಳ ವಿರುದ್ಧ ವೆನಿಜುವೆಲಾದಲ್ಲಿ ಜನಸಾಗರದ ಪ್ರತಿಭಟನೆ

ಹೆದರಿ ನಡುಗುತ್ತಿತ್ತು, ಹಿಟ್ಲರನನ್ನು ತಡೆದು ನಿಲ್ಲಿಸದಿದ್ದರೆ 'ಒಂದು ಸಾವಿರ ವರ್ಷಗಳ ಅಂಧಾಕಾರ ಯುಗ' ಬರುತ್ತದೆಂದು ಹೇಳಲಾಗುತ್ತಿತ್ತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಣಯಗಳೂ ಕೂಡಾ ಹಿಟ್ಲರ ತನ್ನ ಯೋಜನೆಗಳಲ್ಲಿ ಯಶಸ್ವಿಯಾದರೆ ಒಂದು ದೀರ್ಘವಾದ ಅಂಧಕಾರ ಯುಗ ಕಾದಿದೆಯೆಂದು ಹೇಳಿದ್ದವು. ಅಷ್ಟೇ ಏಕೆ, ಎರಡನೇ ಮಹಾಯುದ್ಧ

ಲೇಖಕರು ಇದನ್ನು 'ಇಡೀ ಜನತೆಯ ಯುದ್ಧ' ಎಂದು ಕರೆದರು. ಸೋವಿಯತ್ ಜನತೆ ಈ ಯುದ್ಧದಲ್ಲಿ ಅನುಭವಿಸಿದ ನಷ್ಟಗಳು ಅವರ್ಣನೀಯ - ಅಪಾರ ಭೌತಿಕ ನಷ್ಟಗಳಲ್ಲದೇ, 2 ಕೋಟಿ ಸೋವಿಯತ್ ಸೈನಿಕರು ಮತ್ತು ನಾಗರಿಕರು ಈ ಮಾನವ ಇತಿಹಾಸದ ಅತ್ಯಂತ ಭೀಷಣ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದರು. ಆದರೂ ಅವರು ಫ್ಯಾಸಿಸ್ಟ್ ಯುದ್ಧಯಂತ್ರವನ್ನು ಪುಡಿಗಟ್ಟುವಲ್ಲಿ ವಿಶ್ವವನ್ನು 'ಒಂದುಸಾವಿರ ವರ್ಷಗಳ ಅಂಧಕಾರ ಯುಗ'ದ ಭಯದಿಂದ ಮುಕ್ತಗೊಳಿಸುವಲ್ಲಿ ಯಶಸ್ವಿಯಾದರು. ಇಡೀ ಜಗತ್ತು ಇದಕ್ಕಾಗಿ ಅವರಿಗೆ ಋಣಿಯಾಗಿರಬೇಕು.

ಅಷ್ಟೇ ಅಲ್ಲ, ಏಳು ವರ್ಷಗಳೊಳಗೆ 1952 ರೊಳಗೆ ಸೋವಿಯತ್ ಒಕ್ಕೂಟ ಮತ್ತೆ ಮೊದಲಿನಂತಾಯಿತು. ಅದು ಕೂಡಾ ಅಮೆರಿಕಾದ ಮಾರ್ಷಲ್ ಪ್ಲಾನ್‌ನಂತಹ ಯಾವುದೇ ಆಸರೆಯಿಲ್ಲದೆ. ಅಂದಿನಿಂದ 1991 ರವರೆಗೆ ಅದು ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಹಾಗೂ ನವವಿಮೋಚಿತ ದೇಶಗಳಿಗೆ ಭೌತಿಕ, ನೈತಿಕ ಹಾಗೂ ರಾಜತಾಂತ್ರಿಕ ನೆರವುಗಳನ್ನು ನೀಡುತ್ತಲೇ ಬಂತು. ಭಾರತವೂ ಹಲವು ದರಗಳಲ್ಲಿ ಇಂತಹ ನೆರವಿನ ಒಬ್ಬ ಪ್ರಮುಖ ಫಲಾನುಭವಿ. ಭಾರತಕ್ಕೆ ಸಾಮ್ರಾಜ್ಯಶಾಹಿ ಬ್ಲಾಕ್‌ಮೇಲ್‌ನ್ನು ಪ್ರತಿರೋಧಿಸಲು ನೆರವಾದದ್ದು 1971 ರ ಭಾರತ - ಸೋವಿಯತ್ ಮಿತ್ರತ್ವ ಮತ್ತು ಸಹಕಾರ ಸಂಧಿಯೂ ಸೇರಿದಂತೆ ಸೋವಿಯತ್ ಒಕ್ಕೂಟ ನೀಡಿದ ನೆರವು.

ಇಂತಹುದೇ 'ಇಡೀ ಜನತೆಯ ಯುದ್ಧ'ವನ್ನು ವಿಯೆಟ್ನಾಮಿಗಳು 1945 ರಿಂದ 1975 ರ ವರೆಗೆ ನಡೆಸಿದರು - ಮೊದಲು ಫ್ರೆಂಚ್ ವಿರುದ್ಧ, ನಂತರ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ, ಅವರಿಗೆ ವಿಶ್ವದ ಅತ್ಯಂತ ಬಲಶಾಲೀ ಶಕ್ತಿಯನ್ನು ಭಾರಿ ಸೋಲುಣಿಸಲು ಸಾಧ್ಯವಾಗಿದ್ದರೆ ಅದಕ್ಕೆ ಒಂದು ಮಾರ್ಕ್ಸ್‌ವಾದಿ ಲೆನಿನ್ ವಾದೀ ಪಕ್ಷ ಮುಂದಿಟ್ಟ ಕಣ್ಣೋಟ ನೀಡಿದ ಸ್ಫೂರ್ತಿಯ ಪಾತ್ರ ಕಮ್ಮಿಯೇನಲ್ಲ.

ಆದರೆ ಬೂರ್ಜ್ವಾ-ಸಾಮ್ರಾಜ್ಯಶಾಹಿ ಮಾಧ್ಯಮ ಈ ಇತಿಹಾಸವನ್ನೇ ವಿಶ್ವದ ಜನತೆಯ ನೆನಪಿನಿಂದ ಅಳಿಸಿಹಾಕ ಬಯಸುತ್ತಿದೆ.

ಹೋರಾಟ ಮುಂದುವರೆಯುತ್ತಿದೆ

ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಹಾಗೂ ಜಾಗತೀಕರಣದ ಡಂಗುರ ಸಾರಿದ ಮೇಲೆ ವಿಶ್ವದ ಜನತೆಗೆ ಅವುಗಳಿಂದ ಸಿಕ್ಕಿದ್ದಾದರೂ ಏನು? ಅವರ ಸಂಕಟಗಳಲ್ಲಿ ತ್ವರಿತ ಹೆಚ್ಚಳ, ಉದ್ಯೋಗವಕಾಶಗಳಲ್ಲಿ ತ್ವರಿತವಾದ ಇಳಿಕೆ, ಅವರ ನಿಜ ಆದಾಯಗಳಲ್ಲಿ ತೀವ್ರ ಇಳಿಕೆ, ಭೂಗೃಹದ ಸಂಪನ್ಮೂಲಗಳಲ್ಲಿ ಅವರ ಪಾಲಿನಲ್ಲಿ ಕ್ರಮೇಣ ಇಳಿಕೆ - ಇವೆಲ್ಲದರ ಮೇಲೆ ಕೇವಲ 12 ವರ್ಷಗಳಲ್ಲಿ ನಾಲ್ಕು ಯುದ್ಧಗಳು, ಜತೆಗೆ ಅವು ದೇಶಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಹಸ್ತಕ್ಷೇಪ, ಜತೆಗೆ ಸಾರ್ವಭೌಮ ದೇಶಗಳಿಗೆ ಬೆದರಿಕೆಗಳು, ಜತೆಗೆ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳ ಹೆಸರಲ್ಲಿ ಮಾನವ ಕುಲಕ್ಕೆ ಅಪಾಯ.

ಚೀನಾ ಜನತಾ ಗಣತಂತ್ರದ ತ್ವರಿತವಾಗಿ ಏರುತ್ತಿರುವ ಆರ್ಥಿಕ ಶಕ್ತಿಯೆಂದರೆ ಈ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಅಷ್ಟೊಂದು ಮರಣ ಭಯ ಸುಮ್ಮನೆಯೇ ? ಪುಟ್ಟ ಕ್ಯೂಬಾ ಪ್ರತೀಕವಾಗಿರುವ ನಿರಾಕರಣೆ ಮತ್ತು ಪ್ರತಿರೋಧಕ್ಕೆ ಅವರು ಭಯ ಪಡುವುದು ಸುಮ್ಮನೆಯೇನು?

ಒಟ್ಟಿನಲ್ಲಿ, ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿನ ಸಮಾಜವಾದೀ ವ್ಯವಸ್ಥೆಗಳಲ್ಲಿ ಹಲವು ಕೊರತೆಗಳು, ನ್ಯೂನ್ಯತೆಗಳು ಇದ್ದವು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯು ಜನಗಳ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುಲ್ಲಿ ಸಂಪೂರ್ಣ ವಿಫಲವಾಗಿವೆ, ಆದ್ದರಿಂದ ಅದು ಪರ್ಯಾಯವಲ್ಲ ಎಂಬುದೂ ಕೂಡಾ ಯಾರೂ ನಿರಾಕರಿಸಲಾಗದ ಸಂಗತಿ. ಅವು ವಿವಿಧ ದೇಶಗಳ ಬಹುಪಾಲು ಜನತೆಯ ಹಿತಗಳನ್ನು ಬಲಿಗೊಟ್ಟು ಚಿಕ್ಕ

ಪುಟ 10 ಕ್ಕೆ

ಮಾರ್ಕ್ಸ್‌ವಾದ ಈಗಲೂ ಹೋರಾಟದ ಸಮರ್ಥ ಅಸ್ತ್ರ

ಸೋವಿಯತ್ ಒಕ್ಕೂಟದ ವಿಘಟನೆಗೆ ಮತ್ತು ಪೂರ್ವಯುರೋಪಿನಲ್ಲಿ ಸಮಾಜವಾದವನ್ನು ಕಳಚಿಹಾಕಿದ ಕಾರಣಗಳನ್ನು ಇಲ್ಲಿ ಪರಿಶೀಲಿಸುವ ಅಗತ್ಯವಿಲ್ಲ; ಸಿಪಿಐ(ಎಂ)ನ ಮದ್ರಾಸ್ ಸಮ್ಮೇಳನ (1992) ತನ್ನ 'ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ನಿರ್ಣಯ'ದಲ್ಲಿ ಈ ಕಾರಣಗಳನ್ನು ಆಳವಾಗಿ ವಿಶ್ಲೇಷಿಸಿದೆ. ಇಲ್ಲಿ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿನ ಬೆಳವಣಿಗೆಗಳ ಅರಿವು ನಮಗೆ ಚೆನ್ನಾಗಿಯೇ ಇತ್ತು, ಸೂಕ್ತ-ವೇದಿಕೆಗಳಲ್ಲಿ ನಮ್ಮ ಅಭಿಪ್ರಾಯ ಗಳನ್ನು ಮುಂದಿಟ್ಟಿದ್ದೆವು ಎಂದಷ್ಟೇ ಹೇಳಬಹುದು. ಸೋವಿಯತ್ ಒಕ್ಕೂಟದ ಪತನದ ಒಂದು ದಶಕಕ್ಕೂ ಮೊದಲೇ ಕಾಮ್ರೇಡ್ ಇ.ಎಂ.ಎಸ್., ಬಂಡವಾಳಶಾಹಿ ತನ್ನ ಬೆಳವಣಿಗೆಯ ನಿಯಮಗಳಿಂದಾಗಿಯೇ ಸಮಯ - ಸಮಯಕ್ಕೆ ಒಂದು ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದರೆ, ಒಂದು ಸಮಾಜವಾದೀ ವ್ಯವಸ್ಥೆ ತನ್ನದೇ ಬೆಳವಣಿಗೆಯ ನಿಯಮಗಳನ್ನು ಉಲ್ಲಂಘಿಸಿದಾಗ ಬಿಕ್ಕಟ್ಟು ಎದುರಿಸಬೇಕಾಗುತ್ತದೆ ಎಂದಿದ್ದರು. ಒಟ್ಟಾಗಿ, ಬೂರ್ಜ್ವಾ- ಸಾಮ್ರಾಜ್ಯ ಶಾಹಿಯ ಅಧ್ವರ್ಯುಗಳು ಸೋವಿಯತ್ ಒಕ್ಕೂಟದ ಸಾವಿನ ಬಗ್ಗೆ ಎಷ್ಟೇ ಉಬ್ಬಿ ಹೋದರೂ, ಈ ಅನಾಹುತಕಾರಿ ಘಟನೆ ನಡೆದದ್ದು ಸಮಾಜವಾದೀ ಪುನರ್‌ರಚನೆಯ ಕಾಲದಲ್ಲಿ ಮಾಡಿದ ಗಂಭೀರ ತಪ್ಪುಗಳಿಂದಾಗಿ ಎಂಬುದು ವಾಸ್ತವ ಸಂಗತಿ. ಅದು ಈಗಲೂ ಮಾರ್ಕ್ಸ್‌ವಾದ-ಲೆನಿನ್ ವಾದದ ಪ್ರಸ್ತುತತೆಯನ್ನು, ಸಮಂಜಸತೆಯನ್ನು ಮರೆಮಾಚುವುದಿಲ್ಲ, ಮರೆ ಮಾಚಬಾರದು.

ಅದೇನೇ ಇರಲಿ, ಸೋವಿಯತ್ ಒಕ್ಕೂಟದ ಸಾವು ಅಮೆರಿಕನ್ ನೇತೃತ್ವದ ಸಾಮ್ರಾಜ್ಯಶಾಹೀ ಬಣಕ್ಕೆ ಒಂದು ತಾತ್ಕಾಲಿಕ ಅನುಕೂಲವನ್ನು ಕಲ್ಪಿಸಿದೆ, ಜಾಗತಿಕ ವರ್ಗ ಬಲಾಬಲ ಈಗ ಅದರ ಪರವಾಗಿ ವಾಲಿದೆ. ಇದನ್ನೇ, ವಿಶೇಷವಾಗಿ ಅಮೆರಿಕಾ ವಿಶ್ವಾದ್ಯಂತ ತನ್ನ ಆಧಿಪತ್ಯವನ್ನು ಹೇರಲು ಬಳಸಿಕೊಳ್ಳುವ ಪ್ರಯತ್ನ ನಡೆಸಿದೆ. 1991 ರ ಮಧ್ಯಭಾಗದಿಂದ ಹಿಡಿದು ಬೇರೆ ಪರ್ಯಾಯವಿಲ್ಲ (TINA) ಎಂಬ ಉಚ್ಛ ಸ್ವರದ ರಾಗದ ಆಲಾಪನೆಯಾಗುತ್ತಿದೆ - ಬಂಡವಾಳಶಾಹಿಗೆ ಪರ್ಯಾಯವಿಲ್ಲ, ಜಾಗತೀಕರಣಕ್ಕೆ ಅಂದರೆ ವಾಸ್ತವವಾಗಿ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಪರ್ಯಾಯವಿಲ್ಲ ಎಂದು.

ನಮ್ಮ ಮುಂದಿರುವ ಪ್ರಶ್ನೆ-ಈ ಅಪಪ್ರಚಾರದ ಅಬ್ಬರ ಯಶಸ್ವಿಯಾಗುತ್ತದೆಯೇ? ಗೋಬೆಲ್ಸ್ ನಾಝೀವಾದದಂತಹ ಅಪ್ಪಟ ಸುಳ್ಳನ್ನು ಸತ್ಯವೆಂದು ಜನ ಸ್ವೀಕರಿಸುವಂತೆ ಮಾಡುವಲ್ಲಿ ವಿಫಲನಾಗಿರುವಾಗ, ಆತನ ಮಾನಸಪುತ್ರರು ಬಂಡವಾಳಶಾಹಿಗೆ ಪರ್ಯಾಯವಿಲ್ಲ, ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಪರ್ಯಾಯವಿಲ್ಲ, ಅಮೆರಿಕನ್ ಅಧಿಪತ್ಯಕ್ಕೆ ಪರ್ಯಾಯವಿಲ್ಲ ಎಂದು ವಿಶ್ವದ ಜನತೆ ಸ್ವೀಕರಿಸುವಂತೆ ಮಾಡಬಲ್ಲರೇ?

ನಮ್ಮ ಮುಂದಿರುವ ಪ್ರಶ್ನೆ - ಒಂದು ಸಮಾನತೆಯ ಸಮಾಜ ಬರಬೇಕೆಂಬ ಜನತೆಯ ಆಕಾಂಕ್ಷೆಗಳು ಸತ್ತು ಹೋಗಿವೆಯೇ? ಶೋಷಣೆ ಮತ್ತು ದಮನದ ವಿರುದ್ಧ ಹೋರಾಟವನ್ನು ಅವರು ಕೈಬಿಟ್ಟಿರುವರೇ? ಇಲ್ಲವಾದರೆ, ಮಾರ್ಕ್ಸ್‌ವಾದ ಎಂದಿನಂತೆ ಇಂದು ಕೂಡಾ ಪ್ರಸ್ತುತವಾಗಿದೆ, ಸಮಂಜಸವಾಗಿದೆ ಎಂದು ಹೇಳಿಕೊಳ್ಳಲು ನಮಗೆ ಸಕಲ ಕಾರಣಗಳಿವೆ. ಏಕೆಂದರೆ ಮಾರ್ಕ್ಸ್‌ವಾದ ಅಸಮಾನತೆ, ಶೋಷಣೆ ಮತ್ತು ದಮನದ ವಿರುದ್ಧ ಜಾಗತಿಕ ಹೋರಾಟಕ್ಕಾಗಿ ಬೆಸೆದ ಅತ್ಯಂತ ಸಮರ್ಥ ಅಸ್ತ್ರ.

ವಿಜಾಪುರದಲ್ಲೊಂದು ಹೋರಾಟ

ವಿಜಾಪುರ ನಗರದ ಮಿಣಿಮಾದರ ಓಣಿಯ ಮಹಿಳೆಯರು ಅನುಭವಿಸಿದ ಕಿರಿಕಿ-ಹಿಂಸೆ ಒಂದೆರೆಡಲ್ಲ. ಸ್ಥಾಪಿತ ಹಿತಾಸಕ್ತಿಗಳು ಕುಡಿದು ಬಂದು ಬಾಯಿಗೆ ಬಂದಂತೆ ಬೈಯ್ದರು. ಕೆಲಸ ಕೊಡದೇ ಬಹಿಷ್ಕಾರ ಹಾಕಿದರು, ಬೆದರಿಕೆ ಒಡ್ಡಿದರು. ಆದರೂ ಮಹಿಳೆಯರು ಮಣಿಯದೇ ಹೋರಾಡಿ ಗೆದ್ದ ಕಥೆ ಇಲ್ಲಿದೆ. ಇಷ್ಟೆಲ್ಲಾ ಆದದ್ದು ಮಹಿಳೆಯರು ಒಂದಾಗಿ ಸ್ತ್ರೀ ಶಕ್ತಿ ಸಂಘ ಕಟ್ಟಿದ್ದಕ್ಕಾಗಿ... ಅದ್ಹೇಗೆ ಎನ್ನುತ್ತೀರಾ ...

ಹೋರಾಡಿ ಗೆದ್ದ 'ಸ್ತ್ರೀ' ಶಕ್ತಿ

ಅಣ್ಣಾರಾಯ ಈಳಿಗೇರ

ಪಂಚನದಿಗಳ ಬೀಡು ಕರ್ನಾಟಕದ ಪಂಜಾಬ್ ಎಂದು ಹೆಸರಾಗಿರುವ ವಿಜಾಪೂರ ಜಿಲ್ಲೆಯು ಕುಡಿಯುವ ನೀರಿಗಾಗಿ ಸದಾ ನರಳುವ ಬರಗಾಲದ ಬೇಗೆಯಲ್ಲಿ ಬೇಯುವ ಜಿಲ್ಲೆ.

ಮಳೆಯು ಇಲ್ಲ, ಬೆಳೆಯು ಇಲ್ಲ, ರೈತರಿಗೆ ಕೂಲಿಕಾರರಿಗೆ ಕೆಲಸವು ಇಲ್ಲ, ಹೊಟ್ಟೆ ಬಟ್ಟೆಗೆ ಇಲ್ಲದೆ ದಾರಿದ್ರ್ಯದ ಬದುಕು ಸಾಗಿಸುವ ಬಹುಪಾಲು ಜನ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ ಮೊದಲಾದ ಕಂದಾಚಾರಗಳಿಗೆ ತಲೆ ಒಡ್ಡಿರುವುದು ಒಂದೆಡೆಯಾದರೆ ಜಾತಿ ರಾಜಕೀಯ, ಅರೆಪಾಳೆಗಾರಿ, ದೌರ್ಜನ್ಯಗಳಿಗೂ ಬಲಿಪಶುಗಳಾಗಿ ಗೋಳಾಡುವುದು ಇದೆ.

ವಿಜಾಪುರದ ಇಂಡಿ ರೋಡಿನಲ್ಲಿ ಒಡ್ಡರ ಮಿಣಿಮಾದರ ಓಣಿ ಎಂಬ ಓಣಿ ಇದೆ. ಇಲ್ಲಿ ಸುಮಾರು 100 ಂದ 150 ಒಡ್ಡರ ಭೋವಿಸಮಾಜ ಕುಟುಂಬಗಳು ವಾಸವಾಗಿವೆ. ಇವರಲ್ಲಿ ಸಾಮಾನ್ಯವಾಗಿ ಎಲ್ಲರೂ ಆರ್ಥಿಕವಾಗಿ ಹಿಂದುಳಿದವರೇ. ಜೊತೆಗೆ ಸಾಮಾಜಿಕವಾಗಿ ಶೈಕ್ಷಣಿಕವಾಗಿಯೂ ಹಿಂದುಳಿದವ ರಾಗಿದ್ದಾರೆ. ಮೂಢ ನಂಬಿಕೆಗಳು ಸಂಪ್ರದಾಯದ ಪದ್ಧತಿಗಳು ಇದರಲ್ಲಿ ಶತಶತಮಾನಗಳಿಂದ ಬಳುವಳಿಯಾಗಿ ಬಂದಿವೆ. ಅರೆಪಾಳೆಗಾರಿ ಮೌಲ್ಯಗಳು, ಜಾತಿ ಕಂದಾಚಾರಗಳು ಪ್ರತಿ ಮನೆಯವರು ಮೈಗೂಡಿಸಿಕೊಂಡಿದ್ದಾರೆ. ಪ್ರತಿ ಮನೆಯು ಒಂದು ಸಣ್ಣ ತಪ್ಪಿಗೆ ಗೊಡ್ಡು ಸಂಪ್ರದಾಯದ ಬಲಿಪಶುಗಳನ್ನಾಗಿಸಲಾಗುತ್ತಿದೆ. ಈ ಸಮಾಜದ ಮುಂದಾಳು ಎನ್ನಿಸಿಕೊಂಡಿರುವ ಕೆಲವು ಯುವಕರಂತೂ ಅರೆಪಾಳೆಗಾರಿ ಮೌಲ್ಯಗಳ ಗತ್ತುಗಾರಿಕೆಗಳನ್ನೆಲ್ಲ ಮೈಗೂಡಿಸಿಕೊಂಡಿದ್ದಾರೆ. ಮೋಜು ಮೋಜುವಾನಿಗಳು ತಪ್ಪದೇ ನಡೆಯುತ್ತವೆ. ಕಲ್ಲುಗಣಿಗಳಲ್ಲಿ ಕಷ್ಟದ ಜೀವನ ಸಾಗಿಸುವ ಜನರ ಸದಸ್ಯತನ ಹೊಂದಿರುವ ಕಲ್ಲುಗಣಿ ಉದ್ಯಮದ ಹೆಸರಿನಲ್ಲಿ ಮುಂದವರೆಸಿಕೊಂಡು ಬಂದಿರುವ ಸೊಸಾಯಿಟಿಯೊಂದನ್ನು ನಡೆಸುತ್ತಿದ್ದಾರೆ. ಇಲ್ಲಿ ಇವರು ಹೇಳಿದ್ದೆ ವೇದವಾಕ್ಯ. ಯಾವುದೇ ಒಬ್ಬ ವ್ಯಕ್ತಿ ಒಂದು ಸಣ್ಣ ತಪ್ಪು ಮಾಡಿದರೂ ಇವರು ಹೇಳಿದಷ್ಟು ದಂಡವನ್ನು ಪೀಕಬೇಕು, ಇಲ್ಲವೇ ಸಮಾಜದಿಂದ ಹೊರಗೆ ಇಡುವ, ಬಹಿಷ್ಕಾರ ಹಾಕುವ ಶಿಕ್ಷೆಗೆ ಗುರಿಯಾಗಬೇಕು.

ದಂಡ ಎಂದರೆ 10ರಿಂದ 100 ರೂಪಾಯಿಗಳ ತೆತ್ತುವದಲ್ಲ ಅದು 5000 ಸಾವಿರ ರೂ.ದಿಂದ ಹಿಡಿದು 20,000 ಸಾವಿರ ರೂ.ಗಳು ಇಲ್ಲವೆ ಅದಕ್ಕೂ ಹೆಚ್ಚಿಗೆ ಕೂಡಾ ದಂಡ ಕಟ್ಟಬೇಕು. ಕಟ್ಟಿದಂತ ದಂಡದ ಹಣದಿಂದ ಕೋಳಿ ಕುರಿ ಬೇಟೆ ಕಡಿವಿ ಅದು ಇಡೀ ರಾತ್ರಿಯಲ್ಲಿ ಸಮಾಜದ ಎಲ್ಲ ಕುಟುಂಬಗಳ ಗಂಡಸರು ಮಾಂಸ ಮಧ್ಯ ಸೇವನೆಯ ಹಬ್ಬ ಆಚರಣೆಯಿಂದ ಕೂಡಿದ ಸಂಪ್ರದಾಯ ತಪ್ಪದೆ ನಡೆಯುವುದು.

ದಂಡ ಕಟ್ಟುವುದು ಅಲ್ಲದೆ ಕಲ್ಲು ಗಣಿಗಳಲ್ಲಿ ಕೆಲಸ ಮಾಡುವ ಸಮಾಜದ ಜನರಿಂದ ದಿನಕ್ಕೆ ವಾರಕ್ಕೆ ತಿಂಗಳಿಗೆ ಅಂತ ವರ್ಗಣಿಗಳನ್ನು ವಸೂಲು ಮಾಡುವುದು ಇದೆ.

ಈ ಎಲ್ಲ ಬಾಬತ್ತುಗಳಿಂದ ಬಂದ ಹಣವನ್ನು ಸೊಸಾಯಿಟಿ ಉಸ್ತುವಾರಿ ಕಮಿಟಿಯ ಮುಖ್ಯಸ್ಥರೆನ್ನುವ ಈ ಯುವಕರು ಹಲವು ಕಾರಣಗಳ ಹೆಸರಿನಿಂದ ಸುಳ್ಳು ಲೆಕ್ಕಗಳನ್ನು ತೋರಿಸಿ ಹಣ ಲಪಟಾಯಿಸಿ ತಮ್ಮ ಜೇಬಿಗೆ ಇಳಿಸಿಕೊಳ್ಳುವುದು ಇದೆ. ಹಿಗೆ ಉಸ್ತುವಾರಿ ಕಮಿಟಿಯ ಯುವ ಮುಖಂಡರ ಕಲ್ಲು ಗಣಿ ಗುತ್ತಿಗೆಯ ಕೆಲಸವನ್ನು ಹಿಡಿಯುತ್ತಾರೆ. ಹತ್ತಾರು ಜನರನ್ನು ಕಡಿಮೆ ದುಡ್ಡಿಗೆ ಹೆಚ್ಚಿನ ಸಮಯದವರೆಗೆ ದುಡಿಸಿಕೊಂಡು ಹಣ ಗಳಿಕೆಯ ವೇಗವನ್ನು ಹೆಚ್ಚಿಸಿಕೊಂಡಿದ್ದಾರೆ.

ಈ ರೀತಿ ಸಂಗ್ರಹದ ಹಣವನ್ನು ತಮ್ಮ ಸಮಾಜದ ದಂಡತೆತ್ತುವ ಬಲಿಪಶುವಾದ ಜನಗಳಿಗೆ ಬಡ್ಡಿ ಚಕ್ರಬಡ್ಡಿಯಂತೆ ಕೊಟ್ಟು ಇನ್ನಷ್ಟು ಸುಲಿಗೆಗೆ ಈ ಜನಗಳನ್ನು ಒಳಪಡಿಸಿದ್ದು ಇದೆ. ಸಮಯಕ್ಕೆ ಸರಿಯಾಗಿ ಹಣ ಕೊಡದೆ ಇರುವವರಿಗೆ ಮತ್ತೆ ದಂಡ, ದಂಡಕ್ಕೆ ಬಡ್ಡಿ ಹೀಗೆ ಮುಂದುವರೆಯುತ್ತದೆ. ಈ ಸುಲಿಗೆಯ ಕ್ರಮಗಳು ಇವರ ಈ ಶೋಷಣೆಗಳಿಗೆ ಕಳಸವಿಟ್ಟಂತೆ ಭ್ರಷ್ಟ ಅಧಿಕಾರಿಗಳು ಭ್ರಷ್ಟ ರಾಜಕೀಯ ಪುಡಾರಿಗಳ ಬೆಂಬಲವು ಇದೆ.

ಮೂಡಿತೊಂದು ಕೆಂಪು ಚುಕ್ಕೆ

ಕಪ್ಪು ಮೋಡದಲ್ಲಿ ಕಗ್ಗತ್ತಲ ಬಾನಿನಲ್ಲಿ ಮೂಡಿತೊಂದು ಕೆಂಪು ಚುಕ್ಕೆಯೋ ಎಂಬಂತೆ ಕತ್ತಲಲ್ಲಿ ತೊಳಲಾಡುತ್ತಿದ್ದ ಈ ಸಮಾಜದಲ್ಲಿ ಭಾಗ್ಯಜ್ಯೋತಿ ಸ್ತ್ರಿ ಸ್ವಸಹಾಯ ಗುಂಪು, ಪರಂಜ್ಯೋತಿ ಸ್ತ್ರಿಶಕ್ತಿ ಸ್ವಸಹಾಯ ಗುಂಪುಗಳು ಹುಟ್ಟಿಕೊಂಡು ಮಿಣುಕು ಬೆಳಕನ್ನು ನೀಡಲಾರಂಭಿಸಿದವು. ಈ ಸ್ತ್ರಿ ಶಕ್ತಿ ಎರಡು ಗುಂಪುಗಳಲ್ಲಿ ತಲಾ 15ರಂತೆ 30 ಜನ ಮಹಿಳೆಯರು ತಮ್ಮ ದುಡಿಮೆಯ ಹಣದಲ್ಲಿ ಸಂಸಾರದ ಖರ್ಚು ವೆಚ್ಚವನ್ನೆಲ್ಲ ನಿಭಾಯಿಸಿ



ಉಳಿಸಿದ ಅಲ್ಪಸ್ವಲ್ಪ ಹಣವನ್ನು ಸಂಘಕ್ಕೆ ಜಮಾ ಮಾಡುತ್ತಾ ನಡೆದರು.

ಉಳಿಕೆಯ ಈ ಹಣವನ್ನು ಸಂಕಷ್ಟದಲ್ಲಿ ಇವರು ತಮ್ಮ ಸಮಾಜದ ಜನರಿಗೆ ಕಡಿಮೆ ಬಡ್ಡಿದರದಲ್ಲಿ ನೀಡತೊಡಗಿದರು. ಇದರಿಂದ ಉತ್ಸಾಹಿತರಾದ ಸ್ತ್ರಿ ಶಕ್ತಿ ಗುಂಪಿನ ಮಹಿಳೆಯರು ತಮ್ಮ ಉಳಿಕೆಯನ್ನು ಇನ್ನಷ್ಟು ಹೆಚ್ಚಿಸುತ್ತಾ ತಮ್ಮ ಸಂಘದ ವ್ಯವಹಾರವನ್ನು ವಿಸ್ತಾರಗೊಳಿಸಿದರು.

ಉರಿದೆದ್ದ ಸೊಸಾಯಿಟಿ ಪುಡಾರಿಗಳು

ಸ್ತ್ರಿಶಕ್ತಿ ಸ್ವಸಹಾಯ ಗುಂಪುಗಳ ಆರ್ಥಿಕ ಸಹಾಯಗಳಿಂದ ಸುಲಿಗೆಗೆ ಒಳಗಾದ ಜನ ಬಡ್ಡಿದುಡ್ಡಿಗಾಗಿ ಹಾಗೂ ಬಿಟ್ಟಿ ಚಾಕರಿಯ ಕಲ್ಲುಗಣಿ ಸೊಸೈಟಿ ಪುಡಾರಿಗಳತ್ತ ಹಣಕ್ಕೆ ಕೈಚಾಚುತ್ತಾ ಹೋಗುವುದು ಕಡಿಮೆಯಾಗುತ್ತಾ ಬಂತು ಇದರಿಂದ ಸಿಟ್ಟಿಗೆದ್ದ ಸೊಸೈಟಿಯ ಪುಡಾರಿಗಳು ಸ್ತ್ರಿ ಶಕ್ತಿ ಸ್ವಸಹಾಯ ಗುಂಪುಗಳ ಮೇಲೆ ಕೆಂಡ ಕಾರಲಾರಂಭಿಸಿದರು.

ಆರ್ಥಿಕವಾಗಿ ಮೇಲೆದ್ದು, ಬರುತ್ತಿರುವ ಹಾಗೂ ಅಬಲೆಯರು ಸಬಲೆಯರಾಗುತ್ತಿರುವುದು ಈ ಪುರುಷ ಪ್ರಧಾನ ಸಮಾಜದ ವಾರಸುದಾರರಿಗೆ ಸರಿಕಾಣಲಿಲ್ಲ.

ಬಿ.ಜೆ.ಪಿ.ಯ ಶಾಸಕ ಅಪ್ಪು/ ಪಟ್ಟಣಶೆಟ್ಟಿಯ ಬಂಟನಾದ ರಾಮು ಹೊಸಪೇಟೆ ಹಾಗೂ ಆತನ ಸಂಗಡಿಗ ಸುರೇಶ ಬೆನಾಳ. ಈತ ಭೋವಿ ಸಮಾಜದ ಅಧ್ಯಕ್ಷನು ಹೌದು. ದುರ್ಗಪ್ಪ ಜಮಖಂಡಿ, ಬಸು ಹೊಸಪೇಟೆ, ಲಕ್ಷ್ಮಣ ಹೊಸಪೇಟೆ, ವಿಠ್ಠಲ ಹೊಸಪೇಟೆ, ಮಾರುತಿ ಬೇನಾಳ ಇವರಿಗೂ ಹಾಗೂ ಸ್ತ್ರಿಶಕ್ತಿ ಸ್ವಸಹಾಯ ಗುಂಪುಗಳ ಮುಖಂಡರಾದ ಶಾಂತಾಬಾಯಿ ಪಡತಾರೆ, ಕಮಲಾಬಾಯಿ, ಲೋಕಪ್ಪ ಹುಬ್ಬಳ್ಳಿ ಸುನಂದಾ ಮೋತಿರಾಮ ಹೊನ್ನುಟಗಿ ದಾನೇಶ್ವರಿ ಶ್ರೀಶೈಲ ಒಡ್ಡರ ಇವರಿಗೂ ಜಟಾಪಟಿ ಶುರುವಾಯಿತು.

ಸ್ತ್ರಿಶಕ್ತಿ ಗುಂಪುಗಳನ್ನು ಕಟ್ಟಬಾರದು ಸಂಘಗಳು ಸಭೆಗಳಿಗೆ ಯಾರು ಹೋಗಬಾರದು, ಸದಸ್ಯರಾಗಬಾರದು ಮುಂತಾದ ಆಜ್ಞೆಗಳನ್ನು ಹೊರಡಿಸಿದರು. ಇದಕ್ಕೂ ಸದರಿ ಸ್ತ್ರಿಶಕ್ತಿ ಗುಂಪುಗಳು ಮಣಿಯದಾದಾಗ ನಿಜವಾಗಿಯೂ ಗಾಬರಿಗೊಂಡರು. ಆರ್ಥಿಕವಾಗಿ ರಾಜಕೀಯವಾಗಿ ಬಲವಾದ ಹಿಡಿತ ಹೊಂದಿದ್ದ ಈ ಖೂಳರು ತಮ್ಮ ನಾಯಕತ್ವಕ್ಕೊಂದು ಸವಾಲಾಗಿ ನಿಂತ ಈ ಮಹಿಳೆಯರಿಂದ ಅಂಜಿದರು.

ಆಗ ಇನ್ನೊಂದು ವಿಷಯ ಹೆಕ್ಕಿ ತೆಗೆದರು. ಅದೇನೆಂದರೆ ಭಾಗ್ಯಜ್ಯೋತಿ ಸ್ತ್ರಿಶಕ್ತಿ ಗುಂಪಿನ ಅಧ್ಯಕ್ಷರಾದ ಶಾಂತಾಬಾಯಿ ಪಡತಾರೆ ಇವಳು ಮುಸ್ಲಿಂ ಯುವಕ ರಜಾಕಸಾಬ ಬೇಪಾರಿ ಎಂಬ ಯುವಕನನ್ನು ಮದುವೆಯಾಗಿದ್ದಾರೆ. ಇದು ಸಂಘ ಪರಿವಾರದ ಸೆರಗಿನಡಿಯಿಂದ ಧರ್ಮಾಂಧ ರಾಮು ಹೊಸಪೇಟೆ ಹಾಗೂ ಅವನ ಸಂಗಡಿಗರಿಗೆ ಏಕಾಏಕಿ ಧರ್ಮದರ್ಶನವಾದಂತಾಗಿದೆ. ಧರ್ಮ ದಾರಿ ತಪ್ಪಿದೆ ಎಂದು ಬೊಬ್ಬಿಡಲು ಪ್ರಾರಂಭಿಸಿದ್ದರು. ಈಕೆ ಮುಸ್ಲಿಂ ಯುವಕನನ್ನು ಮದುವೆಯಾಗಿದ್ದಾಳೆ. ಇವಳ ಜೊತೆಗೆ ಸೇರಿದರೆ ಇನ್ನುಳಿದ ಹೆಣ್ಣುಗಳು 'ದಾರಿ ತಪ್ಪುತ್ತಾರೆ' ಎಂದು ಅವರ ಜೊತೆ ಮಾತನಾಡುವುದು, ಅವರ ಸ್ತ್ರಿಶಕ್ತಿ ಸಂಘದ ಸಭೆಗಳಿಗೆ ಹೋಗುವುದು, ನಮ್ಮ ಕುಲಕ್ಕೆ ತಕ್ಕುದಲ್ಲವೆಂದು ಇಲ್ಲ ಸಲ್ಲದ ಅಪಪ್ರಚಾರಗಳನ್ನು ಹರಿಯಬಿಟ್ಟರು. ಇದಕ್ಕೆ ಯಾರಾದರೂ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಅಂತವರಿಗೆ ದಂಡ ವಿದಿಸಲಾಗುವುದು ಎಂದು ಹೇಳಲಾಯಿತು.

ಜಾತಿ ಬಹಿಷ್ಕಾರದ ಪತವಾ ಹೊರಡಿಸಿದರು.

ಇವರ ಈ ತೀರ್ಮಾನವನ್ನು ಸ್ತ್ರಿಶಕ್ತಿ ಗುಂಪಿನ ಮಹಿಳೆಯರು ದಿಕ್ಕರಿಸಿದರು. ಇದನ್ನು ತೀವ್ರವಾಗಿ ಪರಿಗಣಿಸಿದ ಈ ಧರ್ಮಾಂಧ ಗಣನಾಯಕರು ಪತವಾ ಹೊರಡಿಸಿಯೇಬಿಟ್ಟರು. ಶಾಂತಾಬಾಯಿ ಪಡತಾರೆ ಹಾಗೂ ಅವಳ ಭಾಗ್ಯಜ್ಯೋತಿ ಸ್ತ್ರಿಶಕ್ತಿ ಗುಂಪಿನ ಸದಸ್ಯ ಕುಟುಂಬಗಳು ಇವರ ಜೊತೆಗೂಡಿರುವ ಪರಂಜ್ಯೋತಿ ಸ್ತ್ರಿಶಕ್ತಿ ಗುಂಪಿನ ಕುಟುಂಬಗಳಿಗೆ ಜಾತಿಯಿಂದ ಬಹಿಷ್ಕಾರ ಹಾಕಲಾಯಿತು. ಇವರ ಜೊತೆಗೆ ಮಾತನಾಡಿದವರಿಗೆ 5000 ರೂ.ಗಳ ದಂಡ ಇಲ್ಲವೇ ಅವರನ್ನು ಜಾತಿಯಿಂದ ಬಹಿಷ್ಕಾರ ಹಾಕಲಾಗಿದೆ ಎಂದು ಆದೇಶ ಹೊರಡಿಸಿದರು ಮಾತ್ರವಲ್ಲ ಧಣಿಗಳು ಕಲ್ಲು ವಡೆಯುವ ಕೆಲಸ ಬಂದ್ ಮಾಡಿದರು.

ರಾತ್ರಿ ಕುಡಿದು ಬಂದು ಮಹಿಳಾ ಮುಖಂಡರನ್ನು ಹಿಗ್ಗಾಮುಗ್ಗಾ ಬಯ್ಯುವುದು, ಹೊಡೆಯುವುದು ಅವ್ಯವಹಿತವಾಗಿ ಸಾಗಿತು. ಇವರ ಗೂಂಡಾಗಿರಿಗೆ ಹೆದರಿದ ಮಹಿಳೆಯರು ಸ್ತ್ರಿಶಕ್ತಿ ಸ್ವಸಹಾಯ ಗುಂಪು ರಚಿಸಲು ಸಹಾಯಕರಾಗಿದ್ದ ಕ್ರಿಶ್ಚನ್ ಮಿಶನರಿಯಾದ ಅನೌಪಚಾರಿಕ ಶಿಕ್ಷಣ ಸಂಸ್ಥೆ ಹಾಗೂ ಫೆಡಿನಾ ಸ್ವಯಂ ಸಂಸ್ಥೆ ಮೊರೆ ಹೋದರು. ಜಾತೀಯ ಶಕ್ತಿಗಳ ಬೆದರಿಕೆಗೆ ಹೆದರಿದ ಫೆಡಿನಾ ಸಂಸ್ಥೆ ಕೂಡಾ ಇವರನ್ನು ಮಧ್ಯದಲ್ಲಿ ಕೈಬಿಟ್ಟು ಹಿಂದಕ್ಕೆ ಸರಿಯಿತು. ಇತರ ರಾಜಕೀಯ ಮುಖಂಡರಲ್ಲಿ ತಿರುಗಾಡಿ ಕೊನೆಗೆ ರೈತಸಂಘ ಹಾಗೂ ಜನವಾದಿ ಮಹಿಳಾ ಸಂಘಕ್ಕೆ ಮೊರೆ ಹೋದರು.

ಬಯಲಿಗೆ ಬಂದ ಬಹಿಷ್ಕಾರ

ನಗರದ ನಾಗರೀಕತೆಯ ಬೆಳಕಿನ ದೀಪದ ಕೆಳಗಿನ ಕತ್ತಲೆಯಂತೆ ಜೀವಿಸುತ್ತಿದ್ದ ಈ ಜನಗಳ ಅನಿಷ್ಟ ಪದ್ಧತಿಗಳನ್ನು ಹೊರಜಗತ್ತಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಪೊಲೀಸ್ ಇಲಾಖೆಯವರ ಗಮನಕ್ಕೆ ರೈತ ಸಂಘ ಮಹಿಳಾ ಸಂಘಟನೆ ತಂದರೂ ಜಿಲ್ಲಾಧಿಕಾರಿಗಳು ಇದು ಬಹಿಷ್ಕಾರ ಅಲ್ಲ, ಇದೊಂದು ಕುಟುಂಬ ಕಲಹ ಎಂದು ಹೇಳಿ ಕೈ ತೊಳೆದುಕೊಂಡಿದ್ದಾರೆ.

ನಾವು ಬಹಿಷ್ಕಾರ ಹಾಕಿಲ್ಲ, ಯಾವುದೇ ತನಿಖೆಗೆ ಸಿದ್ಧ ಎಂದು ಈ ಸಮಾಜದ ಮುಖಂಡರು ಭಂಡ ಹೇಳಿಕೆ ನೀಡಿದರು. ಆದರೆ ಓಣಿಯಲ್ಲಿ ಮಾತ್ರ ಈ ಭಂಡರು ಕುಡಿದು ಬಂದು ದಿನವು ಗಲಾಟೆ ಮಾಡುತ್ತಲೇ ಇದ್ದರು. ಬಹಿಷ್ಕಾರ ತೆರವುಗೊಳಿಸದೆ ಇದ್ದಲ್ಲಿ ಹೋರಾಟ ಮಾಡಲಾಗುವುದೆಂದು ಮಹಿಳೆಯರು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು.

ಬೃಂದಾ ಕಾರಟ್ ಅವರಿಂದಲೂ ಛೀಮಾರಿ

ಜನವಾದಿ ಮಹಿಳಾ ಸಂಘಟನೆ 5ನೇ ರಾಜ್ಯ ಸಮ್ಮೇಳನಕ್ಕೆ ಆಗಮಿಸಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಅವರು ಪತ್ರಿಕಾ ಸಮ್ಮೇಳನದಲ್ಲಿ ತೀವ್ರವಾಗಿ ಖಂಡಿಸಿ ಬಹಿಷ್ಕಾರಕ್ಕೊಳಗಾದ ಮಹಿಳೆಯರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಸರಕಾರಕ್ಕೆ ಆಗ್ರಹಿಸಿದರು.

ಕೊನೆಗೂ ಹೋರಾಟ ಮತ್ತು ಜಯ

ಬಹಿಷ್ಕಾರದಿಂದ ಬೇಸತ್ತು ಮಹಿಳೆಯರು ಜನವಾದಿ ಮಹಿಳಾ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿಯ ಮುಂದೆ : ಅಕ್ಟೋಬರ್ 11 ರಿಂದ ಅನಿರ್ಧಿಷ್ಟ ಧರಣಿ ಸತ್ಯಾಗ್ರಹ ಪ್ರಾರಂಭಿಸಿಯೇ ಬಿಟ್ಟರು. ಹಗಲು ರಾತ್ರಿ ನಡೆದ ಮಹಿಳೆಯ ಧರಣಿ ಸತ್ಯಾಗ್ರಹವು ದಿನದಿನವು ಬೆಳೆಯುತ್ತಲೇ ಹೋಯಿತು. ಓಣಿ ಓಣಿಗಳಿಂದ ಅಸಂಖ್ಯಾತ ಮಹಿಳೆಯರು ಸ್ವಯಂಸ್ಫೂರ್ತಿಯಿಂದ ಈ ಹೋರಾಟದಲ್ಲಿ ಭಾಗವಹಿಸಿದರು. ಜಿಲ್ಲೆಯಾದ್ಯಂತ ಇವರ ಧ್ವನಿ ಧ್ವನಿಸಲಾರಂಭಿಸಿತು. ಇವರ ಹೋರಾಟಕ್ಕೆ ಅನೇಕ ಸಂಘಸಂಸ್ಥೆಗಳು ಬೆಂಬಲ ನೀಡಲಾರಂಭಿಸಿದವು.

ಪ್ರತಿದಿನ ತಹಶಿಲ್ದಾರ ಹಾಗೂ ಜಿಲ್ಲಾ ಕಛೇರಿಗೆ ಬರುವ ಸಾವಿರಾರು ಜನ ಈ ಅನಿಷ್ಟ ಪದ್ಧತಿಯನ್ನು ಕೇಳಿ ಸರಕಾರಕ್ಕೆ ಹಾಗೂ ಸೊಸಾಯಿಟಿಯ ಈ ಪುಡಾರಿಗಳಿಗೆ ಛೀಮಾರಿ ಹಾಕಲಾರಂಭಿಸಿದರು. ಇದರಿಂದ ಸುಲಿಗೆಕೋರರು ಕೊನೆಗೂ ಮೆತ್ತಗಾಗಬೇಕಾಯಿತು. ಧರಣಿ ಸತ್ಯಾಗ್ರಹದ ಒಂಭತ್ತನೇಯ ದಿನಕ್ಕೆ ಬಂದು ಬಹಿಷ್ಕಾರ ಹಾಕುವ ಹಾಗೂ ದಂಡ ಹಾಕುವ ಪದ್ಧತಿ ಕೈಬಿಡುವುದಾಗಿ ಹೇಳಿ ಲಿಖಿತ ಹೇಳಿಕೆ ಕೊಟ್ಟ ನಂತರ ತಹಶೀಲ್ದಾರ ಎಸ್.ಎಸ್.ನಾಗರಾಣ ಹಾಗೂ ಡಿ.ಎಸ್.ಪಿ. ಚವ್ಹಾಣ ಅವರ ಮಧ್ಯಸ್ಥಿಕೆಯಿಂದ ಸತ್ಯಾಗ್ರಹ ಮುಕ್ತಾಯವಾಯಿತು.

ಜನವಾದಿ ಮಹಿಳಾ ಸಂಘಟನೆಯ ಲಕ್ಷ್ಮಿ ಮೈಲಾರಿ, ಸುರೇಖಾ ರಜಪೂತ ಹೀರಾಬಾಯಿ ಹಜೇರಿ ಶೇಖವ್ವಾ ಬಂದಪಟ್ಟಿ, ಜಯಾಪವಾರ, ಸಾವಿತ್ರಾ ಸಾಳುಂಕೆ, ಜುಬೆದಾ ಹಣಗಿ,

→

ದಕ್ಷಿಣ ಕನ್ನಡ - ಉಡುಪಿ ಜಿಲ್ಲೆಗಳಿಗೆ ವರದಾನವಾಗಬೇಕಿದ್ದ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಮುಚ್ಚುವ ಹಂತಕ್ಕೆ ಬಂದದ್ದು ಹೇಗೆ? ಏಕೆ? ಸಿಹಿ ಸಕ್ಕರೆ ಕಾರ್ಖಾನೆಯನ್ನು ಕಹಿಯಾಗಿಸಿದ ಕರ್ಮಕಾಂಡದ ಅನಾವರಣ

ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಹೀಗೇಕಾಯಿತು.......?

ಡೇವಿಡ್ ಎ. ಕರ್ಕಡ

ಮಂಗಳೂರು - ಉಡುಪಿ ಜಿಲ್ಲೆಗಳಿಗೆ ವರದಾನವಾಗಬೇಕಾಗಿದ್ದ ಬ್ರಹ್ಮಾವರದ ಸಹಕಾರಿ ಸಕ್ಕರೆ ಕಾರ್ಖಾನೆ ಇಂದೂ ನಾಳೆಯೋ ಮುಚ್ಚುವ ಹಂತಕ್ಕೆ ಬರಲು ಕಾರಣಗಳೇನು? ಸುಮಾರು 400 ಎಕ್ರೆಗಳಿಗೂ ಹೆಚ್ಚು ಭೂಮಿಯನ್ನು ಹೊಂದಿರುವ ಅಚ್ಚುಕಟ್ಟಿನ ಜಾಗದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ತಾಗಿಕೊಂಡೇ ಇರುವ ಕಾರ್ಖಾನೆ ಪೂರ್ಣಪ್ರಮಾಣದ ಉತ್ಪಾದನೆಗೆ ತೊಡಗುವ ಮೊದಲೇ ನಷ್ಟದಲ್ಲಿಯೇ ಕುಂಟುತ್ತಾ ಸಾಗಿಬಂದು ವರ್ಷದಿಂದ ವರ್ಷಕ್ಕೆ ಅವನತಿಯತ್ತ ಸಾಗಲು ಕಾರಣಗಳೇನು? ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಇಂದು ಬೇಕಾಗಿದೆ. ಅತೀ ಬೆಲೆಬಾಳುವ ಭೂಮಿಯನ್ನು ಹೊಂದಿರುವ ಸಹಕಾರಿ ಸಕ್ಕರೆ ಕಾರ್ಖಾನೆ ಕಳೆದ 3 ವರ್ಷಗಳಿಂದ ಕಬ್ಬುಬೆಳೆಗಾರರಿಗೆ ಸರಿಯಾದ ಪಾವತಿಯನ್ನು ಮಾಡಲಾಗಿಲ್ಲ. ಕಳೆದ 22 ತಿಂಗಳಿನಿಂದ ಕಾರ್ಖಾನೆಯ 196 ಮಂದಿ ಕಾರ್ಮಿಕರಿಗೆ ಸಂಬಳವೂ ಪಾವತಿಯಾಗಿರುವುದಿಲ್ಲ. ಕಬ್ಬು ಬೆಳೆಯುವ ರೈತರ ಉತ್ಸಾಹ ಬತ್ತಿಹೋಗಿದೆ. ಕಬ್ಬು ಬೆಳೆದರೆ ಸ್ವಲ್ಪವಾದರೂ ಲಾಭದಾಯಕ ಬೆಲೆ ಬರಬಹುದು, ತನ್ನ ಜೀವನ ಹಸನಾಗಬಹು ಎಂಬ ಭಾವನೆಯಿಂದ ಕಬ್ಬು ಬೆಳೆಯನ್ನು ಹೆಚ್ಚೆಚ್ಚು ಬೆಳೆಯಲು ರೈತರು ಆರಂಭಿಸಿದರು. ಬೆಳೆದ ಕಬ್ಬಿಗೆ ಸರಿಯಾದ ಲಾಭದಾಯಕವಾದ ಕ್ರಯವೂ ದೊರೆಯದೆ ಬೆಳೆದ ಕಬ್ಬು ಗದ್ದೆಯಲ್ಲೇ ಒಣಗಿಹೋದ ದಾರುಣವಾದ ದೃಶ್ಯವನ್ನು ಕಂಡ ರೈತರು ಕಬ್ಬು ಬೆಳೆಯುವ ಉತ್ಸಾಹವನ್ನೇ ಕಳೆದುಕೊಂಡರು. ಪ್ರಾರಂಭದಲ್ಲಿ ಒಂದೇ ಜಿಲ್ಲೆಯಾಗಿದ್ದ ದ.ಕ. ಜಿಲ್ಲೆಯ ಹೆಚ್ಚಿನ ತಾಲ್ಲೂಕುಗಳಲ್ಲಿ ಕಬ್ಬು ಬೆಳೆದು ಸಹಕಾರಿ ಸಕ್ಕರೆ ಕಾರ್ಖಾನೆಯ ಬೆಳವಣಿಗೆಗೆ ಸಹಾಯವಾಗಬೇಕಾಗಿದ್ದ ಪರಿಸ್ಥಿತಿ ಇಂದು ಬದಲಾಗಿದೆ. ಉಭಯ ಜಿಲ್ಲೆಗಳ ಎಲ್ಲಾ ರೈತರೂ ಕಬ್ಬು ಬೆಳೆಸಲು ಇದ್ದ ಉತ್ಸಾಹ ಇಂದು ಇಲ್ಲವಾಗಿದೆ.

ವಾರಾಹಿ ನೀರಾವರಿ ಯೋಜನೆ

ಕಳೆದ 25 ವರ್ಷಗಳಿಗೆ ಮೊದಲು ಕೇವಲ 35 ಕೋಟಿ ರೂ.ಗಳಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಬಹುದಾಗಿದ್ದ ಯೋಜನೆ ಇಂದಿಗೂ ಪೂರ್ಣಗೊಳ್ಳದೆ, ನೀರಾವರಿಯ ಪ್ರಥಮ ಹಂತದ ಯೋಜನೆಗಳು ಕೂಡಾ ಅರ್ಧದಲ್ಲಿಯೇ ಉಳಿದ ಖರ್ಚು ಮಾಡಲಾದ ಹಣವೂ ಕಾಲುವೆಗಳು ಕುಸಿದು, ಯಾ ಕುಸಿಯುವ ಹಂತದಲ್ಲಿಯೇ ಉಳಿದುಬಿಟ್ಟಿದೆ. ಹೀಗಾಗಿ ಕುಂದಾಪುರ ತಾಲೂಕಿನ 33 ಗ್ರಾಮಗಳು, ಉಡುಪಿ ತಾಲೂಕಿನ 35



ಈಗೆಲ್ಲಿಗೆ ...?

ಗ್ರಾಮಗಳು ಬ್ರಹ್ಮಾವರ ಕ್ಷೇತ್ರದಲ್ಲಿ ನೀರಾವರಿಗೊಳಪಡಬೇಕಾಗಿತ್ತು. ಆದರೆ ಅರ್ಧದಲ್ಲಿ ಉಳಿದಿರುವ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಲು ಇನ್ನೂ 350 ಕೋಟಿ ರೂ.ಗಳಾದರೂ ಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಯೋಜನೆ ಪೂರ್ಣಗೊಂಡಿದ್ದರೆ ಈ ಪ್ರದೇಶಗಳು ನೀರಾವರಿಗೊಳಪಟ್ಟು ಹಸಿರುಕ್ರಾಂತಿ ಕಂಗೊಳಿಸಿ ರೈತರ ಮುಖದಲ್ಲಿ ಸಂತಸ ನಲಿದಾಡಬಹುದಾದ ಯೋಜನೆ ಇದಾಗಿದೆ.

ಏತ ನೀರಾವರಿಯ ಮೂಲಕವೂ ಈ ಯೋಜನೆ ಅನುಷ್ಠಾನಗೊಳ್ಳಬೇಕಾಗಿದ್ದು ಉಡುಪಿ ತಾಲೂಕಿನ ಬ್ರಹ್ಮಾವರ ಮತ್ತು ಕುಂದಾಪುರ ಪ್ರದೇಶ ಇಂದು ಯೋಜನೆ ಪೂರ್ಣಗೊಳ್ಳುವುದನ್ನು ಕಾಯುವಂತಾಗಿದೆ. ಇತ್ತೀಚೆಗೆ ಸಂತಸದ ಸುದ್ದಿಯೆಂದರೆ ನೀರಾವರಿ ನಿಗಮದಡಿಯಲ್ಲಿ ಈ ಯೋಜನೆಯನ್ನು ಸೇರಿಸಲಾಗಿದ್ದು ಅಲ್ಪ ಪ್ರಮಾಣದಲ್ಲಿ ಹಣ ಬಿಡುಗಡೆಯಾಗಿ ಕೆಲಸ ಪ್ರಾರಂಭಗೊಳ್ಳುವಂತಾಗಿದೆ. ಪ್ರಾರಂಭಗೊಳಿಸಲಾಗಿರುವ ಕೆಲಸಗಳನ್ನು ಯೋಜನೆ ಪೂರ್ಣಗೊಳ್ಳುವವರೆಗೆ ಛಲದಿಂದ ಮುಂದುವರಿಸುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕಾಗಿದೆ.

ವಿದ್ಯುತ್ ಉತ್ಪಾದಕ ಘಟಕ

ಕಾರ್ಯಾರಂಭಗೊಂಡು ಕರ್ನಾಟಕದ ಕೆಲವೆಡೆ ವಿತರಣೆಗಾಗಿ ವಿದ್ಯುತ್ ನಿಗಮದದ ಶಿವಮೊಗ್ಗ ಕೇಂದ್ರದ ಮೂಲಕ ಸರಬರಾಜು ಆಗುತ್ತಿದೆ. ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಆರಂಭಗೊಳ್ಳುವಂತಾದರೆ ವಿದ್ಯುತ್ ಕೊರತೆಯನ್ನು ಸ್ವಲ್ಪಮಟ್ಟಿ ಗಾದರೂ ಕಡಿಮೆಗೊಳಿಸಬಹುದು. ವಿದ್ಯುತ್ ಉತ್ಪಾದನೆಗೊಂಡ ನಂತರ ಹೊರಬಿಡಲಾಗುವ ನೀರನ್ನು ಏತನೀರಾವರಿಯ ಮೂಲಕ ಕಾಲುವೆಗಳಲ್ಲಿ ಹರಿಸಿ ಕೃಷಿ ಅಭಿವೃದ್ಧಿಗಾಗಿ ಮತ್ತು ಕುಡಿಯುವ ನೀರಿನ ಪೂರೈಕೆಯೂ ಸೇರಿದಂತೆ ಜನರ ಅವಶ್ಯಕತೆಗಳಿಗೆ ಉಪಯೋಗವಾಗಿಸಬಹುದಾಗಿದೆ. ಕುಂಟುತ್ತಾ ಸಾಗಿ 25 ವರ್ಷಗಳಲ್ಲಿ ಪೂರ್ಣಗೊಳಿಸಲಾರದ ಯೋಜನೆಯನ್ನು ಪೂರ್ಣಗೊಳಿಸಲು - ಸ್ವಾರ್ಥವನ್ನು ಬದಿಗಿಟ್ಟು. ಆಳುವ ಮಂದಿ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗಿದೆ.

ಒಂದಕ್ಕೊಂದು ಪೂರಕವಾದ ಸಕ್ಕರೆ ಕಾರ್ಖಾನೆ, ವಾರಾಹಿ ನೀರಾವರಿ ಯೋಜನೆ ಕಬ್ಬು ಬೆಳೆಗಾರರ ಪ್ರಶ್ನೆಗಳನ್ನು ಪರಿಹರಿಸಲು ನಿಜವಾದ ಇಚ್ಛಾಶಕ್ತಿ ಬೇಕಾಗಿದೆ. ಕೇವಲ 50 ಕೋಟಿ ರೂ.ಗಳನ್ನು ವಿನಿಯೋಗಿಸಲು ಸಾಧ್ಯವಾದರೆ ಕಾರ್ಖಾನೆಯನ್ನು ಉಳಿಸಿ ರಕ್ಷಿಸಲು ಸಾಧ್ಯವಿದೆ.

ಎಡವಿದ್ದಲ್ಲಿ? ಯಾಕೆ ? ಹೀಗೇಕಾಯಿತು? ಸರಿಯಾದ ತನಿಖೆಯ ಮೂಲಕ ಮಾತ್ರವೇ ಸತ್ಯವನ್ನು ಹುಡುಕಲು ಸಾಧ್ಯವಾಗಬಹುದಾಗಿದೆ. ಆದರೆ ಕಣ್ಣಿಗೆ ಕಾಣುವ ಭ್ರಷ್ಟಾಚಾರದ ಬೇರುಗಳನ್ನು ಹುಡುಕಬೇಕೆಂದು ಒತ್ತಾಯಬಂದಲ್ಲಿ ಮಾತ್ರ ಈ ರೀತಿಯ ನಿಜ ಸಂಗತಿಗಳು ಬೆಳಕು ಕಾಣಬಹುದು.

ಸಕ್ಕರೆ ಕಾರ್ಖಾನೆ ಆರಂಭದಿಂದಲೂ ಕೆದಕಿ ನೋಡಬೇಕು.. ಹಾಗಾದಲ್ಲಿ ನಷ್ಟಕ್ಕೆ ಹೊಣೆ ಯಾರು? ಎನ್ನುವ ಪ್ರಶ್ನೆ ಪರಿಹಾರವಾಗಲಿದೆ. ಆಡಳಿತ ನಿರ್ದೇಶಕರುಗಳು ಸಕ್ಕರೆ ಕಾರ್ಖಾನೆಗಳಿಗೆ ಹಾಕಲಾದ ಬಂಡವಾಳದಿಂದ, ಬಿಡುಗಡೆ ಮಾಡಲಾದ ಹಣದಿಂದ ಕಬ್ಬು ಬೆಳೆಗೆಂದು ಎಷ್ಟೆಷ್ಟು ಹಣ ಪಡೆದಿದ್ದಾರೆ? ಅದರಲ್ಲಿ ಅವರಗಳು ಮರು ಪಾವತಿಸಿದ್ದೆಷ್ಟು? ಕೊಳ್ಳೆ ಹೊಡೆದದ್ದೆಷ್ಟು? ಎಂಬ ವಿವರ ಬಯಲಾದಾಗ ಮಾತ್ರ ನಿಜವಾದ ಹೂರಣ ಬಯಲಿಗೆ ಬರಲಿದೆ, ಅದೇ ರೀತಿಯಾಗಿ ಆಡಳಿತ ನಿರ್ದೇಶಕರುಗಳಾಗಿ ನೇಮಕಗೊಂಡವರು ಅಧಿಕಾರಿಗಳಾಗಿ ಮೇಲ್ಮಟ್ಟದಲ್ಲಿ ಬಂದವರೆಲ್ಲರ ಮೋಜು ಮೌಜಿನ ಜೀವನ - ಹೆಚ್ಚಿನೆಲ್ಲವೂ ನಡೆಯುವಂತೆ ಲಂಗುಲಗಾಮಿಲ್ಲದೆ ನಡೆದಿದೆ. ತಿಂಗಳೊಂದರ ಫೋನ್ ಬಿಲ್ಲುಗಳೆಷ್ಟು ಇದು ಯಾವ ಬಗ್ಗೆ ನಡೆದಿದೆ? ಯಾವತ್ತೂ ಮುಚ್ಚಿ ಹಾಕಲಾದ ಸತ್ಯ ಜನರಿಗೆ, ಶೇರುದಾರರಿಗೆ ತಿಳಿಯುವ ಹಾಗಿಲ್ಲ, ಯಾಕೆಂದರೆ ಈಗ ಎಲ್ಲರ ಗಮನ ಬೇರೆ ಕಡೆಗಿದೆ. ಸೇಲ್ಸ್ ಮತ್ತು ಪರ್ಚೇಸಿಂಗ್ ವಿಭಾಗದಲ್ಲಿ ಏನೇನು ನಡೆಯುತ್ತಿದೆ, ಕಳಪೆ ಸಾಮಗ್ರಿಗಳನ್ನು ತರುವಲ್ಲಿ ಬಿಲ್ಲುಗಳು, ಉತ್ತಮಮಟ್ಟದ (ಸಾಮಾನು) ಉಪಕರಣಗಳ ಬಿಲ್ಲು ತೋರಿಸಲಾಗಿದೆ, ಎಲ್ಲವೂ ಕಳಪೆ ಮಾಲು ತರಲಾಗುತ್ತಿದೆ. ಸಕ್ಕರೆ ಕಾರ್ಖಾನೆಯ ವಠಾರದಲ್ಲಿ ಬಿದ್ದುಕೊಂಡಿರುವ ದೃಶ್ಯ ಕಂಡುಬರುತ್ತದೆ. ಎಲ್ಲಿ ಕೂಡಾ ಈ ಎರಡೂ ವಿಭಾಗಗಳನ್ನು ಒಬ್ಬರೇ ನೋಡಿಕೊಂಡ ಉದಾಹರಣೆ ಬೇರೆಲ್ಲಿಯೂ ಕಂಡುಬರಲಾರದು. ಸಕ್ಕರೆ ಕಾರ್ಖಾನೆಯಲ್ಲಿ ಮಾತ್ರ ಸೇಲ್ಸ್-ಪರ್ಚೆಸ್ ಎರಡೂ ವಿಭಾಗಗಳೂ ಒಬ್ಬರ ಮೂಲಕವೇ ನಡೆಸಲ್ಪಡುತ್ತದೆ. ಪ್ರತಿಯೊಬ್ಬರೂ ಆಡಳಿತದ ಕುರ್ಸಿ ಹಿಡಿದಾಗಲೂ ಪಕ್ಷದ ಕಛೇರಿಗಳಂತೆ ಉಪಯೋಗಿಸಲ್ಪಟ್ಟದ್ದರಿಂದ ಕಾರ್ಖಾನೆಗೆ ಈ ದುರವಸ್ಥೆ ಬರಲು ಕಾರಣವಾಗಿದೆ. ಇತ್ತೀಚೆಗೆ ನಿವೃತ್ತಿಯಾದ ಆಡಳಿತ ನಿರ್ದೇಶಕರ ಬಗ್ಗೆ ಕಾರ್ಖಾನೆಯಲ್ಲಿ ಯಾರೊಬ್ಬರೂ ತಲೆಕೆಡಿಸಿ ಕೊಂಡಿಲ್ಲ. ಎಲ್ಲರಿಗೂ ಎಲ್ಲವೂ ಗೊತ್ತಿದ್ದರೂ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ ನಿರಂತರವಾಗಿ ಎಲ್ಲವೂ ನಡೆದುಬಂದಿದೆ, ಬರುತ್ತಿದೆ. ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ ಅಷ್ಟೇ ಮಾತ್ರ ವ್ಯತ್ಯಾಸ. ಈಗಲೂ ಕಾರ್ಖಾನೆಯನ್ನು ಉಳಿಸಲು ಸಾಧ್ಯವಿದೆ. ಆದರೆ ಎಲ್ಲ ರೋಗಕ್ಕೆ ಒಂದೇ ಮದ್ದು ಅದು ಖಾಸಗೀಕರಣದಿಂದ ಮಾತ್ರ ಎಂದು ಹುಯಿಲೆಬ್ಬಿಸಲಾಗುತ್ತಿದೆ. ಈಗಲೂ ಸರಿಯಾದ ಯೋಜನೆಗಳಿಲ್ಲ. ಸರ್ಕಾರದಿಂದ ಹಣ ಬರುವಂತಿಲ್ಲ ಎಂಬ ಭಾವನೆಯನ್ನು ಪ್ರಚಾರ ಮಾಡಲಾಗುತ್ತದೆ. ಇದಕ್ಕಾಗಿ ರಾಷ್ಟ್ರೀಯ ಹೆದ್ದಾರಿಗೆ ತಾಗಿ ಕೊಂಡಿರುವ ಅತ್ಯಂತ ಬೆಲೆ ಬಾಳಬಹುದಾದ ಭೂಮಿಯನ್ನು ಮಾರಾಟಮಾಡಿ ಸಕ್ಕರೆ ಕಾರ್ಖಾನೆ ಕಾರ್ಮಿಕರ ಬಾಕಿ ತೀರಿಸಿ ನಿವೃತ್ತಿಗೊಳಿಸ ಲಾಗುವ ಬಗ್ಗೆ ಚಿಂತನೆ ನಡೆಯುತ್ತಿದೆ.

ಹಿಂದೆ ದಿ. ಮಾನ್ಯ ಶ್ರೀ ಟಿ.ಎ.ಪೈಗಳಂತಹ ಉದ್ಯೋಗಪತಿಗಳು ಬ್ಯಾಂಕರರಾಗಿದ್ದವರು ಎಂದೂ ಖಾಸಗೀಕರಣದ ಬಗ್ಗೆ ಮಾತನಾಡಲಿಲ್ಲ. ಸರ್ಕಾರಿ ಕ್ಷೇತ್ರದಲ್ಲಿಯೇ ಎಲ್ಲವನ್ನು ಲಾಭದಾಯಕವಾದ ಪ್ರಯತ್ನ ನಡೆಸಿ ಯಶಸ್ವಿಯಾಗಿ ಮುನ್ನಡೆಸಿದ ಕೀರ್ತಿ ಅವರಿಗಿತ್ತು. ಇಂದು ಮಾತ್ರವೇ ಎಲ್ಲವನ್ನೂ ಖಾಸಗೀಕರಣ ಗೊಳಿಸ ಬೇಕೆಂಬ ಭ್ರಮೆಯಲ್ಲಿ ತೇಲಾಡುವವರಿಗೆ ಕಡಿಮೆ ಏನಿಲ್ಲ. ಹಿಂದೆ ಘನ ಕೈಗಾರಿಕೆ, ವಿಮಾ ಕ್ಷೇತ್ರ, ಬ್ಯಾಂಕುಗಳು, ಆಹಾರ ನಿಗಮ ಎಲ್ಲ ಕಡೆಯಲ್ಲಿ ಲಾಭದಾಯಕವಾಗಿ ನಡೆಸಿಕೊಂಡು ಹೋದ ದಿ. ಟಿ.ಎ. ಪೈಗಳವರ ದಕ್ಷತೆ ಒಪ್ಪಿಗೆ ಇರಲಿ ಎಲ್ಲರೂ ಮೆಚ್ಚುವಂತಾಗಿತ್ತು.

ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ಸಂದರ್ಭ ಅನೇಕ ಭರವಸೆಗಳನ್ನು ನೀಡಲಾದ ಆಡಳಿತ ನಡೆಸಿದ ಮಂದಿ ಇಂದು ಮೌನವಾಗಿದ್ದಾರೆ. ಕಾರ್ಖಾನೆ ಉಳಿಸಬೇಕೆಂಬ ಯಾವ ಭಾವನೆಯೂ ಅವರಿಗಿಲ್ಲ.

ಸಕ್ಕರೆ ಕಾರ್ಖಾನೆಯನ್ನು ಉಳಿಸುವಂತೆ ಮತ್ತು ಅದನ್ನು ನವೀಕರಣಗೊಳಿಸುವಂತೆ, ಉಪ ಉತ್ಪತ್ತಿಗಳನ್ನು ತಯಾರಿಸುವ ಯೋಜನೆಗಳಿಗಾಗಿ ಸರ್ಕಾರದ ಸಹಾಯ ಧನ ಪಡೆಯಲು ಸಕ್ಕರೆ ಕಾರ್ಖಾನೆ ಕಾರ್ಮಿಕರು, ಕಬ್ಬು ಬೆಳೆಗಾರರು, ಶೇರುದಾರರು, ನೀರಾವರಿ ಪ್ರದೇಶದ ರೈತರೂ ಸೇರಿದಂತೆ ಸಮಗ್ರ ರೈತರು ಸೇರಿ ಒಂದು ಈ ಹೋರಾಟ ಐಕ್ಯ ಹೋರಾಟವಾಗಿ ಮುಂದುವರಿದು ಕಾರ್ಖಾನೆ ಉಳಿದು ಉತ್ತಮ ಆಡಳಿತದೊಂದಿಗೆ ಮುಂದುವರೆಯು ವಂತಾಗಲೆಂದು ಹಾರೈಸೋಣ. ಐಕ್ಯ ಹೋರಾಟಕ್ಕೆ ಮುಂದಾಗೋಣ.

→

ಸುಂದರಾಬಾಯಿ ಪವಾರ, ಸೋನಾಬಾಯಿ ಬ್ಯಾಳಿ, ಲಕ್ಷ್ಮೀ ದಡೇಕರ, ಮುಕ್ತುಂಬಿ ಸುತಾರ, ಲಕ್ಷ್ಮೀಬಾಯಿ ಪಾಟೀಲ, ಜೈನುಬ್ಬಿ ಬದಾಮಿ, ಬಾನುಬ್ಬಿ ಸೈಯ್ಯದ, ಸಾಯಬ್ಬ ಶೇಖ, ಎಂ.ಎಂ.ಖಾನ, ಶಾರದಾ ವಸ್ತ್ರದ.

ಕರ್ನಾಟಕ ಪ್ರಾಂತ ರೈತ ಸಂಘದಿಂದ ಭೀಮಶಿ ಕಲಾದಗಿ ಅಣ್ಣಾರಾಯ ಈಳಗೇರ, ನಬಿಸಾಬ ಢವಳಗಿ, ರಾಮಣ್ಣ ಶಿರಗೋಳ, ಖಾಜೇಸಾಬ ಕೊಲ್ಹಾರ, ರಾಮಚಂದ್ರ ರೂಡಗಿ, ಪರಶುರಾಂ ಬಬಲೇಶ್ವರ ಶಿದ್ರಾಮ ದಾರ್ದಳ ಡಿವೈಎಫ್ಐ ಮುಖಂಡ ಬಸಲಿಂಗ ಕಪಾಲಿ, ರಾಜು ಕಳಗೊಂಡ, ಮಾಂತೇಶ ಹಂದಿಗಣೂರ ಎಸ್.ಎಫ್.ಐ. ಪ್ರೇಮಸಿಂಗ್ ರಾಠೋಡ ಮುಂತಾದವರು ಈ ಹೋರಾಟ ಯಶಸ್ವಿಯಾಗಲು ಶ್ರಮಿಸಿದರು.

ಭೀಮಸಿ ಕಲಾದಗಿಯವರ ಪ್ರತಿಕೃತಿ ದಹನದ ಪ್ರಹಸನ

ಈ ಹೋರಾಟ ಮುರಿಯಲೇ ಬೇಕೆಂದು ಸಂಪ್ರದಾಯವಾದಿಗಳು ಏನೆಲ್ಲ ಪ್ರಯತ್ನ ಮಾಡಿದ್ದಾರೆ. ರೈತ ಸಂಘದ ಜಿಲ್ಲಾ ಅಧ್ಯಕ್ಷ ಹಾಗೂ ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯ ಮತ್ತು ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿಯವರ ಮಕ್ಕಳಾದ ಸುರೇಶ ಹಾಗೂ ಮಾಳಪ್ಪ ಇವರಿಗೂ ಭೆಟ್ಟಿಯಾಗಿ ನಿಮ್ಮ ತಂದೆ ನಮ್ಮ ವ್ಯವಹಾರದ ಮಧ್ಯೆ ತಲೆ ಹಾಕಬಾರದು ಎಂದು ಅವರಿಂದ ಹೇಳಿಸಿದ್ದಾರೆ. ಕೊನೆಗೆ ಒಂದು ದಿನ ಮಹಿಳೆಯರು ಹುಡುಗರನ್ನು ಮನೆಗೆ ಕಳುಹಿಸಿ ಭೀಮಸಿ ಕಲಾದಗಿಯವರ ಮೇಲೆ ಹಲ್ಲೆ ಮಾಡುವಂತೆ ಪ್ರಚೋದಿಸಲಾಗಿತ್ತು. ಮಾತ್ರವಲ್ಲ ಅವರ ಪ್ರತಿಕೃತಿಯನ್ನು ದಹಿಸುವ ಕಾರ್ಯಕ್ರಮ ಹಾಕಿಕೊಂಡದ್ದನ್ನು ಸಾರ್ವಜನಿಕರು ಹಾಗೂ ಪೋಲಿಸರ ಬೆದರಿಕೆಯಿಂದ ಕೈಬಿಡಲಾಯಿತು.

ಪ್ರಾಸಬದ್ಧವಾಗಿ ಘೋಷಣೆ ಕೂಗಿದ ಚಿಕ್ಕಮಕ್ಕಳು


ಪ್ರತಿದಿನ ತಾಯಿಂದಿರ ಕಂಕುಳಲ್ಲಿ ಕುಳಿತೋ ಇಲ್ಲ ಅವರ ಕಿರು ಬೆರಳು ಹಿಡಿದೋ ಸತ್ಯಾಗ್ರಹ ಟೆಂಟಿಗೆ ಬರುತ್ತಿದ್ದ ಮಕ್ಕಳು ತಮ್ಮ ತಾಯಂದಿರು ಕೂಗುವ ಘೋಷಣೆಗಳನ್ನು ಪ್ರಾಸಬದ್ಧವಾಗಿ ಕೂಗುವುದನ್ನು ರೂಡಿಸಿಕೊಂಡಿದ್ದು ಒಂದು ವಿಶೇಷವಾಗಿತ್ತು. ಚಹಾ ಡಬ್ಬ ಅಂಗಡಿಗಳಲ್ಲಿ ಚಹಾ ಸರಬರಾಜು ಮಾಡುತ್ತಿದ್ದ ಬಾಲಕಾರ್ಮಿಕ ಬಾಲಮಕ್ಕಳು ಗಿರಾಕಿಗಳಿಗೆ ಚಹಾ ನೀರು ಕೊಡುವ ಕೆಲಸ ಮಾಡುತ್ತಲೇ ತಾಯಂದಿರ ಘೋಷಣೆಗಳಿಗೆ ಏರಿದ ಧ್ವನಿಯಲ್ಲಿ ಸ್ಪಂದನ ನೀಡುವುದು ಮನಕರಗುವಂತಿತ್ತು.

ಮಹಿಳಾ ಮುಖಂಡರ ಮೇಲೂ ಬೆದರಿಕೆ

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಲಕ್ಷ್ಮೀ ಮೈಲಾರಿ ಅವರ ಮನೆಗೆ ಹೋಗಿ ನಮ್ಮ ಸಮಾಜದ ಈ ವ್ಯವಹಾರದಲ್ಲಿ ಭಾಗವಹಿಸಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎಂದು ಬೆದರಿಸಿದರು. ಸತ್ಯಾಗ್ರಹ ಟೆಂಟಿನಲ್ಲಿ ರಾತ್ರಿ ಹಗಲು ಮುಕ್ಕಾಂಹುಡಿದ್ದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಖಾ ರಜಪೂತ ಅವರು ಇದ್ದ ರಾತ್ರಿ ಸಮಯದಲ್ಲಿ ಕಲ್ಲು ತೂರಾಡಿ ಭಯ ಬೀಳಿಸುವ ಪ್ರಯತ್ನ ಮಾಡಿದ್ದು ಇದೆ.

ಬಹಿಷ್ಕಾರಕ್ಕೊಳಗಾದ ಕುಟುಂಬದ ಯುವಕರಿಂದ ಪ್ರತಿ ದಾಳಿ ಹಾಗೂ ರಾತ್ರಿ ಹಗಲು ಪಹರೆಯಿಂದಾಗಿ ಇದನ್ನೂ ಪರಿಣಾಮಕಾರಿಯಾಗಿ ಎದುರಿಸಲಾಯಿತು.

ಪೊಲೀಸರ ಸಕಾಲಿಕ ಮಧ್ಯೆ ಪ್ರವೇಶ ಟಿ.ವಿ. ಹಾಗೂ ಪತ್ರಿಕೆಗಳ ಪ್ರಚಾರ ಸಹಕಾರ ಮುಂತಾದುವುಗಳಿಂದಲೂ ಈ ಹೋರಾಟ ಯಶಸ್ವಿಯಾಗಲು ಸಾಧ್ಯವಾಯಿತು.



ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಿ: ಬಹುರಾಷ್ಟ್ರೀಯ ಕಂಪನಿಗಳಿಗೆ ಚೀನಾ ಎಚ್ಚರಿಕೆ

ಚೀನಾ ಬಂಡವಾಳಶಾಹಿ ದಾರಿಯನ್ನು ಹಿಡಿದಿದೆ ಎಂದು ಪದೇಪದೇ ಬಂಡವಾಳಶಾಹಿ ಮಾಧ್ಯಮಗಳು ಅಪಪ್ರಚಾರ ಮಾಡುತ್ತಲೇ ಇರುತ್ತವೆ. ಆದರೆ ವಾಸ್ತವದಲ್ಲಿ ಚೀನಾದ ಆಡಳಿತ ಅಲ್ಲಿ ಕಮ್ಯುನಿಸ್ಟ್ ಪಕ್ಷದ ಹತೋಟಿಯಲ್ಲಿದೆ. ಕಮ್ಯುನಿಸ್ಟ್ ಚೌಕಟ್ಟಿನೊಳಗೇ ಅವರು ಉದಾರೀಕರಣವನ್ನು ಸ್ವಲ್ಪ ಮಟ್ಟಿಗೆ ತಂದಿದ್ದಾರೆ ಎಂಬುದು ತಿಳಿದ ವಿಷಯ.

ಈಗ ಚೀನಾ ಸರ್ಕಾರ ಅಲ್ಲಿ ವ್ಯವಹಾರ ಮಾಡುತ್ತಿರುವ ಹಲವು ಬಹುರಾಷ್ಟ್ರೀಯ ಕಂಪನಿಗಳಿಗೆ ಎಚ್ಚರಿಕೆ ನೀಡಿದೆ. ಟ್ರೇಡ್ ಯೂನಿಯನ್ ಕಾಯಿದೆಗಳನ್ನು ಉಲ್ಲಂಘಿಸದಿರಿ' ಎಂದು. ಅಲ್ಲಿ ಬ.ಕಂ.ಗಳಾದ ವಾಲ್‌ಮಾರ್ಟ್, ಕೋಡಕ್, ಡೆಲ್ ಇತ್ಯಾದಿ ಕಂಪನಿಗಳಲ್ಲಿ ಟ್ರೇಡ್ ಯೂನಿಯನ್‌ಗಳು ಇಲ್ಲದೇ ಇರುವುದರಿಂದ ಅವುಗಳನ್ನು ಪ್ರಾರಂಭಿಸಬೇಕೆಂದೂ ಅಲ್ಲಿನ ಸರ್ಕಾರ ಈ ಕಂಪನಿಗಳಿಗೆ ಹೇಳಿದೆ. ಯಾಕೆಂದರೆ ಟ್ರೇಡ್ ಯೂನಿಯನ್‌ಗಳು ಇದ್ದರೆ ಕಾರ್ಮಿಕರ ಹಿತಾಸಕ್ತಿಗಳು ಸುರಕ್ಷಿತವಾಗಿರುವ ಸಾಧ್ಯತೆಗಳು ಹೆಚ್ಚುತ್ತವೆ. ಆದ್ದರಿಂದ ಪ್ರತಿಯೊಂದು ಕಂಪನಿಯಲ್ಲೂ ಟ್ರೇಡ್ ಯೂನಿಯನ್‌ಗಳು ಇರಬೇಕೆಂದು ಚೀನಾ ಸರ್ಕಾರ ಹೇಳಿದೆ.

ಚೀನಾ ಬಂಡವಾಳಶಾಹಿ ಪದ್ಧತಿಯ ದಾರಿ ಹಿಡಿದಿದೆ ಎಂದು ಹೇಳುವವರಿಗೆ ಇದು ಸರಿಯಾದ ಉತ್ತರವಲ್ಲವೇ?

ಬೆಲೆಯೇರಿಕೆಯ ಭೂತ !

ಮತ್ತೆ ಬೆಲೆಯೇರಿಕೆಯ ಭೂತ ದೇಶವನ್ನು ಕಾಡುತ್ತಿದೆ. ಮೊದಲನೇಯದಾಗಿ ಹಿಂದಿನ ಎನ್‌ಡಿಎ ಸರ್ಕಾರ ಹಲವು ಬೆಲೆಯೇರಿಕೆಯ ಕ್ರಮಗಳನ್ನು ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳದೇ ಹೋಗಿದ್ದಾಗ ತಾನೇ ಅಧಿಕಾರಕ್ಕೆ ಮರಳುವ ಆಸೆಯಿಟ್ಟುಕೊಂಡಿದ್ದ ಎನ್‌ಡಿಎ ಪುನಃ ಅಧಿಕಾರದಲ್ಲಿ ಸ್ಥಾಪಿತಗೊಂಡ ಮೇಲೆ ಯದ್ವಾತದ್ವಾ ಬೆಲೆ ಏರಿಸಬಹುದೆಂದು ಅಂದುಕೊಂಡಿತ್ತು. ಅದು ಹಾಗೆ ಮಾಡುತ್ತಲೂ ಇತ್ತು. ಆದರೆ ಜನ ಅದನ್ನು ಕಿತ್ತೆಸೆದರು. ಅದು ಅದುಮಿಟ್ಟಿದ್ದ ಬೆಲೆಗಳು ಒಮ್ಮೆಲೇ ಏರತೊಡಗಿದವು. ಅಲ್ಲದೆ ಅಂತರ್‌ರಾಷ್ಟ್ರೀಯವಾಗಿಯೂ ಬೆಲೆಗಳು ಅದರಲ್ಲೂ ತೈಲದ ಬೆಲೆ ಏರತೊಡಗಿದವು.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜನರ ಮೇಲೆ ಬೆಲೆಯೇರಿಕೆಯ ಹೊರೆ ಹೇರುವಲ್ಲಿ ಹಿಂಜರಿಕೆಯನ್ನೇನೂ ಇಟ್ಟುಕೊಂಡಿಲ್ಲ. ಆದರೆ ಎಡಪಕ್ಷಗಳ ಬೆಂಬಲ ಪಡೆದಿರುವ ಈ ಸರ್ಕಾರ ಈ ಪಕ್ಷಗಳ ಮಾತನ್ನು ಸ್ವಲ್ಪ ಮಟ್ಟಿಗಾದರೂ ಕೇಳಲೇಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಅದು ಪೂರ್ತಿ ಬೆಲೆ ಏರಿಕೆಯನ್ನು ಲಂಗುಲಗಾಮಿಲ್ಲದೆ ಜನಸಾಮಾನ್ಯರ ಮೇಲೆ ಹೇರುವುದು ಸಾಧ್ಯವಿಲ್ಲ. ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ಮತ್ತು ಪತ್ತಾ ನೀತಿ ಸಹ ಹಣದುಬ್ಬರ ಏರಲಿದೆ ಎಂಬ ಸೂಚನೆ ನೀಡಿದೆ. ಇದರ ಜೊತೆಗೆ ಬಡ್ಡಿ ದರಗಳೂ ಏರಲಿದ್ದು ಆರ್ಥಿಕದಲ್ಲಿ ಹಲವು ಹತೋಟಿ ಕ್ರಮಗಳನ್ನು ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಿದೆ. ಜನಸಾಮಾನ್ಯರ ಮೇಲಿನ ಹೊರೆ ಒಮ್ಮೆಲೇ ತೀವ್ರವಾಗಿ ಏರುವುದು ಎಡಪಕ್ಷಗಳ ಒತ್ತಡದಿಂದಾಗಿ ಅಷ್ಟು ಸುಲಭವಲ್ಲ.

ವಿದೇಶಿ ನುಂಗಣ್ಣಗಳಿಗೆ ಅನುಕೂಲಕರ ನೀತಿ

ವಿದೇಶಿ ಬ್ಯಾಂಕುಗಳು ಭಾರತದ ಖಾಸಗಿ ವಲಯದ ಬ್ಯಾಂಕುಗಳನ್ನು ನುಂಗಲು ಸಹಾಯವಾಗುವ ನೀತಿಯನ್ನು ಜಾರಿಗೆ ತರುವ ಆತುರದಲ್ಲಿ ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರಿದ್ದಾರೆ. ಈ ವಿದೇಶಿ ಬ್ಯಾಂಕುಗಳು ವರ್ಷವೊಂದಕ್ಕೆ ಖಾಸಗಿ ಬ್ಯಾಂಕುಗಳ ಶೇ 10 ರಷ್ಟು ಶೇರುಗಳನ್ನು ವಶಪಡಿಸಿಕೊಳ್ಳುತ್ತಾ ಹೋಗಬಹುದು. ಹೀಗೆ ಶೇರುಗಳನ್ನು ವಶಪಡಿಸಿಕೊಳ್ಳುತ್ತಾ ನಾಲ್ಕೈದು ವರ್ಷಗಳಲ್ಲಿ ಪೂರ್ತಿಯಾಗಿ ಬ್ಯಾಂಕನ್ನೇ ವಶಪಡಿಸಿಕೊಳ್ಳಬಹುದಂತೆ. ಈ ನೀತಿ ವಿದೇಶಿ ನುಂಗಣ್ಣಗಳಿಗೆ ಖಂಡಿತವಾಗಿಯೂ ಅನುಕೂಲಕರವಾಗಿರುತ್ತದೆಯಲ್ಲವೇ?

ಇದಕ್ಕೆ ಇನ್ನೂ ಹೆಚ್ಚಿನ ಅರ್ಥವೂ ಇರುವಂತಿದೆ. ಖಾಸಗಿ ಬ್ಯಾಂಕುಗಳನ್ನು ವಶಪಡಿಸಿಕೊಳ್ಳಲು ಬಿಟ್ಟ ಮೇಲೆ ರಾಷ್ಟ್ರೀಕೃತ ಬ್ಯಾಂಕುಗಳನ್ನು ವಶಪಡಿಸಿಕೊಳ್ಳಲು ಅನುವು ಮಾಡಿಕೊಡ ಬಹುದು. ಈಗಾಗಲೇ ಬ್ಯಾಂಕುಗಳ ಗಾತ್ರ ಬಹಳ ಮುಖ್ಯ. ಆದ್ದರಿಂದ ರಾಷ್ಟ್ರೀಕೃತ ಬ್ಯಾಂಕುಗಳ ವಿಲೀನ ಪ್ರಕ್ರಿಯೆಗೆ ಒತ್ತು ನೀಡುವುದಾಗಿ ಅವರು ಆಗಲೇ ಹೇಳಿದ್ದಾರೆ. ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವಂತೆ ದೇಶದ ನೀತಿಗಳನ್ನು ರೂಪಿಸುವುದೇ ಈ ಕಾಂಗ್ರೆಸ್ ಮಂತ್ರಿಗಳ ಕೆಲಸವೇ?

ನವೆಂಬರ್ ಕ್ರಾಂತಿಯ ನೆನಪು

ಪುಟ 7ರಿಂದ

ವಿಭಾಗಗಳಿಗೆ ಪ್ರಯೋಜನ ತರಬಹುದಷ್ಟೇ. ಅತ್ಯಂತ ಹೊಲಸು ಮತ್ತು ನಾಚಿಕೆಗೇಡಿ ರೀತಿಯಲ್ಲಿ ಅವು ಸಾಧಿಸಿರುವುದು ಇದನ್ನೇ.

ಇಂತಹ ಒಂದು ಸನ್ನಿವೇಶ ಮತ್ತು ಅರಿವಿನಿಂದಾಗಿಯೇ ಒಂದು ಉತ್ತಮ ಜಗತ್ತಿಗಾಗಿ, ಶೋಷಣಾ ಮುಕ್ತ, ದಮನಮುಕ್ತ ಜಗತ್ತಿಗಾಗಿ ಜನತೆಯ ಹೋರಾಟ ಏನೇ ಆದರೂ ಸಾಯಲು ನಿರಾಕರಿಸುತ್ತಿದೆ. ಸೋವಿಯತ್ ಒಕ್ಕೂಟ ಸಾವು ಸಂಭವಿಸಿದ ನಂತರ ಸ್ವಲ್ಪವೇ ಸಮಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ನೇಪಾಳ, ದಕ್ಷಿಣ ಆಫ್ರಿಕಾ, ಅಥುವೇನಿಯಾ ಮತ್ತಿತರ ಕೆಲವು ದೇಶಗಳಲ್ಲಿ ಚೈತನ್ಯಪೂರ್ಣವಾಗಿ ಮುನ್ನಡೆದವು. ಇತ್ತೀಚೆಗೆ ಈ ಶಕ್ತಿಗಳು ಬ್ರೆಜಿಲ್, ವೆನೆಜುವೆಲಾ, ಬೊಲಿವಿಯಾ ಮತ್ತಿತರ ಹಲವು ದೇಶಗಳಲ್ಲಿ ಗಮನಾರ್ಹ ವಿಜಯದಾಖಲಿಸಿವೆ.

ಪ್ರತಿರೋಧ ಮುಂದುವರೆಯುತ್ತಿದೆ :

ಬ್ರೆಟ್ಟನ್ ವುಡ್ ಸಂಸ್ಥೆಗಳ (ಐಎಂಎಫ್-ವಿಶ್ವಬ್ಯಾಂಕ್) ವಿರುದ್ಧ ಭಾರೀ ಪ್ರತಿಭಟನೆಗಳು ನಡೆದಿವೆ - ಸಿಯೆಟಲ್‌ನಿಂದ ಫ್ರಾನ್ಸ್‌ವರೆಗೆ. ಅಮೆರಿಕನ್ ಯುದ್ಧ ತಂತ್ರಗಳ ಬಗ್ಗೆ ಸುಮಾರಾಗಿ ವಿಶ್ವದ ಪ್ರತಿಯೊಂದು ದೇಶದಲ್ಲಿ ಭಾರೀ ಪ್ರತಿಭಟನೆಗಳು ನಡೆದಿವೆ. ಕ್ಯೂಬಾ ಈಗಲೂ ಅಮೆರಿಕನ್ ಕ್ಷಿಪಣಿಗಳನ್ನು ಎದುರಿಸಿ ನಿಂತಿದೆ. ಕೊರಿಯಾ ಜನತಾ ಗಣತಂತ್ರ ಪರಿಮಾಣು ಶಕ್ತಿಯ ವಿಷಯದಲ್ಲಿ ಬೆದರಿಕೆ ತಂತ್ರಗಳಿಗೆ ತಲೆಬಾಗಲು ನಿರಾಕರಿಸುತ್ತಿದೆ. ಇರಾಕ್‌ನಲ್ಲಿ ವಶದಲ್ಲಿಟ್ಟುಕೊಳ್ಳಲು ಅಮೆರಿಕನ್ನರಿಗೆ ಸಾಧ್ಯವಾಗುತ್ತಿಲ್ಲ. ವೆನೆಜುಲಾದ ಜನತೆ ಚವೇಝ್ ಸರ್ಕಾರವನ್ನು ಉರುಳಿಸುವ ಅಮೆರಿಕನ್ ಪಿತೂರಿಗಳನ್ನು ಒಂದಲ್ಲ ಹಲವು ಬಾರಿ ವಿಫಲಗೊಳಿಸಿದ್ದಾರೆ. ಅಮೆರಿಕದ ಬೆಂಬಲದಿಂದ ರಾಕ್ಷಸೀ ಆಳ್ವಿಕೆ ನಡೆಸುತ್ತಾ 60,000 ಕ್ಕೂ ಹೆಚ್ಚು ಚಿಲಿ ನಾಗರಿಕರನ್ನು ಕೊಂದು ಹಾಕಿದ ಅಗಸ್ಟೋ ಪಿನೋಚೆಯನ್ನು ಶಿಕ್ಷಿಸಲು ಚಿಲಿಯ ಜನತೆ ದೃಢ ನಿರ್ಧಾರ ಮಾಡಿದ್ದಾರೆ. ಝಿಯೋನಿಸ್ಟ್ ರಾಕ್ಷಸರ ಮತ್ತು ಅವರ ವಿದೇಶಿ ಯಜಮಾನರ ಹೊಲಸು ಕೃತ್ಯಗಳೆಲ್ಲಾ ಪ್ಯಾಲೆಸ್ಟೀನಿಯನ್ ತಾಯ್ನಾಡಿನ ಸ್ವಾತಂತ್ರ್ಯ ಹೋರಾಟಗಾರರ ಹೋರಾಟವನ್ನು ಹಿತ್ತಿಕ್ಕುವಲ್ಲಿ ವಿಫಲವಾಗಿದೆ.

ಪ್ರತಿಭಟನೆ ಮುಂದುವರೆಯುತ್ತಿದೆ - ಅದು ಮುಂದುವರೆಯುತ್ತದೆ. ಇಂದಿನ ಅವಶ್ಯಕತೆಯೆಂದರೆ ಪ್ರತಿರೋಧದ ವಿವಿಧ ಪ್ರವಾಹಗಳು ಸಮನ್ವಯಗೊಂಡು ಅಂತಿಮವಾಗಿ ಒಂದು ಬಲಿಷ್ಠ ಪ್ರವಾಹವಾಗಿ ಬೆಸೆಯಬೇಕು. ವಿಶ್ವಾದ್ಯಂತ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ತಮ್ಮ ಮಧ್ಯಪ್ರವೇಶವನ್ನು ಹಲವುಪಟ್ಟು ಹೆಚ್ಚಿಸಿ ವಿಚ್ಛಿದ್ರಕಾರಿ ಮತ್ತು ಮೂಲಭೂತವಾದೀ ಶಕ್ತಿಗಳು ಜನಗಳ ಅಸಂತೃಪ್ತಿಯನ್ನು ಸ್ವವಿನಾಶಕಾರೀ ದಾರಿಯತ್ತ ಒಯ್ಯದಂತೆ ಮಾಡಬೇಕಾಗಿದೆ.

ಹದಗೆಟ್ಟ ರಸ್ತೆಗಳ ದುರಸ್ತಿಗಾಗಿ ಗಂಗಾವತಿಯಲ್ಲಿ ಸಿಐಟಿಯು ಪ್ರತಿಭಟನೆ

ಅಕ್ಟೋಬರ್ 18 ರಂದು ಗಂಗಾವತಿ ನಗರದ ಪ್ರಮುಖ ರಸ್ತೆಗಳ ದುರಸ್ತಿಗಾಗಿ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ಆಟೋಚಾಲಕರು ನಗರಸಭೆಗೆ ಮತ್ತಿಗೆ ಹಾಕಿದರು. ಅಂದೇ ವಿಶ್ವ ಹಿಂದೂ ಪರಿಷತ್‌ನ ಪ್ರಮೋದ್ ಮುತಾಲಿಕ್‌ನ ಕಾರ್ಯಕ್ರಮವನ್ನು ಹೆರೂರು ಗ್ರಾಮದ ಭೂಮಾಲೀಕರು ಸಂಘಟಿಸಿ, ಜನರ ಭಾವನೆ ಕೆರಳಿಸುವ ಪ್ರಯತ್ನ ಮಾಡುತ್ತಿದ್ದರೆ, ಇನ್ನೊಂದೆಡೆ ಗಂಗಾವತಿ ನಗರದ ಪ್ರಮುಖ ರಸ್ತೆಗಳು ಸುಮಾರು 15 ವರ್ಷದಿಂದ ಒಂದು ಪುಟ್ಟಿ ಮಣ್ಣನ್ನು ಕಾಣದೆ ದೊಡ್ಡ ದೊಡ್ಡ ತಗ್ಗುಗಳು ಬಿದ್ದು ಜನರು ಅಡ್ಡಾಡುವುದೇ ಕಷ್ಟವಾಗಿದ್ದನ್ನು ಗಮನಿಸಿ ಸಾರ್ವಜನಿಕರ ಉಪಯೋಗಕ್ಕೆ ಬರುವ ರಸ್ತೆಗಳ ದುರಸ್ತಿಗೆ ನಗರ ಸಿಐಟಿಯು ನೇತೃತ್ವದ ಆಟೋ ಚಾಲಕರಿಂದ ನಗರಸಭೆ ಮುತ್ತಿಗೆ ಕಾರ್ಯಕ್ರಮ ನಡೆಯಿತು. ಮೊದಲಮೊದಲು ಪೊಲೀಸರು ಕಾರ್ಮಿಕರ ಹೋರಾಟಕ್ಕೆ ಅನುಮತಿ ನೀಡುವುದಿಲ್ಲ ಅಂದು ಮುತಾಲಿಕ ಕಾರ್ಯಕ್ರಮವಿದೆ. ಎಂದು ವಾದಿಸಿದ್ದರು. ಕಾರ್ಯಕರ್ತರು ಬಿಗಿಯಾದುದರಿಂದ ಕೊನೆಗೆ ಮಣಿದು ಮುತಾಲಿಕ ಕಾರ್ಯಕ್ರಮಕ್ಕಿಂತ ರಸ್ತೆ ದುರಸ್ತಿಗಾಗಿ ನಡೆಯುವ ಹೋರಾಟ ಅತಿ ಅವಶ್ಯಕವೆಂದು ಭಾವಿಸಿ ಮೆರವಣಿಗೆಗೆ ಅನುಮತಿ ನೀಡಿದರು.

ಸಿಬಿಎಸ್ ಗಂಜ್‌ನಿಂದ ಆಟೋಗಳ ಮೆರವಣಿಗೆ ಮುಖಾಂತರ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿ ನಗರ ಸಭೆಯನ್ನು ಮುತ್ತಿಗೆ ಹಾಕಲಾಯಿತು. ಈ ಮುತ್ತಿಗೆ ಕಾರ್ಯಕ್ರಮವನ್ನು ಉದ್ದೇಶಿಸಿ ಸಿಐಟಿಯು ಮುಖಂಡರು ಮಾತನಾಡಿ, ನಗರಸಭೆಗೆ ನೀರಿನ ತೆರಿಗೆ, ಮನೆ ತೆರಿಗೆ ರೂಪದಲ್ಲಿ 15 ವರ್ಷದ ಅವಧಿಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ತುಂಬಿದ್ದರೂ, ನಗರಸಭೆ ಬೇಜಾವಾಬ್ದಾರಿ ಹಾಗೂ ನಿರ್ಲಕ್ಷತನದಿಂದ ರಸ್ತೆಗಳು ರಿಪೇರಿ ಕಾಣದೆ ಗಂಗಾವತಿಯಲ್ಲಿ ರಸ್ತೆಗಳೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಸರ್ಕಾರದಿಂದ 17 ಕೋಟಿ ರೂ. ಒಳಚರಂಡಿಗೆ ಬಂದಿದ್ದರೂ ಕ್ಷುಲ್ಲಕ ನೆಪವೊಡ್ಡಿ ಕಾಮಗಾರಿ ಪ್ರಾರಂಭಿಸಿಲ್ಲ. ಅದನ್ನು ಕೂಡಲೇ ಪ್ರಾರಂಭಿಸಬೇಕೆಂದು ಒತ್ತಾಯಿಸಿದರು. ಸ್ಥಳೀಯ ಶಾಸಕರಾದ ಇಕ್ಬಾಲ್ ಅನ್ಸಾರಿ ಅವರು ತಾವು ಆರಿಸಿ ಬಂದ ತಕ್ಷಣ ಎಲ್ಲಾ ರಸ್ತೆಗಳನ್ನು ಸಿಮೆಂಟ್ ರಸ್ತೆಗಳನ್ನಾಗಿ ಮಾಡುತ್ತೇನೆ ಎಂದು ಹೇಳಿ ಇಲ್ಲಿಯುವರೆಗೂ ಯಾವುದೇ ಪ್ರಯತ್ನ ಮಾಡದಿರುವದನ್ನು ಖಂಡಿಸಿದರು. ಚುನಾವಣೆಯಲ್ಲಿ ನೀಡಿದ ಆಶ್ವಾಸನೆಗಳನ್ನು ಈಡೇರಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ನಂತರ ನಗರಸಭೆ ಅಧ್ಯಕ್ಷರು ಹಾಗೂ ಸದಸ್ಯರು, ಪೌರಾಯುಕ್ತರು ಮುತ್ತಿಗೆ ಸ್ಥಳಕ್ಕೆ ಬಂದು ನಗರಸಭೆ ವ್ಯಾಪ್ತಿಗೆ ಬರುವ ರಸ್ತೆಗಳ ದುರಸ್ತಿಗೆ ಈಗಾಗಲೇ ಗುತ್ತಿಗೆ ನೀಡಲಾಗಿದೆ, ಮಳೆಯ ಕಾರಣ ಗುತ್ತಿಗೆದಾರರು ವಿಳಂಬ ಮಾಡುತ್ತಿದ್ದಾರೆ ಎಂದು ಹೇಳಿದರು. ಇದನ್ನು ಪ್ರತಿಭಟನಾಕಾರರು ಒಪ್ಪದೆ ಗುತ್ತೇದಾರರು ಒಪ್ಪದೇ ಇದ್ದಾಗ ಅವರ



ಗುತ್ತಿಗೆಯನ್ನು ರದ್ದು ಪಡಿಸಿ, ಅವರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಂದು ಒತ್ತಾಯಿಸಿದರು. ಅಧ್ಯಕ್ಷರು ಅವರಿಗೆ ನೋಟಿಸ್ ನೀಡಿ ಕೆಲಸ ಮಾಡಿಸುತ್ತೇವೆ. ಒಂದು ತಿಂಗಳ ಒಳಗೆ ಎಲ್ಲಾ ರಸ್ತೆಗಳನ್ನು ರಿಪೇರಿ ಮಾಡಿಸುತ್ತೇವೆ ಎಂದು ಆಶ್ವಾಸನೆ ನೀಡಿದರು. ನಂತರ ಪ್ರತಿಭಟನಾಕಾರರು ಪಿಡಬ್ಲುಡಿ ಇಲಾಖೆಗೆ ತೆರಳಿದಾಗ ಅವರು ನಾವು ನಿಮ್ಮ ಪತ್ರ ತಲುಪಿದ ತಕ್ಷಣ ಕೆಲಸ ಪ್ರಾರಂಭಿಸಿದ್ದೇವೆ. ಅವರು ಕೂಡಾ ಒಂದು ತಿಂಗಳ ಒಳಗೆ ರಸ್ತೆಗಳನ್ನು ದುರಸ್ತಿ ಮಾಡುವುದಾಗಿ ಹೇಳಿದರು.

ಅಂದು ಗಂಗಾವತಿ ರಸ್ತೆಗೆ ಮುಕ್ತಿ ಬಂದಿತು : ಅಕ್ಟೋಬರ್ 18 ರಿಂದಲೇ ಪಿಡಬ್ಲ್ಯುಡಿ ಇಲಾಖೆ ಸಂಬಂಧಪಟ್ಟ ರಸ್ತೆ ದುರಸ್ತಿ ಕೆಲಸ ಪ್ರಾರಂಭವಾಗಿದೆ. ಆಟೋ ಚಾಲಕ ಹೋರಾಟಕ್ಕೆ ಸಂದ ಜಯ ಇದಾಗಿದೆ. 15 ವರ್ಷದಿಂದ ಈಗಿರುವ ಶಾಸಕರಿಂದ ಹಿಡಿದು ಹಿಂದಿನ ಶಾಸಕರು, ನಗರಸಭೆ ಸದಸ್ಯರು ಮಾಡದೆ ಇರುವ ಕೆಲಸವನ್ನು ಆಟೋರಿಕ್ಷಾ ಚಾಲಕರು ಮಾಡಿಸಿದ್ದಾರೆ ಎಂದು ಗಂಗಾವತಿ ನಗರದ ನಾಗರಿಕರು ಮಾತನಾಡುವಂತಾಗಿದೆ. ಆಟೋಚಾಲಕರಿಗೆ ಇರುವ ಪ್ರಜ್ಞೆಯ ಒಂದು ಭಾಗ ಜನಪ್ರತಿನಿಧಿಗಳಿಗೆ ಇದ್ದಿದ್ದರೆ, 15 ವರ್ಷದಿಂದ ನಮ್ಮ ರಸ್ತೆಗಳಿಗೆ ಈ ಗತಿ ಬರುತ್ತಿರಲಿಲ್ಲ ಎಂಬ ಮಾತು ಜನಸಾಮಾನ್ಯರಿಂದ ಕೇಳಿಬರುತ್ತಿದೆ.

ಈ ಹೋರಾಟದ ನೇತೃತ್ವವನ್ನು ಸಾಧಿಕ್, ಮಹೇಂದ್ರ ಸಿಂಗ್, ಎಸ್.ಎಸ್.ಹುಲಗಪ್ಪ, ನಾಗೇಶ ನಾಯಕ್, ರಮೇಶ್, ದೇವರಾಜ ವಹಿಸಿದ್ದರು. ಎಲ್ಲಾ ಆಟೋ ಚಾಲಕರು ತಮ್ಮ ತಮ್ಮ ಆಟೋ ಸಂಚಾರವನ್ನು ಸ್ಥಗಿತಗೊಳಿಸಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

● ಸಿ.ಎಸ್.ನಾಡಗೌಡ

ಅಂತರ್ಯುದ್ಧದತ್ತ ಇಸ್ರೇಲ್


ಇಸ್ರೇಲ್ ಅಂತರ್ಯುದ್ಧದತ್ತ ಹೋಗಬಹುದು ಎನ್ನುತ್ತಾರೆ ಕೆಲವರು. ಪ್ಯಾಲೆಸ್ಟೇನಿಯನ್ ಜನತೆ ವಾಸವಾಗಿರುವ ಪಶ್ಚಿಮ ದಂಡೆಯ ಪ್ರದೇಶದಲ್ಲಿ ಅಕ್ರಮವಾಗಿ ನೆಲೆಯೂರಿದ ಧಾರ್ಮಿಕ ಮೂಲಭೂತವಾದಿಗಳ ಕೃತ್ಯಗಳು ಗಂಭೀರ ಅಪಾಯ ತರುತ್ತಿವೆ

ಇಸ್ರೇಲಿನ ಅಸ್ತಿತ್ವವೇ ಅಪಾಯದಲ್ಲಿದೆ ಎಂದು ಇಸ್ರೇಲ್ ಸರಕಾರದ ಮಂತ್ರಿಯೊಬ್ಬರು ಹೇಳಿದಾಗ ಆಶ್ಚರ್ಯವಾಗುತ್ತದೆ. ಅಂತರಾಷ್ಟ್ರೀಯ ಪೊಲೀಸ್ ಅಧಿಕಾರಿ ಕುಖ್ಯಾತಿಯ ಬಲಗೈ ಬಂಟನಾಗಿರುವ ಅಮೇರಿಕಾದ ಇಸ್ರೇಲ್‌ಗೆ ಈ ಪರಿಸ್ಥಿತಿಯೇ?

ಇಸ್ರೇಲ್‌ಗೆ ಅಪಾಯ ಎಲ್ಲಿಂದ?

ಅಂತರರಾಷ್ಟ್ರೀಯ ನ್ಯಾಯಾಲಯವು ಪ್ಯಾಲೇಸ್ಟಿನ್ ಆಕ್ರಮಿತ ಪ್ರದೇಶಗಳಲ್ಲಿ ಗೋಡೆ ಕಟ್ಟಿರುವುದು ಸರಿಯಲ್ಲ, ಅದನ್ನು ಕೆಡವಬೇಕು ಎಂದು ಹೇಳಿದರೂ ಇಸ್ರೇಲ್ ಕೇಳಲಿಲ್ಲ. ಇದನ್ನು ಅನುಸರಿಸಿ ವಿಶ್ವಸಂಸ್ಥೆ ಗೊತ್ತುವಳಿ ಅಂಗೀಕರಿಸಿ, ಇಸ್ರೇಲ್‌ಗೆ ಛೀಮಾರಿ ಹಾಕಿದರೂ ಇಸ್ರೇಲ್ ಮಣಿಯಲಿಲ್ಲ. ಇದರಿಂದ ಅಪಾಯವೇ? ಅಥವಾ ಪ್ಯಾಲೆಸ್ಟೀನಿಯನ್ ಜನತೆ ದಶಕಗಳಿಂದ ಹೋರಾಟ ನಡೆಸುತ್ತಿದ್ದರೂ, ನ್ಯಾಯ ಸಿಗದಿರುವುದರಿಂದ ಅವರಿಂದೇನಾದರೂ ಅಪಾಯವೇ? ತನ್ನ ಬದ್ಧ ವೈರಿಗಳೆಂದೇ ಗುರುತಿಸಿಕೊಂಡ ಅರಬ್ ರಾಷ್ಟ್ರಗಳಿಂದಲೇ?

ಆದರೆ ಇಸ್ರೇಲ್‌ಗೆ ಸದ್ಯಕ್ಕೆ ಇರುವ ಅಪಾಯ ವಿಶ್ವಸಂಸ್ಥೆಯಿಂದಾಗಲೀ ಅಥವಾ ಇನ್ನಿತರ ದೇಶಗಳಿಂದಾಗಲೀ ಅಲ್ಲ. ಬದಲಾಗಿ, ಹಾಲಖ(halakha) ಎಂದು ಕರೆಯಲ್ಪಡುವ ಯಹೂದಿಗಳ ಧಾರ್ಮಿಕ ಕಾನೂನಿನಿಂದ ಅಪಾಯ ಒದಗುವ ಸಾಧ್ಯತೆ ಇದೆ. ಇಸ್ರೇಲ್ ಸರಕಾರ ತಾನು ಅಂಗೀಕರಿಸಿದ ಜಾತ್ಯಾತೀತ ತತ್ವಕ್ಕೆ ಅನುಗುಣವಾಗಿ ಅಲ್ಲಿನ ಸಂಸತ್ತು (knesset) ಯಾವುದೇ ಕಾನೂನು ಜಾರಿಗೆ ತಂದರೂ ಅದು 'ಹಾಲಖ' ಕ್ಕೆ ವಿರುದ್ಧವಾಗಿದ್ದರೆ ಹಾಲಖ ಕಾನೂನೇ ಅಂತಿಮ! ಇದನ್ನು ಸೇನೆಯಲ್ಲಿ ಇರುವವರೂ ಒಪ್ಪುತ್ತಾರೆ ಎಂದರೆ ಅದರ ಗಂಭೀರತೆ ಅರಿವಾದೀತು.



ಇಸ್ರೇಲ್ ಪ್ರಧಾನಿ ಶೆರೋನ್

ಆದ್ದರಿಂದಲೇ, ಕೆಲವೇ ತಿಂಗಳುಗಳ ಮೊದಲು ಅಂತರ್ಯುದ್ಧದ ಬಗ್ಗೆ ಕನಸೇ ಕಾಣದ ಇಸ್ರೇಲ್‌ನ ಮಾಧ್ಯಮಗಳು, ಟಿವಿ ಚಾನೆಲ್‌ಗಳು, ಇಂದು ಆ ಬಗ್ಗೆ ಸುದ್ದಿ ಬಿತ್ತರಿಸತೊಡಗಿವೆ. ಸಚಿವಮಟ್ಟದಲ್ಲಿ, ಅಲ್ಲಿನ ಸಂಸತ್ತಿನಲ್ಲಿ ಮಾತುಕತೆ ನಡೆಯುತ್ತಿದೆ. ಮಾತ್ರವಲ್ಲ ಸೇನೆಯ ಮುಖ್ಯ ಅಧಿಕಾರಿ ಸಹ ಈ ಕುರಿತು ಸೈನ್ಯವೇ ತಿರುಗಿ ಬೀಳಬಹುದು ಎಂಬ ಎಚ್ಚರಿಕೆ ನೀಡುತ್ತಿದ್ದಾರೆ ಇನ್ನೊಬ್ಬ ಸಚಿವರು, ಸೈನ ಅಂತರ್ಯುದ್ಧದಂತೆ ಇಲ್ಲಿಯೂ ನಡೆಯಬಹುದೆಂಬ ಎಚ್ಚರಿಕೆ ನೀಡುತ್ತಿದ್ದಾರೆ.

ಕಾರಣಗಳೇನು? : ಸಂಭವಿಸಬಹುದಾದ ಈ ಅಂತರ್ಯುದ್ಧಕ್ಕೆ ಕಾರಣಗಳೇನು ಎಂದು ಕೆದಕಿದರೆ, ಮಾಜಿ ನೆಸೆಟ್ (knesset ಅಲ್ಲಿನ ಸಂಸತ್ತು) ಸದಸ್ಯ ಯೂರಿ ಅಲ್‌ನೆರಿ ಪ್ರಕಾರ, ಇಸ್ರೇಲಿ ಆಕ್ರಮಿತ ಪ್ರದೇಶಗಳಲ್ಲಿ ನೆಲೆಗಳನ್ನು ನಿರ್ಮಿಸಿ, ದೊಡ್ಡ ದೊಡ್ಡ ಮಹಲುಗಳ ಆಸೆಯನ್ನು ತೋರಿಸಿ, ಇಸ್ರೇಲಿ ಜನರನ್ನು ಅಲ್ಲಿಗೆ ಕಳಿಸಿರುವುದೇ ಆಗಿದೆ. ಹೀಗೆ ಆಕ್ರಮಿತ ಪ್ರದೇಶಗಳಿಗೆ ಜನರನ್ನು ಕಳುಹಿಸಲು ಇಸ್ರೇಲ್ ಸರಕಾರಕ್ಕೆ ಒತ್ತಾಯ ಮಾಡಿದುದು ಹಾಗೂ ಅದಕ್ಕೆ ಪೂರಕವಾಗಿ ಕೆಲಸ ಮಾಡಿದುದು ಅಲ್ಲಿನ ಧಾರ್ಮಿಕ ಸಂಘಟನೆ. ಅವರ ಉದ್ದೇಶ ಒಂದೇ. ಅರಬ್ ಜನರನ್ನು ಈ ದೇಶದಿಂದ ಓಡಿಸಬೇಕು. ಅದಕ್ಕಾಗಿ, ದೇವರೇ ನಮ್ಮನ್ನು ಇಲ್ಲಿಗೆ ಕಳಿಸಿದ್ದಾನೆ. ಆದ್ದರಿಂದ ಪ್ಯಾಲೆಸ್ತೀನ್ ದೇಶದ ಜಾಗವನ್ನು ಮಾತ್ರವಲ್ಲ, ಜೋರ್ಡಾನ್, ಲೆಬನಾನ, ಸಿರಿಯಾ ಮತ್ತು ಸಿನೈ ದೇಶಗಳಿಗೆ ಸೇರಿದ ಜಾಗವನ್ನು ಆಕ್ರಮಿಸಿಕೊಳ್ಳಬೇಕು ಎಂಬುದು ಅವರ ವಾದ.

ಬೈಬಲ್‌ನ್ನು ಹೇರಳವಾಗಿ ಉದ್ಧರಿಸುವ ಈ ಧಾರ್ಮಿಕ ಮೂಲಭೂತವಾದಿಗಳು "ನಾವು ಈ ದೇಶಕ್ಕೆ ಬಂದಿರುವುದು, ನಾವು ವಾಸಿಸುವುದಕ್ಕೆ ಮಾತ್ರವಲ್ಲ, ಬೇರೆಯವರನ್ನು ಓಡಿಸಿ ಅವರ ಸ್ಥಾನವನ್ನು ಆಕ್ರಮಿಸುವುದಕ್ಕೆ!" (ಭಾರತದ ಹಿಂದೂ ಮೂಲಭೂತವಾದಿಗಳು ಇದೇ ಘೋಷಣೆಯನ್ನು ನೀಡುತ್ತಿವೆಯಲ್ಲವೆ?- ಸಂ) ಇಂತಹ ಘೋಷಣೆಗಳೊಂದಿಗೆ, ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ಅನ್ಯ ದೇಶಗಳ ಆಕ್ರಮಣಕ್ಕೆ ಪ್ರಚೋದನೆ ನೀಡಿದ ಧಾರ್ಮಿಕ ಮೂಲ ಭೂತವಾದಿಗಳಿಗೆ (ಹಾಲಖ) ಬೇರೆ ಜನಾಂಗದವರನ್ನು ಅವರಿಗೆ ಬೆಂಬಲವಾಗಿ ನಿಲ್ಲುವ ಜಾತ್ಯಾತೀತ ಶಕ್ತಿಗಳನ್ನು ಮೂಲೋತ್ಪಾದನೆ ಮಾಡುವ ಅಂತರ್ಯುದ್ಧಕ್ಕೆ ಚಾಲನೆ ನೀಡಿದ್ದಾರೆ.


ಪಶ್ಚಿಮ ದಂಡೆಯ ಆಕ್ರಮಿತ ಪ್ರದೇಶಗಳಲ್ಲಿ, ಪ್ಯಾಲೆಸ್ಟಿನಿಯನ್ ಜನತೆಯ ನಡುವೆಯೇ, ಇಸ್ರೇಲ್‌ನ ಅಂದಿನ ರಕ್ಷಣಾಮಂತ್ರಿ ಶೈಮನ್ ಪೆರೇಸ್ ಕೆಡುಮಿಮ್ ಎಂಬಲ್ಲಿ ನೆಲೆ (ಸೆಟ್ಲ್‌ಮೆಂಟ್) ನಿರ್ಮಿಸಿದ ನಂತರ ಹಲವಾರು ಇಸ್ರೇಲ್ ಆಕ್ರಮಿತ ನೆಲೆಗಳು ಹೇರಳವಾಗಿ ನಿರ್ಮಾಣಗೊಂಡಿವೆ. ಪ್ರತಿಯೊಂದು ಕೂಡಾ, ನಿಧಾನವಾಗಿ ಹತ್ತಿರದ ಪ್ಯಾಲೆಸ್ತೀನಿಯನ್ ಪ್ರದೇಶವನ್ನು ಅವರ ಗಿಡ, ಮರ ಬಳ್ಳಿಗಳನ್ನು, ರಸ್ತೆಗಳನ್ನು ಆಕ್ರಮಿಸಿಕೊಂಡಿವೆ. ಹೊಸ ರಸ್ತೆಗಳನ್ನು ನಿರ್ಮಾಣ ಮಾಡಿವೆ.

ಇದೀಗ ಅಂತರಾಷ್ಟ್ರೀಯ ಒತ್ತಡದ ಮೇರೆಗೆ ಕೆಲವೊಂದು ಶಿಬಿರಗಳನ್ನು ಕಿತ್ತೆಸೆಯಲು ಪ್ರಧಾನಿ ಶೆರೋನ್ ಒಪ್ಪಿಕೊಂಡರೂ ಡಜನ್‌ಗಟ್ಟಲೆ ಹೊಸ ಶಿಬಿರಗಳು ಹುಟ್ಟುತ್ತಿವೆ. ಇಂತಹ ಶಿಬಿರಗಳು ಕಾನೂನು ಬಾಹಿರ ಎಂದು ಸರಕಾರ ಘೋಷಿಸುತ್ತದೆ. ಆದರೆ ಅದೇ ಸರಕಾರದ ಮಂತ್ರಿಗಳು ಅಂತಹ ಶಿಬಿರಗಳನ್ನು ಹುಟ್ಟು ಹಾಕಲು ಸಹಾಯ ಹಸ್ತ ನೀಡುತ್ತಾರೆ. ಸೈನ್ಯ ಅವರಿಗೆ ಸಂಪೂರ್ಣ ರಕ್ಷಣೆ ನೀಡುವುದು ಮಾತ್ರವಲ್ಲದೆ, ಎಲ್ಲಿ ಶಿಬಿರಗಳನ್ನು ಹಾಕಬೇಕು, ಅಲ್ಲಿಗೆ ಹೋಗುವ ದಾರಿ ಹೇಗೆ ಎಂಬೆಲ್ಲ ಬಗ್ಗೆ ಸಂಪೂರ್ಣ ಮಾಹಿತಿ ಮಾರ್ಗದರ್ಶನ ನೀಡುತ್ತದೆ. ಇಂತಹ ಕಾನೂನು ಬಾಹಿರ ಕೃತ್ಯಗಳ ಬಗ್ಗೆ ಸರಕಾರದ ಗಮನ ಸೆಳೆದಾಗ ಅದನ್ನು ನಿರ್ಲಕ್ಷಿಸ ಲಾಗಿತ್ತು. ಆದರೆ ಈಗ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ.

ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಎಲ್ಲಾ ಇಸ್ರೇಲಿ ನೆಲಸಿಗರು ಮೂಲಭೂತವಾದಿಗಳೆಂದೇನೂ ಅಲ್ಲ. ಅವರಲ್ಲಿ ಕೆಲವೇ ಕೆಲವು ಮಂದಿ ಮಾತ್ರ ಮೂಲಭೂತವಾದಿಗಳು, ಬೇಕೆಂದೇ ಕಳುಹಿಸಲ್ಪಟ್ಟವರು. ಅಲ್ಲಿರುವ ಬಹುಸಂಖ್ಯಾತರು, ಇಸ್ರೇಲಿ ಸರಕಾರ ನೀಡುವ ಪರಿಹಾರ, ದೊಡ್ಡ ಬಂಗಲೆ ಜಾಗದ ಆಸೆಯಿಂದ ಬಂದವರು. ಆದರೆ ಈಗ ಅವರು ತಮ್ಮ ನೆಲದ, ವಾಸಸ್ಥಾನದ ಭದ್ರತೆಗಾಗಿ ಮೂಲಭೂತವಾದಿಗಳ ಮೊರೆ ಹೊಕ್ಕುತ್ತಿದ್ದಾರೆ. ಅವರು ಹೇಳಿದಂತೆ ಕೇಳುತ್ತಿದ್ದಾರೆ.

ಇಂದಿಗೂ ಇಸ್ರೇಲಿನ ಬಹುಸಂಖ್ಯಾತ ಜನ ಪ್ರಜಾಪ್ರಭುತ್ವವನ್ನು ಮಾನ್ಯ ಮಾಡುತ್ತಾರೆ. ಆಕ್ರಮಿತ ಪ್ರದೇಶಗಳಲ್ಲಿನ ಶಿಬಿರಗಳನ್ನು ತೆಗೆದು ಅಲ್ಲಿಯ ಜನರಿಗೆ ಬೇರೆ ವಸತಿ ಏರ್ಪಡಿಸಿ, ಪರಿಹಾರ ನೀಡಬೇಕೆಂದು ಸರಕಾರ ಅಥವಾ ನೆಸೆಟ್ ನಿರ್ಧರಿಸಿದಲ್ಲಿ ಜನ ಪ್ರಥಮದಲ್ಲಿ ಪ್ರತಿಭಟನೆ ಮಾಡಿದರೂ ನಂತರ ಅದನ್ನು ಒಪ್ಪುತ್ತಾರೆ.

ಆದರೆ ಶಿಬಿರಗಳಲ್ಲಿರುವ ನೆಲಸಿಗರು ಈ ಪ್ರಜಾಪ್ರಭುತ್ವ ನಿಯಮಗಳನ್ನು ಮಾನ್ಯ ಮಾಡುತ್ತಾರೆಯೇ? ಇಂದಿನ ಪರಿಸ್ಥಿತಿಯಲ್ಲಿ ಅವರು ನೆಸೆಟ್‌ನ ನಿರ್ಣಯಗಳನ್ನಾಗಲಿ, ಸರಕಾರದ ಆದೇಶಗಳನ್ನಾಗಲಿ ಮಾನ್ಯ ಮಾಡುವ ಪರಿಸ್ಥಿತಿಯಲ್ಲಿ ಅವರಿಲ್ಲ. ಅವರೀಗ ಮೂಲಭೂತವಾದಿಗಳ.... ಮೂಲಭೂತವಾದಿಗಳನ್ನು ಅನುಸರಿಸುತ್ತಿರುವ ಯೆಹೂದಿ ಧಾರ್ಮಿಕ ಕಾನೂನು ಹಾಲಖ್‌ನ ನಿರ್ಣಯಕ್ಕೆ ಅನುಗುಣವಾಗಿ 'ನೆಸೆಟ್' ನಡೆದುಕೊಳ್ಳದಿದ್ದರೆ ಅದು ಮಾನ್ಯವಲ್ಲ. ಅಂದರೆ ಜಾತ್ಯಾತೀತ ತತ್ವಗಳಿಗೆ ಬದಲಾಗಿ



ಇಸ್ರೇಲ್ ಆಕ್ರಮಣಕಾರಿ ನೀತಿ ವಿರುದ್ಧ ಪ್ಯಾಲೆಸ್ಟೀನಿಯನ್ನರ ಪ್ರತಿಭಟನೆ...

ಯೆಹೂದಿ 'ದೇವರ' ಆಣತಿಯೇ ಮಾನ್ಯ ಅಥವಾ ಇಸ್ರೇಲಿ ಕಾನೂನುಗಳ ಬದಲಿಗೆ ಹಾಲಖ ಕಾನೂನುಗಳನ್ನೇ ತರುವುದು ಅವರ ಉದ್ದೇಶ. ಹಾಲಖ ಕಾನೂನುಗಳನ್ನು ನಿರ್ಧರಿಸುವವರು ಯಾರು?

ಪ್ರಜಾಪ್ರಭುತ್ವದಲ್ಲಿ ತಮ್ಮ ದೇಶದ ಕಾನೂನುಗಳು ಹೇಗಿರಬೇಕೆಂದು ತಮ್ಮ ಜನ ಪ್ರತಿನಿಧಿಗಳ ಮೂಲಕ, ಜನ ನಿರ್ಧರಿಸುತ್ತಾರೆ. ಆದರೆ ಮೂಲಭೂತವಾದಿಗಳ 'ಹಾಲಖ' ಕಾನೂನುಗಳನ್ನು ಕೆಲವೇ ಕೆಲವು ಫ್ಯಾಸಿಸ್ಟ್ ಶಕ್ತಿಗಳು ನಿರ್ಧರಿಸುತ್ತಾರೆ. ಈ ಶಕ್ತಿಗಳ ಪ್ರಜಾಪ್ರಭುತ್ವದ ಮೇಲೆ ಯಾವುದೇ ನಂಬಿಕೆ ಇಡುವುದಿಲ್ಲ. ಪ್ರಜಾಪ್ರಭುತ್ವ ಅವರಿಗೆ ನಿಷಿದ್ಧ.

ಈ ಬಲ ಬಂಧಿಯೂ ಮೂಲಭೂತವಾದಿಗಳು, ಜಾತ್ಯಾತೀತ ಯೆಹೂದಿಗಳನ್ನು 'ಈಜಿಪ್ಟಿನಿಂದ ಓಡಿ ಬಂದವರು' ಎಂದು ಹಂಗಿಸುತ್ತಾರೆ. ಅವರನ್ನು ಮ... ಮಾಡಲು 'ದೇವರು' ಆದೇಶ ನೀಡಿದ್ದಾರೆ ಎಂದು ಹೇಳುವ ಮೂಲಕ ಅಂತರ್ಯುದ್ಧಕ್ಕೆ ತಳಪಾಯ ಹಾಕುತ್ತಿದ್ದಾರೆ.

ಅಪಾಯಕಾರಿ ಕರೆ: 'ಧಾರ್ಮಿಕ ಯೆಹೂದಿ ರಾಷ್ಟ್ರ ಚಳುವಳಿ (Relegious zionist movement) ಹೆಸರಿನಲ್ಲಿ ಆಕ್ರಮಿತ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಚಳುವಳಿ ಆರಂಭಿಸಿದ್ದಾರೆ. ಆ ಪ್ರದೇಶದಿಂದ ಕದಲುವುದಿಲ್ಲ ಎಂದು ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದ ಒತ್ತಾಯ ಪೂರ್ವಕವಾಗಿ ಎಬ್ಬಿಸಿದರೆ 'ದೇವರಿಗೆ ದ್ರೋಹ ಮಾಡಿದಂತೆ ಎಂದು ಧಾರ್ಮಿಕ ಮೂಲಭೂತವಾದಿ ಘೋಷಣೆಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಸೈನ್ಯದಲ್ಲಿರುವ ಧಾರ್ಮಿಕ ಘಟಕಗಳೂ ಬೆಂಬಲ ನೀಡುತ್ತಿರುವುದು ಅಪಾಯಕಾರಿ ಸೂಚನೆ.

ಸೈನ್ಯವನ್ನು ಧಾರ್ಮಿಕೀಕರಣಗೊಳಿಸುವ ಪ್ರಕ್ರಿಯೆ ಬಹಳ ಹಿಂದೆಯೇ ಆರಂಭವಾಗಿತ್ತು. 'ಮೆಶಿವೂತ' ಎಂಬ ನಾಮದ ಧಾರ್ಮಿಕ ಶಾಲೆಗಳನ್ನು ಸೇನೆಯ ನಡುವೆ ಆರಂಭಿಸಲಾಗಿತ್ತು. ಮಾತ್ರವಲ್ಲ, ಆಕ್ರಮಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ಫ್ಯಾಸಿಸ್ಟ್ ಹಿಂಬಾಲಕರು ಈಗಾಗಲೇ ಸೈನ್ಯದೊಳಕ್ಕೆ ನುಸುಳಿಕೊಂಡಿದ್ದಾರೆ.

ಆಕ್ರಮಿತ ಪ್ರದೇಶಗಳಲ್ಲಿರುವ ನೆಲಸಿಗರು, ತಮ್ಮನ್ನು ಅಲ್ಲಿಂದ ಖಾಲಿ ಮಾಡಿಸದಂತೆ ಸರಕಾರದ ಮೇಲೆ ಒತ್ತಡ ತರಲು ಬಲಪಂಥೀಯ, ಫ್ಯಾಸಿಸ್ಟ್ ಶಕ್ತಿಗಳೊಂದಿಗೆ ಕೈಜೋಡಿಸಿರಬಹುದು. ಆದರೆ ಮುಂಬರುವ ದಿನಗಳಲ್ಲಿ ಈ ಫ್ಯಾಸಿಸ್ಟ್ ಶಕ್ತಿಗಳ ಚಳುವಳಿ ಯಾವ ರೂಪ ತಾಳುತ್ತದೆ ಎಂದು ಹೇಳುವುದು ಕಷ್ಟ.

(ಆಧಾರ ಪಿ.ಡಿ)

ಅಮೇರಿಕಾ ಚುನಾವಣೆ ಮತ್ತು ಭಾರತದ ನಿಲುವು

ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಪದವಿಗೆ ನಡೆದ ಚುನಾವಣೆಯಲ್ಲಿ ಜಾರ್ಜ್ ಬುಶ್ ಗೆದ್ದಿದ್ದು, ಅಂತರರಾಷ್ಟ್ರೀಯ ಸಂದರ್ಭಗಳಲ್ಲಿ ಆಕ್ರಮಣಕಾರಿ ಮತ್ತು ಏಕಪಕ್ಷೀಯ ನಿರ್ಧಾರಗಳೇ ಮುಂದುವರೆಯುತ್ತವೆ. ಕಳೆದ 4 ವರ್ಷಗಳಲ್ಲಿ ಇರಾಕ್ ಸಾರ್ವಭೌಮ ದೇಶದ ಮೇಲೆ ಯುದ್ಧವನ್ನು ಸಾರಿ ಅದನ್ನು ಆಕ್ರಮಿಸಿಕೊಂಡಿದೆ. ಭಯೋತ್ಪಾದನೆಯನ್ನು ಎದುರಿಸುವ ನೆಪದಲ್ಲಿ ವಿಶ್ವದಾದ್ಯಂತ ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿದೆ. ಸಮೂಹನಾಶದ ಯಾವುದೇ ಅಸ್ತ್ರಗಳು (WMD) ಇರಾಕ್‌ನಲ್ಲಿ ಸಿಕ್ಕಿಲ್ಲ ಹಾಗೂ ಅಲ್‌ಖೈದಾ ಜತೆ ಅದಕ್ಕಿರುವ ಸಂಬಂಧವೂ ಸಾಬೀತಾಗಿಲ್ಲ. ವಿಶ್ವ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾನೂನುಗಳಿಗೆ ಬುಶ್ ಆಡಳಿತ ಅಗೌರವ ತೋರಿಸಿದೆ.

ಪ್ರಧಾನಿ ನಿಲುವು ಕಳವಳಕಾರಿ

ಇಂದಿನ ಪರಿಸ್ಥಿತಿಯಲ್ಲಿ ಬುಶ್ ಆಡಳಿತವು ಯಾವುದೇ ಅಪಾಯಕಾರಿ ನಿಲುವು ಕೈಗೊಳ್ಳದಂತೆ ತಡೆಯೊಡ್ಡಬೇಕು.

ಭಾರತ ಮತ್ತು ಅಮೇರಿಕಾ ನಡುವಿನ ಭಾಂಧವ್ಯವು ಪರಸ್ಪರ ಹಿತಾಸಕ್ತಿಗೆ ಪೂರಕವಾಗಿ ಸಮಾನಾವಕಾಶದ ಆಧಾರದಲ್ಲಿರಬೇಕು. ನಮ್ಮ ದೇಶದಲ್ಲಿ ನೇರವಾದ ಸಂಬಂಧವುಳ್ಳ, 'ಭಯೋತ್ಪಾದನೆ ವಿರುದ್ಧದ ಹೋರಾಟ'ವು ಜಗತ್ತನ್ನೇ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಬೇಕೆಂದು ಹೊರಟಿರುವ ಅಮೇರಿಕಾದ ಹಿತಾಸಕ್ತಿಗೆ ಸಾಧನವಾಗಿ ಬಳಸುವಂತಾಗಬಾರದು.


ಈ ನಿಟ್ಟಿನಲ್ಲಿ, ಭಾರತದ ಪ್ರಧಾನಮಂತ್ರಿ ಮನಮೋಹನ ಸಿಂಗ್‌ರವರು ಬುಶ್‌ರವರಿಗೆ ಅಭಿನಂದನೆ ಸಲ್ಲಿಸುವ ಸಂದರ್ಭದಲ್ಲಿ ವ್ಯಕ್ತಪಡಿಸಿದ ಅಂಶಗಳ ಕಳವಳಕಾರಿಯಾಗಿದೆ. ಬುಶ್‌ರವರ ಧೃಡ ನಿಲುವು ಮತ್ತು ನಾಯಕತ್ವದಲ್ಲಿ ನಡೆದ ಭಯೋತ್ಪಾದನೆಯ ವಿರುದ್ಧ ಜಾಗತಿಕ ಹೋರಾಟದಿಂದ ಹೇರಳ ಲಾಭ ಆಗಿದೆ ಎಂದು ಹೇಳಿರುವುದು ಸಾಕ್ಷ್ಯಾಧಾರಗಳಿಗೆ ವಿರುದ್ಧವಾಗಿದೆ. ಇರಾಕಿನ ಮೇಲೆ ಆಕ್ರಮಣ ನಡೆಸಿದ ಬುಶ್ ನೀತಿಯಿಂದಾಗಿ ಭಯೋತ್ಪಾದನೆಯು ಮೂಲೋತ್ಪಾದನೆ ಆಯಿತೆ ಅಥವಾ ಬಲಗೊಂಡಿತೇ ಎಂದು ಪ್ರಶ್ನಿಸಬೇಕಾಗಿದೆ.

ಭಾರತದ ಜನತೆ, ಬುಶ್‌ರವರ ಸ್ವಹಿತಾಸಕ್ತಿಯ ಭಯೋತ್ಪಾದನೆ ವಿರುದ್ಧ ಯುದ್ಧ'ಕ್ಕೆ ಯಾವತ್ತೂ ಬೆಂಬಲ ನೀಡಿಲ್ಲ. ಇಂತಹ ಸಂದರ್ಭದಲ್ಲಿ, 'ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ನಾವು ಒಂದಾಗಿರಬೇಕು' ಎಂದು ಹೇಳಿದುದು ಸರಿಯಲ್ಲ.

ಎರಡನೇ ಅವಧಿಗೆ ಬುಶ್ ತನ್ನ ನೀತಿಯನ್ನು ಸ್ಪಷ್ಟಪಡಿಸದೇ ಇರುವ ಮೊದಲೇ, ಭಾರತವು ಸಹಾಯ ಹಸ್ತಕ್ಕೆ ಕೈಚಾಚಿರುವುದು ಹಾಸ್ಯಾಸ್ಪದ. ಪ್ರಧಾನ ಮಂತ್ರಿಯವರ ಸಲಹೆಗಾರರು, ಸಾಮಾನ್ಯ ಕನಿಷ್ಠ ಕಾರ್ಯಕ್ರಮ (CMP)ಯಲ್ಲಿರುವ ಅಂಶಗಳ ಮೇಲೆ ಹೆಚ್ಚು ಒತ್ತು ನೀಡಿದರೆ ಸೂಕ್ತ ಎಂದು ಸಿಪಿಐ(ಎಂ) ಹೇಳಿದೆ.

'ಮೌರ್ಯ' ಟೈಂಪಾಸ್‌ಗೆ ಅಡ್ಡಿಯಿಲ್ಲ

ಎಸ್ ನಾರಾಯಣ ನಿರ್ದೇಶನದ ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸಿರುವ ನಾಲ್ಕನೇ ಚಿತ್ರ 'ಮೌರ್ಯ' ತಾಯಿ-ಮಗನ ಸೆಂಟಿಮೆಂಟ್ ಹೊಂದಿರುವ ಒಂದು ಆಕ್ಷನ್ ಚಿತ್ರ. ಕಥೆಯಲ್ಲೇನು ಹೊಸತನವಾಗಲೀ, ವಿಶೇಷತೆಯಾಗಲಿ ಇಲ್ಲ. ಆದರೆ ನಿರೂಪಣೆಯಲ್ಲಿನ ಚುರುಕತನದಿಂದಾಗಿ ಚಿತ್ರ ನೋಡಿಸಿಕೊಂಡು ಹೋಗುತ್ತದೆ.



ತಾಯಿ(ರೋಜಾ) ಆರೈಕೆಯಲ್ಲಿ ಬೆಳೆದ ಮನು(ಪುನೀತ್) ಒಬ್ಬ ಕಿಕ್ ಬಾಕ್ಸರ್. ತಾಯಿಯೇ ಸರ್ವಸ್ವ. ತಾಯಿಯೆಡೆಗೆ ಯಾರೊಬ್ಬರೂ ಬೆಟ್ಟು ಮಾಡುವುದನ್ನು ಸಹಿಸದ ಮಗ ಅಂತಹವರನ್ನು ಅಟ್ಟಾಡಿಸಿಕೊಂಡು ಚಚ್ಚುತ್ತಾನೆ. ಆತನಿಗೆ ತಂದೆಯ(ದೇವರಾಜ್) ಮೇಲೆ ಅಗಾಧ ಕೋಪ, ಈತ ಬಾಲ್ಯದಲ್ಲಿರುವಾಗಲೇ ತಾಯಿಯನ್ನು ಬಿಟ್ಟು ಹೋಗಿರುತ್ತಾನೆ. ಗುಣದಲ್ಲಿ ಒಳ್ಳೆಯವನೇ ಆದರೂ ಬಾಕ್ಸಿಂಗ್‌ನಲ್ಲಿ ಉನ್ನತ ಮಟ್ಟಕ್ಕೇರಬೇಕೆಂಬ ಆಕಾಂಕ್ಷೆಯಲ್ಲಿ, ಹೆಂಡತಿ ಇದಕ್ಕೆ ಅಡ್ಡಿಯಾಗುತ್ತಾಳೆಂಬ ಕಾರಣಕ್ಕೆ ಹೆಂಡತಿ, ಮಗನನ್ನು ಬಿಟ್ಟು ಹೋಗಿರುತ್ತಾನೆ. ತನ್ನ ಗುರಿ ತಲುಪಿದ ಮೇಲೆ ಮತ್ತೆ ಬಂದಾಗ ಈಕೆ ಸ್ವತಂತ್ರವಾಗಿರಲು ಬಯಸಿ, ಆತನಿಂದ ದೂರವೇ ಉಳಿಯುತ್ತಾಳೆ. ಆತ ಮತ್ತೊಂದು ಮದುವೆಯಾಗಿ ದೂರವಾಗುತ್ತಾನೆ. ಹೃದಯರೋಗಿಯಾದ ತಾಯಿ ಸಾಯುವ ಮೊದಲು ಮನು ಆತನ ತಂದೆ ಜೊತೆ ಇರಬೇಕೆಂದು ಬಯಸುತ್ತಾಳೆ. ಆಕೆಯ ಇಚ್ಛೆಯಂತೆ ಮನಸ್ಸಿನಲ್ಲದ ಮನಸ್ಸಿನಿಂದ ಮತು ತಂದೆಯ ಜೊತೆ ಇರುತ್ತಾನೆ. ಬಾಕ್ಸಿಂಗ್‌ನಲ್ಲಿ ತರಬೇತುದಾರನಾದ ತಂದೆ ತನ್ನ ಗರಡಿಯಲ್ಲಿ ಪಳಗಿದವರು ಪ್ರಶಸ್ತಿ ಗಳಿಸಬೇಕೆಂಬ ಹಂಬಲದಲ್ಲಿರುತ್ತಾನೆ. ಆದನೆ ಆತನ ಶಿಷ್ಯರು ಆತನಿಗೆ ಮೋಸ ಮಾಡಿ ಎದುರಾಳಿ ತಂಡದೊಂದಿಗೆ ಸೇರಿಕೊಳ್ಳುತ್ತಾನೆ. ಆದರೆ ಇಷ್ಟರಲ್ಲಾಗಲೇ ಮನು ತನ್ನ ವರಸೆ ತೋರಿಸಿ ತಾನೇ ಬಾಕ್ಸಿಂಕ್ ಅಖಾಡಕ್ಕೆ ಇಳಿಯುತ್ತಾನೆ. ಮತ್ತು ತಂದೆಯ ಇಚ್ಛೆಯಂತೆ ಕಿಕ್‌ಬಾಕ್ಸಿಂಗ್‌ನಲ್ಲಿ ಪ್ರಶಸ್ತಿ ಗಳಿಸುತ್ತಾನೆ - ಇದಿಷ್ಟು ಕಥೆ. ಇದರ ಮಧ್ಯೆ ಸಾಕಷ್ಟು ತಾಯಿ ಮಗನ ಮತ್ತು ತಂದೆ ಮಗನ ಸಂಬಂಧದ ಕುರಿತಾದ ಭಾವನಾತ್ಮಕ ದೃಶ್ಯಗಳು ಹೇರಳವಾಗಿವೆ. ಪುನೀತ್ ಆಕ್ಷನ್ ದೃಶ್ಯಗಳಲ್ಲಿ ಮಿಂಚಿದ್ದಾರೆ. ರೋಜಾ ಮತ್ತು ದೇವರಾಜ್ ಉತ್ತಮ ಅಭಿನಯ ನೀಡಿದ್ದಾರೆ. ನಾಯಕಿಯಾಗಿ ನಟಿಸಿರುವ ಮೀರಾ ಜಾಸ್ಮಿನ್ ಗಮನ ಸೆಳೆಯುತ್ತಾರೆ.

ಇದರೊಂದಿಗೆ ದೊಡ್ಡಣ್ಣ ಮತ್ತು ಕೋಮಲ್‌ರ ಕಾಮಿಡಿ ಟ್ರಾಕ್ ಒಂದಿದೆ. ಚಿತ್ರದ ಕಥೆಗೆ ಯಾವ ರೀತಿಯಲ್ಲಿಯೂ ಹೊಂದಿಕೊಳ್ಳದ ಈ ದೃಶ್ಯಗಳು ತೀರಾ ಅಗ್ಗದ ಹಾಸ್ಯವಾಗಿದೆ. ಎಸ್. ನಾರಾಯಣ್ ತಮ್ಮ ಅತಿ ಬುದ್ಧಿವಂತಿಕೆಯನ್ನು ಇಲ್ಲಿ ತೂರಿಸಬಾರದಾಗಿತ್ತು!

ಇದು ಒಂದು ರಿಮೇಕ್ ಚಿತ್ರ!. ಆದರೆ ಬೆಟ್ಟು ಮಾಡಿ ತೋರಿಸುವಂತಹ ತೀರಾ ಅಸಭ್ಯವಾದ, ಮುಜುಗರ ತರುವಂತಹ ದೃಶ್ಯಗಳಿಲ್ಲದೆ ಎಲ್ಲರೂ ಕೂತು ನೋಡಬಹುದಾಗಿದೆ. ಈ ಚಿತ್ರದಲ್ಲಿ ಸಂದೇಶವೂ ಏನೂ ಇಲ್ಲ! ಕೇವಲ ಟೈಂ ಪಾಸ್‌ಗಾಗಿಯಾದರೆ ನೋಡಲು ಅಡ್ಡಿಯಿಲ್ಲ.

● ನಕುಲ

ಒಂದು ಹೊಸ ಶಾಲೆ

ಬೇಧಭಾವ ಕೊನೆಗೊಂಡವು, ಶಾಲೆಯೂ ಬದಲಾವಣೆ ಕಂಡಿತು. ಅಗಸನ ಮಗೂ ಶಾಲೆಗೆ ಪ್ರವೇಶಿಸಿತು. ಈ ಚಮತ್ಕಾರ ಹೇಗಾಯಿತು?



ಅಕ್ಟೋಬರ್ ಸಮಾಜವಾದಿ ಮಹಾ ಕ್ರಾಂತಿಯ ಮುನ್ನ ನಗರ ಶಾಲೆಯನ್ನು ಜಿಮ್ನಾಸಿಯಾ ಎಂದು ಕರೆಯುತ್ತಿದ್ದರು.

ಕಿರೀಲ್‌ನ ತಂದೆ ಭೂಮಾಲೀಕನಾಗಿದ್ದ, ಪಾವೆಲ್‌ನ ತಂದೆ ಒಬ್ಬ ಮುಖ್ಯ ತ್ಸಾರಿಸ್ಟ್ ಸರಕಾರದ ಅಧಿಕಾರಿ, ನತಾಲ್ಯಾಳ ತಂದೆ ಒಬ್ಬ ಜನರಲ್, ರೊಸಾಲಿಯಾಳ ತಂದೆ ಕಾರ್ಖಾನೆ ಮಾಲೀಕ. ಹೆಡ್ಡ ಮೊಡೆಸ್ಟ್‌ನ ತಂದೆ ಪೊಲೀಸ್ ಅಧಿಕಾರಿಯಾಗಿದ್ದ.


ಇಲ್ಲಿ ಮತ್ತೊಂದು ಕಡೆ ಪೀಟರ್ ಸೊರೋಕಿನ್ ಇದ್ದ. ಅವನ ಜೀವನ ಅಷ್ಟು ಸುಲಭದ್ದಾಗಿರಲಿಲ್ಲ. ಅವನ ತಾಯಿ ಅಗಸಗಿತ್ತಿಯಾಗಿದ್ದಳು. ಶ್ರೀಮಂತ ಮಕ್ಕಳು ಪೀಟರ್‌ನನ್ನು ನಿಕೃಷ್ಟವಾಗಿ ಕಾಣುತ್ತಿದ್ದರು.

ಪೀಟರ್ ಕಂಡ ಕೂಡಲೇ "ಹಿ-ಹ್ಹೀ" ಎಂದು ನತಾಲ್ಯಾ ಅಣಕಿಸಿ ನಗುತ್ತಿದ್ದಳು.

"ಹಿ-ಹ್ಹೀ" ರೊಸಾಲಿಯಾಳೂ ಅವಳ ಜೊತೆ ಸೇರುತ್ತಿದ್ದಳು.

"ಹೊ-ಹ್ಹೋ" ಕಿರೀಲ್ ಹಾಗೂ ಪಾವೆಲ್ ಮುಖ ಸೊಟ್ಟಗೆ ಮಾಡುತ್ತಿದ್ದರು.

"ನೋಡಿ, ಅಗಸಗಿತ್ತಿ ಬಂದಳು" ಎಂದು ಹೆಡ್ಡ ಮೊಡೆಸ್ಟ್ ಗಟ್ಟಿಯಾಗಿ ನಗುತ್ತ ಗೇಲಿ ಮಾಡುತ್ತಿದ್ದ.



ಒಮ್ಮೆ ಪೀಟರ್‌ಗೆ ತಡೆದುಕೊಳ್ಳಲಾಗಲಿಲ್ಲ. ಮೊಡೆಸ್ಟ್‌ನನ್ನು ಹಿಡಿದು ಚೆನ್ನಾಗಿ ಥಳಿಸಿದ. ಪರಿಣಾಮ ಅವನಿಗೆ ಕೆಟ್ಟದೇ ಆಯಿತು. ಪೀಟರ್ ತನ್ನನ್ನು ಹೊಡೆದನೆಂದು ಮೊಡೆಸ್ಟ್ ತನ್ನ ತಂದೆಗೆ ದೂರು ಹೇಳಿದ. ಆ ಪೋಲಿಸು ಅಧಿಕಾರಿ ಪೀಟರ್‌ನ ತಾಯಿಗೆ ಬಟ್ಟೆಗಳನ್ನು ಒಗೆಯಲು ಕೊಡುವುದನ್ನೇ ನಿಲ್ಲಿಸಿದ.

ಪೀಟರ್‌ಗೆ ಓದಬೇಕೂಂತ ತುಂಬ ಆಸೆ. ಆದರೆ ಓದಲು ಎಲ್ಲಿಗೆ ಹೋಗುವುದು? ಎಷ್ಟೇ ಆಗಲಿ ಅವರ ತಾಯಿ ಕೇವಲ ಒಬ್ಬ ಅಗಸಗಿತ್ತಿ.

ಇತರ ಅನೇಕ ಜನೇಕರಂತೆ ಪೀಟರ್‌ನೂ ಅನಕ್ಷರಸ್ಥನಾಗಿಯೇ ಉಳಿದಿರುತ್ತಿದ್ದ. ಆದರೆ ಆಗ ಬಂದಿತು-ಕ್ರಾಂತಿ!

ಕಾರ್ಖಾನೆ ಮಾಲೀಕರನ್ನೂ ಭೂಮಾಲೀಕರನ್ನೂ ಹೊಡೆದಟ್ಟಲಾಯಿತು.

ಶ್ರೀಮಂತರ ಅಧಿಕಾರ ಕೊನೆಗೊಂಡಿತು.

ನತಾಲ್ಯಾ, ರೊಸಾಲಿಯಾ, ಕಿರೀಲ್, ಪಾವೆಲ್ ಹಾಗೂ ಮೊಡೆಸ್ಟ್ ಕೂಡ ಕಾಣಬರದಾದರು. ಎಲ್ಲಿಗೆ ಹೋದರೋ ಯಾರಿಗೂ ತಿಳಿಯದು.

ಆಗ ಎಲ್ಲ ಬದಲಿತು. ಇನ್ನೆಷ್ಟು ಮಾತ್ರವೂ ಜಿಮ್ನಾಸಿಯಾಗಳಿರಲಿಲ್ಲ. ಬದಲು ಶಾಲೆಗಳು ಬಂದವು. ಈ ಶಾಲೆಗಳಿಗೆ ಬೇರೆಯೇ ರೀತಿಯ ಮಕ್ಕಳು ಬರತೊಡಗಿದರು.

ವಸೀಲಿ ಲೊತಾನೊವ್‌ನ ತಂದೆ ಒಬ್ಬ ಕಾರ್ಮಿಕ. ತೋಲ್ಯನ ತಂದೆ ಒಬ್ಬ ಸೋವಿಯತ್ ಪೌರಸೇವಾ ಕಾರ್ಯಕರ್ತ, ಓಲ್ಗಾಳ ತಂದೆ ಬಡಗಿ, ಪೋಲ್ಯಾಳ ತಂದೆ ಟ್ರಕ್ ಡ್ರೈವರ್ ಹಾಗೂ ಗ್ರೀಷನ ತಂದೆ ಉರಿಗಾಹಿ.

ಮತ್ತೆ ಇಲ್ಲಿ ಪೀಟರ್ ಸೊರೋಕಿನ್‌ನೂ ಇದ್ದಾನೆ. ಅವನೀಗ ಇತರರೆಲ್ಲರೊಂದಿಗೆ ಶಾಲೆ ಸೇರಿಸಿಕೊಂಡಿದ್ದಾನೆ.

ಮಕ್ಕಳು ಗುಂಪುಗುಂಪಾಗಿ ಹೊಸ ಶಾಲೆಗೆ, ಉಚಿತವಾದ ಶಾಲೆಗೆ, ಸೋವಿಯತ್ ಶಾಲೆಗೆ ಹೋಗುತ್ತಿದ್ದಾರೆ.

'ರಶ್ಯನ್‌ಇತಿಹಾಸದ ಪುಟಗಳಿಂದ'

ಧರ್ಮನಿರಪೇಕ್ಷತೆ, ಪ್ರಜಾಸತ್ತಾತ್ಮಕ ಮೌಲ್ಯಗಳ ದೃಢ ಪ್ರತಿಪಾದಕ

ಜಸ್ಟೀಸ್ ಬಾಲಕೃಷ್ಣರ ನೆನಪು

ಈಚೆಗೆ ನಿಧನರಾದ ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣರವರು ಸ್ನೇಹಜೀವಿ. ಜನಪರ ಕಾಳಜಿಯುಳ್ಳ ಅವರು ಸದಾ ಎತ್ತಿಹಿಡಿದದ್ದು ಧರ್ಮನಿರಪೇಕ್ಷತೆಯ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು. ಕೋಮುವಾದದ ವಿರುದ್ಧ ಸತತ ಸೆಣಸಿದ ಅವರ ಬರಹಗಳು, ಶೋಧನಾತ್ಮಕ, ಚಿಕಿತ್ಸಕತನದ ಗಂಭೀರತೆ ಉಳ್ಳದ್ದು..... ಅವರ ಒಡನಾಟದ ಕೆಲ ನೆನಪುಗಳಲ್ಲಿ......

ನವೆಂಬರ್ 1 ರಂದು ನಿವೃತ್ತ ನ್ಯಾಯಮೂರ್ತಿ ಶ್ರೀ ಹೆಚ್.ಜಿ.ಬಾಲಕೃಷ್ಣ ನಿಧನ ಎಂಬ ಸುದ್ದಿ ದೂರದರ್ಶನದಲ್ಲಿ ಬಿತ್ತರವಾಗುತ್ತಿದ್ದಂತೆ ನನಗನಿಸಿತು. ಸಾವು ಬರುವುದಂತೂ ನಿಶ್ಚಿತವೇ ಆದರೆ ಯಾಕಿಷ್ಟುಬೇಗ ಬರುತ್ತದೋ ಎಂದು. ಈ ಮಾತು ಎಲ್ಲರಿಗೂ ಅನ್ವಯಿಸದು ನಿಜ! ಆದರೆ ಜಸ್ಟೀಸ್ ಬಾಲಕೃಷ್ಣರವರೊಂದಿಗೆ ಒಡನಾಟವಿದ್ದ ಜನರಿಗಂತೂ ಈ ಅಭಿಪ್ರಾಯ ಬಂದಿರುತ್ತದೆ. ಕಾರಣವಿಷ್ಟೇ ಅಂತಹ ಸ್ನೇಹಜೀವಿ ಜಸ್ಟೀಸ್ ಬಾಲಕೃಷ್ಣರವರು.

ಅವರು ನಿಧನರಾದಾಗ 75 ವರ್ಷ. ಅದು ಸಾಯುವ ವಯಸ್ಸಲ್ಲ. ಆದರೆ ಒಂದೆರೆಡು ಬಾರಿ ತೀವ್ರ ಅನಾರೋಗ್ಯ ಮತ್ತು ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರಿಂದ ಅವರ ದೇಹ ಸ್ಥಿತಿ ಕುಗ್ಗಿದಂತಾಗಿತ್ತು. ಆದರೆ ಅವರ ಮಾನಸಿಕ ದೃಢತೆ ಮತ್ತು ಚಿಂತನೆಗೆ ಯಾವುದೇ ಭಂಗವಿರಲಿಲ್ಲ. ತಮ್ಮ ಅನಾರೋಗ್ಯದ ನಡುವೆಯೂ ಅವರು ಗಾಢವಾದ ಅಧ್ಯಯನ, ಚಿಂತನೆ ಹಾಗೂ ಬರವಣಿಗೆಯನ್ನು ತಪ್ಪದೇ ಮುಂದುವರೆಸಿದ್ದರು.



ಎಷ್ಟೋ ಬಾರಿ ನಾವು ಅವರನ್ನು ಭೇಟಿ ಯಾದಾಗ ಕನಿಷ್ಟವೆಂದರೂ ಗಂಟೆಯಷ್ಟು ಕಾಲ ಚರ್ಚಿಸುತ್ತಿದ್ದರು. ಅವರ ಹೊಸ ಹೊಸ ಬರವಣಿಗೆಗಳನ್ನು, ಅವರು ಸಂಶೋಧಿಸಿದ ಹಲವಾರು ವಿಷಯಗಳನ್ನು ಕುರಿತು ವಿವರ ನೀಡುತ್ತಿದ್ದರು. ನಿರಂತರ ಅಧ್ಯಯನ ಮತ್ತು ಗಾಢವಾದ ಚಿಂತನೆ ಅವರ ಅವಿಭಾಜ್ಯ ಅಂಗವಾಗಿತ್ತು.

ಬಹುಶಃ ಆಗಿನ್ನೂ ಅಮೆರಿಕ ಇರಾಕ್ ಮೇಲೆ ಆಕ್ರಮಣ ನಡೆಸುವ ಹವಣೆಯಲ್ಲಿತ್ತು. ಅದೇ ಸಮಯದಲ್ಲಿ ನಾನು ಮತ್ತು ಕಾಂ.ಉಮೇಶ್ ಅವರ ಮನೆಯಲ್ಲಿದ್ದವು. ಆಗ ಯಾರೊಂದಿಗೋ ಅವರು ಫೋನ್‌ನಲ್ಲಿ ಹೇಳುತ್ತಿದ್ದರು.... "ನೋಡಿ ಇವತ್ತು ಇರಾಕ್ ಮೇಲೆ ಆಕ್ರಮಣ ಆಗುತ್ತಿದೆ ನಾಳೆ ನಮ್ಮ ಮೇಲೆಯೂ ಅದೇ ರೀತಿ ದಾಳಿ ಬರುವುದು ಗ್ಯಾರಂಟಿ. ಆದರೆ ಅದರ ವಿರುದ್ಧ ಯಾರೂ ಪ್ರತಿಭಟಿಸಿ ಬೀದಿಗೆ ಇನ್ನೂ ಇಳಿಯುತ್ತಿಲ್ಲವಲ್ಲ ಎಂಬ ವ್ಯಥೆಯಾಗುತ್ತಿದೆ" ಎಂದರು. ನಂತರ ಪ್ರತಿಭಟನೆಗಳು ಬೆಳೆದವು. ಹಾಗೆ ಕೇವಲ ಚಿಂತಿಸಿ ಸುಮ್ಮನಾಗುತ್ತಿರಲಿಲ್ಲ. ಸಾಧ್ಯವಾದಷ್ಟು ಕಡೆ ಸ್ವತಃ ಪ್ರತಿಭಟನೆಗಳಲ್ಲಿ ಅವರು ನೇರವಾಗಿ ಪಾಲ್ಗೊಳ್ಳುತ್ತಿದ್ದರು. ವಿಶೇಷವಾಗಿ ಜಾಗತೀಕರಣದ ಧಾಳಿಗಳ ವಿರುದ್ಧ, ಭಾರತದ ಧರ್ಮನಿರಪೇಕ್ಷಿತ ಮೌಲ್ಯಗಳಿಗೆ ಅಪಾಯಗಳು ಎದುರಾದಾಗ ಕೋಮುವಾದದ ವಿರುದ್ಧ ಅತ್ಯಂತ ನಿಷ್ಠುರವಾಗಿ, ಪ್ರಜಾಸತ್ತಾತ್ಮಕ ಮೌಲ್ಯಗಳ ರಕ್ಷಣೆಗಾಗಿ ನಿಂತವರು ಜಸ್ಟೀಸ್ ಬಾಲಕೃಷ್ಣರವರು. ಗುಜರಾತ್‌ನ ಹತ್ಯಾಕಾಂಡದ ನಂತರ ನಮ್ಮಲ್ಲಿ ಸಂಘಟನೆಗಳು ಹಾಗೂ ಪ್ರಗತಿಪರರೆಲ್ಲರೂ ಆಯೋಜಿಸಿದ ಪ್ರತಿಭಟನೆಗಳಲ್ಲಿ, ಹೋರಾಟಗಳಲ್ಲಿ ಸದಾ ಭಾಗವಹಿಸಿದ್ದರು ಮತ್ತು ಅಗತ್ಯ ಸಲಹೆಯೊಂದನ್ನು ನೀಡಿದ್ದರು.

ಗ್ರಾಮೀಣ ಕೃಪಾಂಕ ರದ್ದಾಗಿ ಸಾವಿರಾರು ನೌಕರರು ಅತಂತ್ರರಾದಾಗ, ನಾವು ಸಂಘಟಿಸಿದ್ದ ಎಲ್ಲಾ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿ ನಿಂತರು ಮಾತ್ರವಲ್ಲ ಸರ್ಕಾರದೊಂದಿಗೂ ಈ ವಿಚಾರಕ್ಕೆ ಸಂಬಂಧಿಸಿ ಸಾಕಷ್ಟು ಚರ್ಚಿಸಲು ಪ್ರಯತ್ನ ನಡೆಸಿದರು. ಸಂವಿಧಾನದ ಚೌಕಟ್ಟಿನಲ್ಲಿಯೇ ಗ್ರಾಮೀಣ ಕೃಪಾಂಕ ನೌಕರರನ್ನು ರಕ್ಷಿಸಲು ಅಗತ್ಯವಿರುವ ತಿದ್ದುಪಡಿಗೆ ಸೂಕ್ತ ಪರ್ಯಾಯವನ್ನು ಸೂಚಿಸಿದರು.

1923 ರಲ್ಲಿ ಜನಿಸಿದ ಶ್ರೀ ಬಾಲಕೃಷ್ಣರವರು 1952 ರಲ್ಲಿ ಕಾನೂನು ಪದವಿಯಲ್ಲಿ ಮೊದಲ ರ್‍ಯಾಂಕ್ ಹಾಗೂ ಚಿನ್ನದ ಪದಕ ಪಡೆಯುವುದರೊಂದಿಗೆ ವಕೀಲಿ ವೃತ್ತಿ ಆರಂಭಿಸಿದ್ದರು. 1987 ರಿಂದ 1991 ರವರೆಗೂ ರಾಜ್ಯ ಹೈಕೋರ್ಟಿನ ನ್ಯಾಯಾಧೀಶರಾಗಿ ಹಲವಾರು ಮಹತ್ವದ ತೀರ್ಪುಗಳನ್ನು ನೀಡಿದ್ದಾರೆ. ಮತ್ತು 'ಕಾನೂನು ಹಾಗೂ ನ್ಯಾಯಾಲಯದಲ್ಲಿ ಹೊಸ ದೃಷ್ಟಿಕೋನ' ಭಾರತದಲ್ಲಿ ಜಾತ್ಯತೀತತೆ-ಧರ್ಮ ಮತ್ತು ರಾಜಕಾರಣ ಭಾರತದ ಹಿಂದುತ್ವ ಭಾರತದ ಹಿಂದುತ್ವ ಕೋಮುವಾದಿಗಳಿಗೂ ಜರ್ಮನಿ ಫ್ಯಾಸಿಸ್ಟರಿಗೆ ಇದ್ದ ಸಂಬಂಧ ಮತ್ತು ಹಲವಾರು ವಿಚಾರಗಳಿಗೆ ಸಂಬಂಧಿಸಿ ಬೆಳಕು ಚೆಲ್ಲುವ ಸಂಶೋಧನೆಗಳನ್ನು ಜಸ್ಟೀಸ್ ಬಾಲಕೃಷ್ಣರವರು ನಡೆಸಿದ್ದಾರೆ.

ಕೃಷ್ಣ-ಕಾವೇರಿ ನೀರು ವಿವಾದಕ್ಕೆ ಸಂಬಂಧಿಸಿ ರಾಜ್ಯ ಸರ್ಕಾರಕ್ಕೆ ಸಲಹೆಗಾರರಾಗಿ, ಹಲವಾರು ಆಯೋಗಗಳ ಸದಸ್ಯರಾಗಿ ಕೆಲಸ ಮಾಡಿರುವ ಅವರು ಇತ್ತೀಚೆಗೆ ಮೀಸಲಾತಿ ವರ್ಗೀಕರಣಕ್ಕಾಗಿ ರಾಜ್ಯ ಸರ್ಕಾರ ರಚಿಸಿದ ಏಕಸದಸ್ಯ ಆಯೋಗದ ಮುಖ್ಯಸ್ಥರು ಆಗಿದ್ದರು. ಮತ್ತೊಂದು ವಿಶಿಷ್ಟ ಸಂತಸದ ಸಂಗತಿ ಎಂದರೆ 1953 ರಲ್ಲಿ ಬಾಲಕೃಷ್ಣರವರು ತಮ್ಮ ದೇಹ ದಾರ್ಢ್ಯದಿಂದ 'ಮಿಸ್ಟರ್ ಬೆಂಗಳೂರು' ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

ಜಸ್ಟೀಸ್ ಬಾಲಕೃಷ್ಣರವರು ಅತ್ಯಂತ ಸ್ನೇಹಜೀವಿ, ಅಷ್ಟೇ ನಿಷ್ಠುರವಾದಿ ಕೂಡ! ಪ್ರಗತಿಪರ ಚಳುವಳಿಗೆ ಅವರ ಚಿಂತನೆ, ತುಡಿತ, ಸಲಹೆ-ಪ್ರೋತ್ಸಾಹಗಳು ಅನಿವಾರ್ಯವಾಗಿದ್ದ ಈ ಸಂದರ್ಭದಲ್ಲೇ ಅವರ ಅಗಲುವಿಕೆ ಅತ್ಯಂತ ನೋವನ್ನುಂಟು ಮಾಡಿದೆ. ಸಿಪಿಐ(ಎಂ), ಡಿವೈಎಫ್ಐ, ಜೆಎಂಎಸ್‌ನ ರಾಜ್ಯ ನಾಯಕರು ಮನೆಗೆ ತೆರಳಿ ಸಂತಾಪ ಸೂಚಿಸಿದರು.

● ಕೆ.ಮಹಾಂತೇಶ್

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH